ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು:– ಮಾನ್ಯ ಶಿವಕುಮಾರ್‌ರವರೆ, ನೀವು ಮತ್ತು ಮಾನ್ಯ ರಮೇಶ್ ಕುಮಾರ್‌ರವರು ಇಬ್ಬರೂ ಸೇರಿಕೊಂಡು, ಇಲ್ಲಿ ಗ್ಯಾಲರಿಯಲ್ಲಿ ನಿಂತುಕೊಂಡು, 'Operation Success' ಎಂದು 8 ಜನ ಶಾಸಕರನ್ನು ಕರೆದುಕೊಂಡು ಹೋಗಿ, cross voting ಮಾಡಿಸಿ, ಅವರನ್ನೆಲ್ಲಾ ನಿಮ್ಮ ಕಡೆಗೆ ತೆಗೆದುಕೊಂಡಿದ್ದಿರಲ್ಲಾ, ಅದನ್ನೆಲ್ಲಾ ಆಗಲೇ ಮರೆತಿರಾ?

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನೇನು ಹೇಳಲಿಕ್ಕೆ ಹೊರಟಿದ್ದೆ ಎಂದರೆ, ನೀವು ಯಾರನ್ನು 'Vote Bank' ಎಂದು ತಿಳಿದುಕೊಂಡಿದ್ದೀರೋ, ಅವರು ಜಾಗೃತರಾಗಬಾರದು, ಶಿಕ್ಷಣ ಪಡೆಯಬಾರದು, ಇದರಿಂದ ನಾಳೆ ಹೋದಾಗ ಇದನ್ನು ಕೇಳುವಂತಹ ಶಕ್ತಿ ಬರುತ್ತದೆ ಎಂದು ಅವರನ್ನು ಹಾಗೇ ಇಟ್ಟಿದ್ದಿರಿ. ನಾವು ಅವರನ್ನು ಬಡಿದೆಬ್ಬಿಸುವಂತಹ ಪ್ರಯತ್ನ ಮಾಡಿದ್ದೇವೆ. ಇಷ್ಟು ವರ್ಷ ನಿಮ್ಮ ಮಕ್ಕಳು ವಿದ್ಯಾವಂತರಾಗದಿರುವುದಕ್ಕೆ ಇವರು ಕಾರಣ, ತಾಂಡಾದಲ್ಲಿ ಮೂಲ ಸವಲತ್ತುಗಳಿಲ್ಲದಿರುವ ಪರಿಸ್ಥಿತಿಗೆ ಇವರಪ್ಪ ಕಾರಣ ಎಂದು ಹೇಳಿ, ಹೇಳಿ, ಈಗ ಅವರು ಜಾಗೃತರಾಗಿ ನಮ್ಮ ಜೊತೆಗೆ ಬರುತ್ತಿದ್ದಾರೆ. ನಾನು ಬರೇ ಕಥೆಯನ್ನು

ಹೇಳಲಿಲ್ಲ. ಭಗವಂತ ಮತ್ತು ನಿಮ್ಮಂತಹವರ ಆಶೀರ್ವಾದದಿಂದ ಇಲ್ಲಿ ಅವಕಾಶ ಸಿಕ್ಕಾಗ, ಆ ಸಮೂಹಕ್ಕೆ ನ್ಯಾಯ ಒದಗಿಸಿಕೊಡುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಒಂದೇ ಸಾರಿ 500 ಬಂಜಾರ ತಾಂಡಾಗಳ ಅಭಿವೃದ್ಧಿಗೆ ನಾನು ಹಣ ಕೊಡುವಂತಹ ಪ್ರಯತ್ನ ಮಾಡಿದ್ದೇನೆ. ಮಾನ್ಯ ಶಿವಕುಮಾರ್‌ರವರೆ, ನಾನು ಹೇಳುವುದು ಏನೆಂದರೆ, ಇನ್ನಾದರೂ ಯಡಿಯೂರಪ್ಪ ಯಾವ ದಿಕ್ಕಿನಲ್ಲಿ ಯೋಚನೆ ಮಾಡುತ್ತಿದ್ದಾನೆಂದು ನೀವು ಅರ್ಥ ಮಾಡಿಕೊಳ್ಳಬೇಕು. ನಾನು ದೇವರಾಣೆ, ಪ್ರಮಾಣ ಪೂರ್ವಕವಾಗಿ ಒಂದು ಮಾತನ್ನು ಹೇಳುತ್ತಿದ್ದೇನೆ. ಇದಕ್ಕೆ vote ಕಾರಣವಲ್ಲ. Vote ಇದ್ದೇ ಇರುತ್ತದೆ ಬಿಡಿ. ನಾವೇನೂ ಸನ್ಯಾಸಿಗಳಲ್ಲ. ಒಳ್ಳೆಯ ಕೆಲಸ ಮಾಡಿದರೆ, ಅವರನ್ನು ಅಭಿವೃದ್ಧಿಯತ್ತ ಎತ್ತಿಕೊಂಡು ಹೋದರೆ, ಆ ಜನ ನಮ್ಮ ಜೊತೆಗೆ ಬರುತ್ತಾರೆ. ನಾಯಕರ ಬಗ್ಗೆ ನಮಗೆ ವಿಶ್ವಾಸವಿಲ್ಲ. You are correct. ನೀವು ಯಾರನ್ನೋ ಬೆಳೆಸಿದ್ದೀರಿ, ನಾವು ಯಾರನ್ನೋ ಬೆಳೆಸಿದ್ದೇವೆ. ಆ ನಾಯಕ ಬಂದಾಕ್ಷಣ ಪರಿವರ್ತನೆ ಆಗುವುದಿಲ್ಲ ಸ್ವಾಮಿ. ಆ ಕಾಲ ಹೋಯಿತು. ಅದು ನಿಮ್ಮ ಕಾಲದಲ್ಲಿತ್ತು. ಸ್ವಾಮಿ, ನಿಮ್ಮದು ಕಡಿಮೆ ಸಾಧನೆಯೇನಲ್ಲ. ಈ ಕಡೆಗೆ ನೀವು ಯೋಚನೆ ಮಾಡಬೇಕು. ದೆಹಲಿಗೆ ಹೋಗಿ ಒಂದು 'ಬಿ' ಫಾರಂ ತಂದರೆ, ನಮ್ಮ ಮಾಧ್ಯಮದ ಸ್ನೇಹಿತರಿದ್ದಾರೆ, ನೂರಕ್ಕೆ ತೊಂಭತ್ತು ಭಾಗ ಆತ ಎಂ.ಎಲ್.ಎ. ಆದಂತೆಯೇ ಸರಿ. ಅಷ್ಟೊಂದು ನಿಮ್ಮ ಪರವಾಗಿದ್ದರು ಜನ. ನಮ್ಮನ್ನು ಕೇಳುವವರು ಯಾರಿದ್ದರು ಸ್ವಾಮಿ? ನಾವು ಹೋದರೆ ಅಟ್ಟಿಸಿಕೊಂಡು ಬರುತ್ತಿದ್ದರು. ಅಂತಹ ಪರಿಸ್ಥಿತಿ ಇತ್ತು ತಾನೇ? ಅಂತಹ ಮುಖಂಡರ ಮೇಲೆ ನಾವು ವಿಶ್ವಾಸ ಇಟ್ಟೇ ಇಲ್ಲ. ಯಾರು ಅವತ್ತಿನ ವಾತಾವರಣದಲ್ಲಿ ಕಾಂಗ್ರೆಸ್ ಹೆಸರಿನಲ್ಲಿ ಆ ಟೈಮ್‌ನಲ್ಲಿ ಗೆದ್ದು ಬಂದರು, ಆ ತರಹದವರು ಖಂಡಿತಾ, ಅಕಸ್ಮಾತ್ ತಾತ್ಕಾಲಿಕವಾಗಿ ಯಾರೋ ಕೆಲವರು ಬಂದಿದ್ದರೂ, ಅವರು ಇಲ್ಲಿಯ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು, realize ಮಾಡಿಕೊಳ್ಳದಿದ್ದರೆ, ಅವರು ಅಲ್ಲಿಯೂ ಉಳಿಯುವುದಿಲ್ಲ, ಇಲ್ಲಿಯೂ ಉಳಿಯುವುದಿಲ್ಲ. ಆ ವಿಷಯ ಬೇರೆ. ಆದರೆ, ನಾವು ಮುಖಂಡರನ್ನು ನಂಬಿಕೊಂಡಿಲ್ಲ. ಆ ಸಮೂಹವನ್ನು ಬಡಿದೆಬ್ಬಿಸುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದೇವೆ. ಇಷ್ಟು ಮಾತ್ರ ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದಕ್ಕಿಂತ ಹೆಚ್ಚು ಹೇಳುವುದಿಲ್ಲ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಮುಖ್ಯಮಂತ್ರಿಗಳೆ, ಕಾಂಗ್ರೆಸ್ ಅಧಿಕಾರ ಇದ್ದಂತಹ ಸಂದರ್ಭದಲ್ಲಿ Scheduled Caste ಎಂದರೆ ಎಲ್ಲರನ್ನೂ ಸರಿ ಸಮಾನವಾಗಿ ನೋಡತಕ್ಕಂಥ ಒಂದು ಪರಿಪಾಠವನ್ನು ಹಾಕಿಕೊಂಡು ಬಂದಿತ್ತು. ಆದರೆ ನೀವು ಎಲ್ಲೋ ಒಂದು ಕಡೆ, ಎಡವಿದ್ದೀರಿ. ದಯಮಾಡಿ ಸ್ವಲ್ಪ ಅರ್ಥ ಮಾಡಿಕೊಳ್ಳಿ. [ಗೊಂದಲ] ಇವತ್ತು ನೀವು SCಯಲ್ಲಿ Left ಅನ್ನಬಹುದು, Right

ಅನ್ನಬಹುದು. ಅವರು ಅಸ್ಪೃಶ್ಯರು ಎಂಬುದನ್ನೂ ಕೂಡ ಮರೆಯಬಾರದು. ಅಸ್ಪೃಶ್ಯರು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ, ವಂಚನೆಗೆ ಒಳಗಾಗಿದ್ದಾರೆ. ಅವರಿಗೆ ಆದ್ಯತೆಯನ್ನು ಕೂಡ ಕೊಟ್ಟಿದ್ದೇವೆ. ಸಂವಿಧಾನದಲ್ಲಿ. ಇರತಕ್ಕಂಥ ಅವಕಾಶವನ್ನು ಕೊಟ್ಟಿದ್ದೇವೆ. ಆದರೆ, ನೀವು ಎಲ್ಲೋ ಒಂದುಕಡೆ ಅವರನ್ನು ಮತ್ತು ಬೇರೆಯವರನ್ನು ಸರಿ ಸಮಾನವಾಗಿ ನೋಡುತ್ತಿಲ್ಲ. ತಾಂಡಾಗಳನ್ನು ಪರಿವರ್ತನೆ ಮಾಡತಕ್ಕಂಥದ್ದು ಹೊಸ ಯೋಜನೆ ಏನಲ್ಲ. ನಾವು ಮಾಡಿದ್ದನ್ನೇ ನೀವು ಮುಂದುವರೆಸುತ್ತಿದ್ದೀರಿ. ಅದನ್ನು ಬಿಟ್ಟರೆ ಬೇರೆ ಏನೂ ಇಲ್ಲ. ಆದರೆ, ಎಲ್ಲೋ ಒಂದು ಕಡೆ ನಿಮ್ಮ ಮಾತಿನಲ್ಲಿ ಏನು ಅರ್ಥವಾಗುತ್ತಿದೆ ಎಂದರೆ, ಅವರನ್ನು ಓಲೈಸತಕ್ಕಂಥ ರೀತಿಯಲ್ಲಿ, ಒಬ್ಬರ ಮೇಲೆ ಒಬ್ಬರನ್ನು ಎತ್ತಿ ಕಟ್ಟತಕ್ಕಂಥ ಕೆಲಸ ಮಾಡತಕ್ಕದ್ದು ಸರಿಯಲ್ಲ. ನಿಮ್ಮ ಮಾತಿನ ಅರ್ಥ ಏನೆಂದರೆ, ಅಲ್ಲಿ SCಯಲ್ಲಿ ಇರತಕ್ಕಂಥವರನ್ನು ಅಥವಾ ಅಸ್ಪೃಶ್ಯರನ್ನು ಇವತ್ತು ಕಾಂಗ್ರೆಸ್ ಹೆಚ್ಚು ಓಲೈಸಿತು, ನಾವು ಓಲೈಸಿಲ್ಲ ಎನ್ನತಕ್ಕಂಥ ಅರ್ಥವೇ?

[ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು]

ಶ್ರೀ ಬಿ.ಎಸ್.ಯಡಿಯೂರಪ್ಪ:– ನಾನೇನು ಹೇಳುತ್ತೇನೆಂದರೆ ನೀವು ಈ ಸಮುದಾಯದ ಅಭಿವೃದ್ಧಿ ಬಗ್ಗೆ ಯೋಚನೆ ಮಾಡಲಿಲ್ಲ. ಅವರು 'Vote Bank' ಆಗಿ ನಮ್ಮ ಹತ್ತಿರ ಇರುತ್ತಾರೆ ಎಂದುಕೊಂಡಿದ್ದಿರಿ. ಅವರು ಜಾಗೃತರಾಗುತ್ತಾರೆ ಎನ್ನುವುದು ಗೊತ್ತಿದ್ದರೆ, ಖಂಡಿತವಾಗಿಯೂ ನಾನು ಮಾಡುವಂತಹ ಕೆಲಸವನ್ನು ನೀವೇ ಮುಂಚೆ ಮಾಡುತ್ತಿದ್ದಿರಿ. ನೀವು ಯಾವುದೋ ಭ್ರಮಾಲೋಕದಲ್ಲಿದ್ದಿರಿ. ನಾನು ಹಳ್ಳಿಯಲ್ಲೇ ಬೆಳೆದವನು. ನೀವು ಹಳ್ಳಿಯಲ್ಲಿ ಬೆಳೆದರೂ, ನಗರಕ್ಕೆ ಹೆಚ್ಚು ಓಡಾಡುತ್ತೀರಿ. ಇವತ್ತೂ ನಾನು ಹಳ್ಳಿಯವನೇ. ನನ್ನ ಸಂಸ್ಕೃತಿ, ನನ್ನ ಒಡನಾಟ, ನನ್ನ ವ್ಯವಹಾರಗಳೆಲ್ಲಾ ಹಳ್ಳಿಯಲ್ಲೇ. ಹೀಗಾಗಿ ಒಂದಷ್ಟು ಕೈ ಹಾಕಿ ರಿಪೇರಿ ಮಾಡಲಿಕ್ಕೆ ಸಾಧ್ಯವೇ? ಎಂದು ನಾನು ನೋಡುತ್ತಿದ್ದೇನೆ. ಭಗವಂತನ ಇಚ್ಛೆ ಏನಿದೆಯೋ ಗೊತ್ತಿಲ್ಲ. ಅಧಿಕಾರ ಇದ್ದಾಗ ಅದು ನನಗೆ ಸಾಧ್ಯವಾದರೆ ಸಮಾಧಾನವಾಗುತ್ತದೆ. ಈ ಅಧಿಕಾರವೇನು ಶಾಶ್ವತವಲ್ಲ. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದಾಗ ಅವರ ಕಷ್ಟ ಸುಖ ವಿಚಾರಿಸಲಿಕ್ಕೆ ಹಳ್ಳಿಗಳಿಗೆ ಹೋಗುತ್ತಿದ್ದರು. ಅದರಲ್ಲಿ ಅವರು ಎಷ್ಟರಮಟ್ಟಿಗೆ ಯಶಸ್ವಿಯಾದರು, ಬಿಟ್ಟರು ಎಂಬುದು ಬೇರೆ ವಿಚಾರ. ಆ ದಿಕ್ಕಿನಲ್ಲಿ ಅವರು ಪ್ರಯತ್ನವೊಂದನ್ನು ಮಾಡಿದ್ದರು. ಅದನ್ನು ಹಿಂದಿನವರು ಯಾರೂ ಮಾಡಿರಲಿಲ್ಲ. ಆದರೆ ಯಡಿಯೂರಪ್ಪ ಬಂದ ಮೇಲೆ, 'ಜನ ಸ್ಪಂದನ' ಸಭೆಗಳನ್ನು ಮಾಡುವುದಕ್ಕೆ ಶುರು ಮಾಡಿದೆವು. 'ಜನತಾ ದರ್ಶನ' ಎಂದು ಇಲ್ಲಿಗೆ ಬರುವುದು ಬೇಡ, ನಾವೇ ಅವರಲ್ಲಿಗೆ ಹೋಗೋಣ ಎಂದು ಅದನ್ನು ಮಾಡಿದೆವು. ಆ ಬಗ್ಗೆ ನೀವು ಹೇಳಿದಿರಿ.

ಮಾನ್ಯ ಕುಮಾರಸ್ವಾಮಿಯವರು ಸೇರಿ ಅದನ್ನು ಟೀಕೆ ಮಾಡಿದರು. BPL cards ಸಿಕ್ಕಿಲ್ಲ, ಮನೆ ಸಿಗುತ್ತಿಲ್ಲವೆಂದು ತುಂಬಾ ಜನ ಬರುತ್ತಿದ್ದಾರೆ ಎಂದಿರಿ. 'ಹೌದು ಸ್ವಾಮಿ', 100% you are right. ಅದಕ್ಕೆ you are responsible, ಯಡಿಯೂರಪ್ಪ ಅಲ್ಲ. ಇದನ್ನು ತಿಳಿದುಕೊಳ್ಳುವುದಕ್ಕಾಗಿಯೇ ನಾವು 'ಜನ ಸ್ಪಂದನ' ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಯಾರಿಗೆ BPL card ಸಿಕ್ಕಿಲ್ಲ, ಯಾರಿಗೆ ಸೈಟ್ ಸಿಕ್ಕಿಲ್ಲ, ಯಾರಿಗೆ ಮನೆ ಸಿಕ್ಕಿಲ್ಲ, ಯಾರು ಬಂದಿದ್ದನ್ನೆಲ್ಲಾ mis-use ಮಾಡುತ್ತಿದ್ದಾರೆ, ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ಚುನಾಯಿತ ಪ್ರತಿನಿಧಿಗಳಿಗೆ ಅವಕಾಶ ಇರಲಿಲ್ಲ, ಆದ್ದರಿಂದ ಆ ದಿಕ್ಕಿನಲ್ಲಿ ನಾನೊಂದು ಪ್ರಯತ್ನವನ್ನು ಮಾಡಿದೆ. 60 ವರ್ಷಗಳ ನಂತರ KPSCಗೆ ಒಬ್ಬ ಬಂಜಾರ ಸಮಾಜದವರನ್ನು ಈಗ ನೇಮಕ ಮಾಡಿದ್ದೇನೆ. ಮಾನ್ಯ ಬಾಲಕೃಷ್ಣರವರೆ, ಇದರಲ್ಲಿ ನನ್ನ ಸ್ವಾರ್ಥ ಏನಿದೆ? ಆ ಸಮುದಾಯವನ್ನು ಹಿಂದಿನವರು ಮರೆತಿದ್ದರು. ನಾನು ಜವಾಬ್ದಾರಿ ತೆಗೆದುಕೊಂಡು ...

ಶ್ರೀ ಹೆಚ್.ಸಿ.ಬಾಲಕೃಷ್ಣ:– ಕೇವಲ ತಿಳಿದುಕೊಳ್ಳುವಂತಹ ಪ್ರಯತ್ನ ಮಾಡುತ್ತಿರಬೇಡಿ. ಅನುಷ್ಠಾನವಾಗುವಂತಹ ಪ್ರಯತ್ನ ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಆಯಿತಪ್ಪ, ನೀನು ಹೇಗಾದರೂ ತಿಳಿದುಕೋ.

ಶ್ರೀ ಹೆಚ್.ಸಿ.ಬಾಲಕೃಷ್ಣ:– ನೀವು ಬರೇ ತಿಳಿದುಕೊಳ್ಳುವುದರಲ್ಲೇ ಇದ್ದರೆ, ಬಹಳ ಕಷ್ಟವಾಗುತ್ತದೆ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಧ್ಯದಲ್ಲಿ ಈ ರೀತಿ ಎದ್ದು ಮಾತನಾಡಿದರೆ ಹೇಗೆ? ನಾನು ಇಲ್ಲಿ reply ಕೊಡುತ್ತಿದ್ದೇನೆ. ನೀವು ಮಾತನಾಡಬೇಕಾದರೆ ನಾನು ಮಧ್ಯೆ ಮಾತನಾಡಿಲ್ಲ. No, Sir, please... This is not correct.

[ಗೊಂದಲ]

ದಯವಿಟ್ಟು ನಾನು ಯೀಲ್ಡ್ ಆಗಿಲ್ಲ. ಮಧ್ಯೆ ಮಾತನಾಡಬೇಡಿ. ಉತ್ತರ ಕೊಡಲು ಬಿಡಿ.

[ಗೊಂದಲ]

ಶ್ರೀ ಹೆಚ್.ಸಿ.ಬಾಲಕೃಷ್ಣ:– ನೀವು ಸಿ.ಎಂ. ಆಗಿದ್ದಾಗಲೂ ಇನ್ನೂ ತಿಳಿದುಕೊಳ್ಳುವಂತಹ ಪ್ರಯತ್ನ ಮಾಡುತ್ತಿದ್ದರೆ ಹೇಗೆ? ಅನುಷ್ಠಾನಗೊಳಿಸುವಂತಹ ಪ್ರಯತ್ನವನ್ನು ಮಾಡಿ.

[ಗೊಂದಲ]

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ ಮೇಲೆ clarification ಕೇಳಿ.

[ಗೊಂದಲ]

ಶ್ರೀ ಆರ್.ಧ್ರುವನಾರಾಯಣ್:– ಮಾನ್ಯ ಅಧ್ಯಕ್ಷರೆ, point of order.

[ಗೊಂದಲ]

ಅಧ್ಯಕ್ಷರು:– ಇಲ್ಲಿ ಯಾವುದೂ point of order ಬರುವುದಿಲ್ಲ. Please, ಕುಳಿತುಕೊಳ್ಳಿ. ಆಮೇಲೆ ಬೇಕಾದರೆ ನೀವು ಸ್ಪಷ್ಟೀಕರಣ ಕೇಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಧ್ರುವನಾರಾಯಣರವರೆ, ನಿಮಗ್ಯಾಕೆ ಸಿಟ್ಟು ಬರುತ್ತಿದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸತ್ಯ ಹೇಳಿದರೆ ನಿಮಗ್ಯಾಕೆ ಸಿಟ್ಟು ಬರುತ್ತದೆ? ಆಮೇಲೆ, clarification ಬೇಕಾದರೆ ಕೇಳಿ. ಈಗ ನನಗೆ ಉತ್ತರ ಕೊಡಲು ಬಿಡಿ.

[ಗೊಂದಲ]

ಅಧ್ಯಕ್ಷರು:– ಉತ್ತರವಾದ ಮೇಲೆ clarification ಕೇಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಈ ರಾಜ್ಯದ ಜನತೆಗೆ ತಪ್ಪು ಮಾಹಿತಿಯನ್ನು ಕೊಡುವಂತಹ ಪ್ರಯತ್ನವೊಂದನ್ನು ನೀವು ಮಾಡುತ್ತಿದ್ದೀರಿ.

[ಗೊಂದಲ]

ಅಧ್ಯಕ್ಷರು:– ಮಾನ್ಯ ಮಹದೇವಪ್ಪನವರೆ, ಆಮೇಲೆ ನೀವು ಸ್ಪಷ್ಟೀಕರಣ ಕೇಳಿ. ಮೊದಲು ಅವರು ಉತ್ತರ complete ಮಾಡಲಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ನೋಡಿ, ರಾಜಕಾರಣ ಮಾತನಾಡುವುದಾದರೆ, ನಾನು ಮಾತನಾಡಲಿಕ್ಕೆ ಸಿದ್ಧನಿದ್ದೇನೆ. ಇವತ್ತು ಕೇಂದ್ರ ಸರ್ಕಾರ ಬಜೆಟ್ ಅನ್ನು ಮಂಡನೆ ಮಾಡಿತು. ಬಜೆಟ್ ಅನ್ನು ಮಂಡನೆ ಮಾಡಿದ ಮೇಲೆ, ಇನ್ನೊಂದು ಸರ್ಕಾರ ಬರುವುದಕ್ಕೆ ಚುನಾವಣೆ ಘೋಷಣೆ ಮಾಡುವಂತಹ ಕಾಲದಲ್ಲಿ, 30 ಸಾವಿರ ಕೋಟಿ ರೂ.ಗಳ concessions ಘೋಷಣೆ ಮಾಡಿಲ್ಲವೇ? Everyday ಪತ್ರಿಕೆಯಲ್ಲಿ full page advertisements ಬರುತ್ತಿಲ್ಲವೇ? ಮಾನ್ಯ

LH. V.S. H.S

ಕುಮಾರಸ್ವಾಮಿಯವರು ಜಾಹೀರಾತು ನೀಡುತ್ತಿರುವ ಬಗ್ಗೆ ಪ್ರಶ್ನೆ ಮಾಡಿದರು. ನಿಮ್ಮ ಅಂಕಿ ಅಂಶಗಳನ್ನು ನಾನು ಕೊಡಲೇ? ಈಗ ಉದಾಹರಣೆಗೆ ಹೇಳುವುದಾದರೆ,...

[ಗೊಂದಲ]

ಅಧ್ಯಕ್ಷರು:– ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಲಿ. ನಂತರ ಸ್ಪಷ್ಟೀಕರಣ ಕೇಳುವಿರಂತೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಕುಮಾರಸ್ವಾಮಿಯವರು ಜಾಹೀರಾತಿನ ಬಗ್ಗೆ ಪ್ರಸ್ತಾಪ ಮಾಡಿದರು. ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಜಾಹೀರಾತಿಗೆ 20 ತಿಂಗಳಿನಲ್ಲಿ ಅವರು 18 ಕೋಟಿ 79 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದರು. ಈ ಯಡಿಯೂರಪ್ಪ ಜನವರಿ ಅಂತ್ಯದವರೆಗೆ 9 ತಿಂಗಳಿಗೆ 7 ಕೋಟಿ 36 ಲಕ್ಷ ರೂ.ಗಳನ್ನು ಮಾತ್ರ ಖರ್ಚು ಮಾಡಿದ್ದಾನೆ. [ಗೊಂದಲ] ಇದೇನು ಸಾರ್ ಇದು? ಹೀಗಾದರೆ ನಾನು ಉತ್ತರ ಕೊಡುವುದಿಲ್ಲ, ಕುಳಿತುಕೊಂಡು ಬಿಡುತ್ತೇನೆ.

[ಗೊಂದಲ]

ಅಧ್ಯಕ್ಷರು:– ಮಾನ್ಯ ರಮಾನಾಥ ರೈರವರು ಮತ್ತು ಇತರ ಸದಸ್ಯರು ದಯವಿಟ್ಟು ಕುಳಿತುಕೊಳ್ಳಿ.

[ಗೊಂದಲ]

ಶ್ರೀ ಬಿ.ರಮಾನಾಥ ರೈ:– ನಾನು 5 ಬಾರಿ ಎಂ.ಎಲ್.ಎ.ಯಾಗಿ ಆಯ್ಕೆಯಾಗಿ ಬಂದಿದ್ದೇನೆ. ನಾನೇನೂ ಹೊಸದಾಗಿ ಆಯ್ಕೆಯಾಗಿ ಭಂದಿಲ್ಲ. ಹೇಗೆ ಮತ್ತು ಯಾವಾಗ ಮಾತನಾಡಬೇಕೆಂಬುದು ನನಗೆ ಗೊತ್ತಿದೆ.

[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ:– ಆಡಳಿತ ಪಕ್ಷದ ಕಡೆ ಇರುವ ಸದಸ್ಯರು ಅವರ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು, ಅವರು ಏನು ಹೇಳುತ್ತಿದ್ದಾರೆ, ನಾವೇನಾದರೂ ಪ್ರಶ್ನೆಯನ್ನು ಕೇಳಿದರೆ, ಅದು ತಿರುಗುಬಾಣವಾಗಬಾರದು ಅಷ್ಟೆ..[ಗೊಂದಲ]

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಮುಖ್ಯಮಂತ್ರಿಗಳು ಉತ್ತರ ನೀಡುತ್ತಿದ್ದಾರೆ, ಅವರಿಗೆ ಗೌರವ ಕೊಡಬೇಕು, ಆದರೆ ಏನೊ ಅಪ್ಪಿತಪ್ಪಿ ಕೆಲವು ವಿಚಾರಗಳಿಗೆ, ಅವರು[ರಮಾನಾಥ ರೈ] 5 ಸಾರಿ ಗೆದ್ದಿದ್ದಾರೆ, ನಿಂತುಕೊಳ್ಳುತ್ತಿರಲಿಲ್ಲ, ನಿಂತುಕೊಂಡರು, ನಿಂತುಕೊಂಡಾಕ್ಷಣ, ವೈಯಕ್ತಿಕ ಚರಿತ್ರೆ ಎಂದೆಲ್ಲಾ ಮಾತನಾಡಿದರೆ ಹೇಗೆ?[ಗೊಂದಲ]

ಶ್ರೀ ರೇಣುಕಾಚಾರ್ಯ: ಅವರ ವೈಯಕ್ತಿಕ ಚರಿತ್ರೆ ಬಗ್ಗೆ ಮಾತನಾಡಲಿಲ್ಲ..[ಗೊಂದಲ]

ಅಧ್ಯಕ್ಷರು: ಯಾರೂ ಆ ರೀತಿ ಕಾಮೆಂಟ್ ಮಾಡಿಲ್ಲವಂತೆ, ಕುಳಿತುಕೊಳ್ಳಿ..[ಗೊಂದಲ]

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್, ಈಗ ಮಾಧ್ಯಮದ ಸ್ನೇಹಿತರ ಮೂಲಕ ಈ ರಾಜ್ಯದ ಜನತೆಗೆ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ಜನರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದು ಹೇಳಿ ಮಂಕೂಬೂದಿಯನ್ನು ಎರಚುವಲ್ಲಿ ಯಾರು ಯಶಸ್ವಿಯಾಗಲು ಸಾಧ್ಯವಿಲ್ಲ, ಅಂಕಿಅಂಶಗಳನ್ನು ತೋರಿಸುತ್ತೇನೆ. ಉದಾಹರಣೆಗೆ 2004–05ರಲ್ಲಿ SC/ST ಜನಾಂಗಕ್ಕೆ 474 ಕೋಟಿ ಅನುದಾನವನ್ನು ಒದಗಿಸಿಕೊಟ್ಟಿದ್ದು, 2005–06ರಲ್ಲಿ 651 ಕೋಟಿ, 2006–07ರಲ್ಲಿ ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿ 1876 ಕೋಟಿ ಒದಗಿಸಲಾಯಿತು. ಉಪ ಮುಖ್ಯಮಂತ್ರಿಯಾಗಿ 2ನೇ ಬಜೆಟ್ ಮಂಡನೆ ಮಾಡಿದಾಗ 2007–08ರಲ್ಲಿ 2721 ಕೋಟಿ ರೂ.ಗಳನ್ನು ಕೊಡಲಾಯಿತು. 2008–09ರಲ್ಲಿ 3958 ಕೋಟಿಯನ್ನು ಕೊಟ್ಟಿದ್ದೇನೆ. ಕೊಟ್ಟರೂ ಕೂಡ ಖರ್ಚು ಎಷ್ಟು ಮಾಡಿದರೆಂದು ನೀವು ಕೇಳಬಹುದು, ನೀವು ಅದೇ ಪ್ರಶ್ನೆಯನ್ನು ಕೇಳುತ್ತೀರೆಂದು ಗೊತ್ತು. 3958 ಕೋಟಿಯನ್ನು 2008–09ನೇ ಸಾಲಿನಲ್ಲೇನು ಇಟ್ಟಿದ್ದೇನೆ, ಜನವರಿ ಅಂತ್ಯದವರೆಗೆ 2400 ಕೋಟಿ ಅಂದರೆ 60% ಆ ದಿಕ್ಕಿನಲ್ಲಿ ಖರ್ಚು ಮಾಡಿದ್ದೇನೆ. 2009–10ನೇ ಸಾಲಿಗೆ 4061 ಕೋಟಿ ಇಟ್ಟಿದ್ದೇವೆ, ಅಂದರೆ 3 ವರ್ಷಗಳ ಹಿಂದೆ SC/ST ಜನಾಂಗಕ್ಕೆ ನೀಡುತ್ತಿದ್ದ ಅನುದಾನವನ್ನು ಹೋಲಿಕೆ ಮಾಡಿದರೆ ನಾವು 6 ಪಟ್ಟು ಹೆಚ್ಚು ಅನುದಾನವನ್ನು ಕೊಟ್ಟಿದ್ದೇವೆ, ಇಷ್ಟನ್ನು ಮಾತ್ರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದುಳಿದ ವರ್ಗಗಳಿಗೆ, "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ಈ ತತ್ವದಲ್ಲಿ ನಂಬಿಕೆ ಇಟ್ಟುಕೊಂಡಿರುವ ವ್ಯಕ್ತಿ ನಾನು. ಆದುದರಿಂದಲೇ ಈ ರೀತಿ ಬಡಜನಾಂಗವನ್ನು ಗುರುತಿಸಿ, ಕುಂಬಾರ, ಕಮ್ಮಾರ, ಬಡಿಗ, ದೇವಾಂಗ, ಮೂರ್ತೆದಾರ, ಅಕ್ಕಸಾಲಿಗ, ದರ್ಜಿ, ಕ್ಷಾವ್ರಿಕ ಈ ರೀತಿ ಸಂಪ್ರದಾಯವಿರುವವರಿಗೆ ಸುಮಾರು 1 ಲಕ್ಷ ಕುಟುಂಬಕ್ಕೆ ಅನುಕೂಲ ಮಾಡಿಕೊಡಬೇಕು, ಸಬ್ಸಿಡಿ ಕೊಡಬೇಕು, ಅವರು ಸಾಲ ತೆಗೆದುಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು 50 ಕೋಟಿ ಸಹಾಯಧನ 100 ಕೋಟಿ ಅನುದಾನವನ್ನು ಒದಗಿಸುತ್ತಿದ್ದೇನೆ, ಎಲ್ಲಾ ಸಮಾಜಗಳ ಸಂಘಟನೆಗಳಿಗೆ ಮೂಲಭೂತ ಸೌಲಭ್ಯ ಒದಗಿಸುವುದಕ್ಕೆ 20 ಕೋಟಿ ಹಣವನ್ನಿಟ್ಟಿದ್ದೇನೆ. ಅಲ್ಪಸಂಖ್ಯಾತರ ಬಗ್ಗೆ, ನಾನು ಕೇಳುವುದೇನೆಂದರೆ, ಬಹುಶಃ ಸ್ವಾತಂತ್ರ್ಯ ಬಂದ ಮೇಲೆ ಅಲ್ಪಸಂಖ್ಯಾತರು ನಿಮಗೆ ಕೊಟ್ಟಷ್ಟು ಬೆಂಬಲ ಬೇರೆ ಯಾವ ಸಮೂಹ

ಕೂಡ ಕೊಟ್ಟಿರುವುದಕ್ಕೆ ಸಾಧ್ಯವಿಲ್ಲ. ಆದರೆ ಹಿಂದಿನ ಬಜೆಟ್ ನಲ್ಲಿ ತಾವಿಟ್ಟಿರುವ ಹಣವೆಷ್ಟು? ಅವರ ಶಿಕ್ಷಣಕ್ಕೆ ಕೊಟ್ಟ ಹಣವೆಷ್ಟು? ಇವತ್ತು ನಮ್ಮ ಸರ್ಕಾರ ಬಂದ ಮೇಲೆ ಕೊಡುತ್ತಿರುವ ಹಣವೆಷ್ಟೆಂದು ಯೋಚನೆ ಮಾಡಿದರೆ, ನಿಮಗೆ ಆಶ್ಚರ್ಯವೆಂದರೆ, 2008–09ನೇ ಸಾಲಿನ ಆಯವ್ಯಯದಲ್ಲಿ 143 ಕೋಟಿ ಅನುದಾನವನ್ನು ಒದಗಿಸಿದ್ದೇನೆ, 2007–08ನೇ ಸಾಲಿಗಿಂತ 47% ಹೆಚ್ಚುವರಿಯಾಗಿ ನಾನು ಕೊಟ್ಟಿದ್ದೇನೆ, ಈ ವರ್ಷ 167 ಕೋಟಿ ಇಟ್ಟಿದ್ದೇವೆ. ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2005–06 14 ಕೋಟಿ ಇತ್ತು, ಈಗ 51 ಕೋಟಿಯನ್ನಿಟ್ಟಿದ್ದೇವೆ. ಹೀಗೆ ಎಲ್ಲಾ ವರ್ಗದ ಜನರಿಗೆ ಬೇಕಾದ್ದನ್ನು ಅನುಕೂಲ ಮಾಡಿಕೊಡುವುದಷ್ಟೆ ಅಲ್ಲ, ಹಿಂದು–ಮುಸ್ಲಿಮ, ಹಿಂದು–ಕ್ರೈಸ್ತ ಭಾವೈಕ್ಯತೆ ಅನುಕೂಲತೆಗಾಗಿ ಅವರು ಕೇಳಿದಂಥ ಹಣವನ್ನು ಕೊಡಬೇಕೆಂದು ಅದಕ್ಕಾಗಿ 10 ಕೋಟಿಯನ್ನಿಟ್ಟಿದ್ದೇನೆ. ರಾಷ್ಟ್ರಕವಿ ಕುವೆಂಪು ಅವರು ಹೇಳಿದ ಮಾತು ನೆನಪಿಗೆ ಬರುತ್ತದೆ– "ಸರ್ವಜನಾಂಗದ ಶಾಂತಿಯ ತೋಟ"ವೆಂಬುದನ್ನು ನಾನು ಉಲ್ಲೇಖಿಸಿದ್ದೇನೆ, ಆ ರೀತಿ ಎಲ್ಲಾ ಜನರಿಗೆ ಅನುಕೂಲ ಮಾಡಿಕೊಡುವ ಪ್ರಯತ್ನವನ್ನು ಮಾಡುತ್ತೇನೆ. ರೈತರಿಗೆ ಏನು ಮಾಡಿದಿರೆಂದು ಕೇಳಬಹುದು, ಸ್ವಾಮಿ, ಎಷ್ಟು ಲಕ್ಷ ಜನರಿಗೆ ಅನುಕೂಲವಾಗುತ್ತದೆಂದು ಲೆಕ್ಕಾ ನೋಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 3% ದರದಲ್ಲಿ ಸಾಲವನ್ನೇನು ಕೊಡುತ್ತಿದ್ದಾರೆ, ಇದರಿಂದ 15 ಲಕ್ಷ ಕುಟುಂಬಕ್ಕೆ ಅನುಕೂಲವಾಗುತ್ತದೆ. ಹಾಗೆ ರೈತರ ಪಂಪ್ ಸೆಟ್ ಗಳಿಗೆ ಉಚಿತವಾಗಿ ವಿದ್ಯುತ್ ಕೊಡುವ ಬಗ್ಗೆ ನೀವೇ ಅಂಕಿಅಂಶಗಳನ್ನು 17 ಲಕ್ಷ ಕುಟುಂಬದ ಬಗ್ಗೆ ಹೇಳಿದಿರಿ. ಹಾಲು ಉತ್ಪಾದಕರಿಗೆ 2 ರೂಪಾಯಿಗಳ ಸಹಾಯಧನವನ್ನು ಕೊಡುತ್ತಿದ್ದೇನೆ, ಅದರಿಂದ 5 ಲಕ್ಷ ಕುಟುಂಬಕ್ಕೆ ಅನುಕೂಲವಾಗುತ್ತಿದೆ, ಸಾವಯವ ಕೃಷಿಯಲ್ಲಿ 50,000 ರೈತರಿಗೆ ಅನುಕೂಲವಾಗುವಂಥ ಯೋಜನೆಯನ್ನು ಮಾಡಿದ್ದೇವೆ, ಯಶಸ್ವಿ ಯೋಜನೆಯಿಂದ 6.29 ಲಕ್ಷ ಬಡ ಕುಟುಂಬಗಳಿಗೆ ಅನುಕೂಲವಾಗುತ್ತಿದೆ, ಸುವರ್ಣ ಆರೋಗ್ಯ ಸುರಕ್ಷಾ ಯೋಜನೆಯಿಂದ 16 ಲಕ್ಷ ರೈತರಿಗೆ ಅನುಕೂಲವಾಗುತ್ತಿದೆ, 1.10 ಲಕ್ಷ ಸ್ತ್ರೀಶಕ್ತಿ ಗುಂಪುಗಳ ಸಹಾಯಧನ ಯೋಜನೆಯಿಂದ 16 ಮಹಿಳೆಯರಿಗೆ ಅನುಕೂಲವಾಗುತ್ತದೆ. ಹೀಗೆ ಸಣ್ಣ ಸಣ್ಣ ಗುಂಪುಗಳಿಗೆ ಅನುಕೂಲ ಮಾಡಿಕೊಡುವ ಯೋಜನೆಗಳ ಜೊತೆಗೆ ರೈತರ ಸಮೂಹಕ್ಕೆ ನಾನು ನನ್ನ ಶಕ್ತಿಮೀರಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ಮತ್ತೆ, ಪ್ರಾದೇಶಿಕ ಅಸಮಾನತೆ ನಿವಾರಣೆಗೋಸ್ಕರ 114 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೋಸ್ಕರ ನಂಜುಂಡಪ್ಪ ವರದಿಯ ಪ್ರಕಾರ ಕಳೆದ 2 ವರ್ಷಗಳಿಂದ ವಿಶೇಷ ಯೋಜನೆಯನ್ನು ರೂಪಿಸಿದ್ದೇವೆ. 2007–08ರಲ್ಲಿ 1572 ಕೋಟಿ, 2008–09ರಲ್ಲಿ 2547 ಕೋಟಿ ಅನುದಾನವನ್ನು ಒದಗಿಸಿದ್ದೇವೆ. ಈ ಸಾರಿ ಪ್ರತ್ಯೇಕ ಲೆಕ್ಕಶೀರ್ಷಿಕೆ ಮಾಡಿದರೆ, ವಲಯವಾರು, ಇಲಾಖೆವಾರು ವೆಚ್ಚವನ್ನು ಕ್ರೋಢೀಕರಣವನ್ನು ಮಾಡಿದರೆ ಹೆಚ್ಚು ಅನುಕೂಲವಾಗುತ್ತದೆಂದು ನಾವು

ಮಾಡಿದ್ದೇವೆ. ಜನವರಿ ಅಂತ್ಯಕ್ಕೆ ಸುಮಾರು 50% ಹಣ ಖರ್ಚಾಗಿದೆ. ಮಾರ್ಚ್ ಅಂತ್ಯಕ್ಕೆ 80% ಹಣ ನಂಜುಂಡಪ್ಪ ವರದಿಯ ಪ್ರಕಾರ ಹಣ ಖರ್ಚಾಗುತ್ತದೆ ಎನ್ನುವ ವಿಶ್ವಾಸ ನನಗಿದೆ, ಅದರ ಆಧಾರದ ಮೇಲೆ ನಾನು ಅಂಕಿಅಂಶಗಳನ್ನು ನಿಮಗೆ ಕೊಡುತ್ತಿದ್ದೇನೆ 2009–10ನೇ ಸಾಲಿನಿಂದ ಹೊಸ ಲೆಕ್ಕಶೀರ್ಷಿಕೆಯಲ್ಲಿ ಮಾಡಿದಾಗ ಏಕೆ ಆಗಲ್ಲಿಲವೆಂದು ಕೇಳುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೋಸ್ಕರವೇ ನಮ್ಮ ಶಾಸಕರಾದ ಶಶಿಲ್ ನಮೋಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇನ್ನು ಪಡಿತರ ಕಾರ್ಡುಗಳ ಬಗ್ಗೆ ಚರ್ಚೆಯಾಯಿತು. ನಿಮ್ಮಲ್ಲಿ ಪಕ್ಷಭೇದ ಮರೆತು ನಾನು ವಿನಯದಿಂದ ವಿನಂತಿ ಮಾಡುವುದೇನೆಂದರೆ, ನಿಜವಾದ ಬಡವರಿಗೆ ಪಡಿತರ ಕಾರ್ಡು ಸಿಗಬೇಕು. ಆ ಕಡೆ ಈ ಕಡೆ ಎಂದಲ್ಲ ನಾವೆಲ್ಲರೂ ಸೇರಿ, ಬಡವರಿಗೆ ಸಿಕ್ಕಿಲ್ಲವೆಂದು ಕೂಗುತ್ತಿದ್ದೇವೆ, ಇದು ಬಡವರಿಗೆ ಸಿಗಲೇ ಬೇಕು ಇದರಲ್ಲಿ ಎರಡನೇ ಮಾತಿಲ್ಲ. ಆದರೆ ನ್ಯಾಯಬೆಲೆ ಅಂಗಡಿಯವನು ದುರುಪಯೋಗ ಮಾಡಿಕೊಂಡಿದ್ದಾನೆ, ದುಬಾರಿ ಅಕ್ಕಿ ಬೆಲೆ ಇದ್ದಾಗ ನೂರೂರು ಕಾರ್ಡುಗಳನ್ನು ಇಟ್ಟುಕೊಂಡು ದುರುಪಯೋಗ ಮಾಡಿಕೊಳ್ಳುತ್ತಿದ್ದಾನೆ, ಅದನ್ನು ಕಂಟ್ರೋಲ್ ಮಾಡುವ ಪ್ರಯತ್ನ, ಮತ್ತು ಯಾರು ಇದ್ದ ಕುಟುಂಬಗಳೇ ಎರಡು ಮೂರು ಕಾರ್ಡ್‌ಗಳನ್ನು ಇಟ್ಟುಕೊಂಡಿದ್ದಾರೆ. ಇದು ನಿಮ್ಮ ಕಾಲದಿಂದಲೇ 3–4 ವರ್ಷಗಳಿಂದಲೇ ಫೋಟೊ ತೆಗೆಯುವುದು ಮಾಡುವುದು ವಿಳಂಬವಾಗಿ ಈಗ ನೂರಾರು ಜನರು ಬಂದು ಅಲ್ಲಿ ಕ್ಯೂನಲ್ಲಿ ನಿಂತುಕೊಂಡರೆಂದು ಹಂಗಾಮಿಯಾಗಿ ಕಾರ್ಡುಗಳನ್ನು ಕೊಡುತ್ತೇವೆಂದು ತೀರ್ಮಾನವನ್ನು ತೆಗೆದುಕೊಂಡಿರುವುದು ನಿಜ. ಅದನ್ನು ವೆರಿಫಿಕೇಷನ್ ಮಾಡಿಯಾದ ಮೇಲೆ ನಿಜವಾದವರಿಗೆ ಅದು ಸಿಗಬೇಕು. ಅಲ್ಲಿಯವರೆಗೆ ನಿಜವಾದ ಬಡವರಿಗೆ ವಂಚನೆಯಾಗಬಾರದೆಂದು ಹಂಗಾಮಿಯಾಗಿ ನಾವು ಕಾರ್ಡು ಕೊಡುತ್ತಿದ್ದೇವೆಯೇ ಹೊರತು, ನಿಮ್ಮಿಂದ ನಾನು ಸಹಕಾರ ಬಯಸುವುದೇನೆಂದರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ಹೊಸದಾಗಿ ಪಡಿತರ ಕಾರ್ಡುಗಳನ್ನು ಕೊಡುತ್ತಿರುವುದರಿಂದ, ಅಕ್ಕಿಯನ್ನು ಹೆಚ್ಚು ಕೊಡುವುದಕ್ಕೆ..

ಶ್ರೀ ಟಿ.ಬಿ.ಜಯಚಂದ್ರ: ಇಲ್ಲ ತಪ್ಪು ಸಂದೇಶ ಹೋಗುತ್ತದೆ, ತಾವು ಬೆಳಗಾಂನಲ್ಲಿ ಅಧಿವೇಶನ ನಡೆಯುವಂಥ ಸಮಯದಲ್ಲಿ ಒಂದು ಸಾರಿ ಅಫಿಡವಿಟ್ ಕೊಟ್ಟ ಮೇಲೆ ತಾತ್ಕಾಲಿಕವಾಗಿ ಕಾರ್ಡುಗಳನ್ನು ಕೊಡುವುದು ನಮ್ಮ ಜವಾಬ್ದಾರಿ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದಿರಿ, ಕೊಟ್ಟಿದ್ದರಿಂದ ಲಕ್ಷಾಂತರ ಜನರಿಗೆ ಇವತ್ತು ಕಾರ್ಡು ಸಿಕ್ಕಿದೆ.

ಆದರೆ ಈಗ ನೀವು ನಿನ್ನೆ ವೆರಿಫಿಕೇಷನ್‌ಗೆಂದು ಹೇಳಿಕೊಟ್ಟಿದ್ದರಲ್ಲಾ, ವೆರಿಫಿಕೇಷನ್ ಆದ ಮೇಲೆ food grains ಕೊಡುತ್ತೇವೆಂದರೆ ಖಂಡಿತಾ 38 ಲಕ್ಷದಿಂದ ಎಂಟು ಲಕ್ಷಕ್ಕೆ ಬರುವುದು. ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಈ ಮನೆಯ ಮೂಲಕ ಭರವಸೆ ಕೊಡುತ್ತೇನೆ. ಯಾರಿಗೆ ತಾತ್ಕಾಲಿಕ ಕಾರ್ಡು ಕೊಟ್ಟಿದ್ದೇವೆ, ಅವರಿಗೆ ಮುಂದಿನ ತಿಂಗಳಿನಿಂದಲೇ ಅಕ್ಕಿ ಕೊಡುವುದಕ್ಕೆ ನಾವು ಪ್ರಾರಂಭ ಮಾಡುತ್ತೇವೆ. ನಾನು ನಿಮಗೆ ಏನು ಸಹಕಾರ ಕೇಳುತ್ತಿದ್ದೇನೆಂದರೆ, ಮೊನ್ನೆ ತಾನೆ ನಮ್ಮ ಮುಖ್ಯ ಕಾರ್ಯದರ್ಶಿಯವರನ್ನು ಕೇಂದ್ರಕ್ಕೆ ಕಳುಹಿಸಿಕೊಟ್ಟು ನಮಗೆ ಹೆಚ್ಚುವರಿಯಾಗಿ ಅಕ್ಕಿ ಕೊಡಿ. ದುಬಾರಿ ಬೆಲೆಯಾದರೂ ಪರವಾಗಿಲ್ಲ, ನಾವು ಕೊಂಡುಕೊಳ್ಳುವುದಕ್ಕೆ ತಯಾರಿದ್ದೇವೆಂದು ಹೇಳಿದ್ದೇವೆ. ನೀವು ಸ್ವಲ್ಪ influence ಮಾಡಿ ಸಹಕಾರ ಕೊಟ್ಟರೆ ಅನುಕೂಲವಾಗುತ್ತದೆ. ನಾವು ಕಡಿಮೆ ದರದಲ್ಲೇನೂ ಅಕ್ಕಿ ಕೇಳುತ್ತಿಲ್ಲ. ನೀವು ಹೇಳಿದ ಹಾಗೆ ಮಾರುಕಟ್ಟೆಯಲ್ಲಿ ನಾವು ಖರೀದಿ ಮಾಡುವುದಕ್ಕೆ ಹೋದರೆ ಇರುವ ಬೆಲೆಯೂ ಜಾಸ್ತಿಯಾಗುತ್ತಾ ಹೋಗುತ್ತದೆ ಎಂದು ಅದಕ್ಕೋಸ್ಕರ ನಿಮ್ಮ ಸಹಕಾರ ನೀಡಿದರೆ, ಹೆಚ್ಚು ಅನುಕೂಲವಾಗುತ್ತದೆ. ಇನ್ನು ವಿದ್ಯುತ್ ಬಗ್ಗೆ ಹೇಳಬೇಕೆಂದರೆ, ಮಾನ್ಯ ಜಯಚಂದ್ರರವರೇ ಇಷ್ಟೇ ಆದರೆ ನಿಮ್ಮ ಶಿವಕುಮಾರ್‌ರವರು ಒಪ್ಪಿಕೊಳ್ಳಬೇಕಲ್ಲಾ? ಮಾನ್ಯ ಯಡಿಯೂರಪ್ಪನವರು ಬಂದ ಮೇಲೆ ಎಂಟು ತಿಂಗಳುಗಳಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಿ ಸುಮಾರು 6,900ಮೆ.ವ್ಯಾ.ವಿದ್ಯುತ್ ಉತ್ಪಾದನೆ ಮಾಡಿ ಸೇವ್ ಮಾಡಿದ್ದೇವೆ. ಕೇಂದ್ರ ಸರ್ಕಾರವೂ ನಮಗೆ ಸಹಕಾರ ಕೊಟ್ಟಿದೆ. ಛತ್ತೀಸ್‌ಗಡದಲ್ಲಿ ಲ್ಯಾಂಡ್ ಅಕ್ವಿಸಿಷನ್ ಪ್ರಾರಂಭವಾಗಿದೆ. ಮಾರ್ಚ್ ವೇಳೆಗೆ ಲೋಕಸಭಾ ಚುನಾವಣೆಗಳು ಘೋಷಣೆ ಆಗದೇ ಇದ್ದರೆ ಶಂಕುಸ್ಥಾಪನೆ ಮಾಡಿ ಅಲ್ಲಿಯ ಕೆಲಸಗಳೇ ಪ್ರಾರಂಭ ಮಾಡುವ ಹಂತಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಯಾವ ವಿದ್ಯುತ್ ಬರ ಇತ್ತು, ಅದನ್ನು ಬಗೆಹರಿಸುವುದಕ್ಕೆ ಅತ್ಯಂತ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. 13,000 ಮೆ.ವ್ಯಾ. ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವುದಕ್ಕೆ ದಿಟ್ಟ ಹೆಜ್ಜೆ ಇಡುತ್ತಿದ್ದೇವೆ. ನನಗೆ ವಿಶ್ವಾಸ ಇದೆ 5,000 ಮೆ.ವ್ಯಾ. ವಿದ್ಯುತ್ತನ್ನು ನಿಶ್ಚಿತವಾಗಿ ಉತ್ಪಾದನೆ ಮಾಡುತ್ತೇವೆ ಎನ್ನುವ ವಿಶ್ವಾಸ ಇದೆ. ರಸ್ತೆಗಳ ಬಗ್ಗೆ ಹೇಳಬೇಕೆಂದರೆ, ನೀವು ಅಪ್ರಿಷಿಯೇಟ್ ಮಾಡಬೇಕು. ಇವತ್ತು ಸಾರ್ವಜನಿಕರನ್ನು EPP ಆಧಾರದ ಮೇಲೆ ದೊಡ್ಡ ದೊಡ್ಡ ಕೈಗಾರಿಕೆಗಳವರು ಯಾರು ಇದರಲ್ಲಿ ಆಸಕ್ತಿ ಇದೆ ಅವರನ್ನು ಕರೆದು 10,000 ಕಿ.ಮೀ. ಮುಖ್ಯ ರಸ್ತೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 12,600 ಕಿ.ಮಿ. ರಸ್ತೆ ಬಗ್ಗೆ ಖಾಸಗಿ ಸಹಭಾಗಿತ್ವದಲ್ಲಿ ಕೆಲಸ ಮಾಡುವುದಕ್ಕಾಗಿ 500 ಕೋಟಿ ರೂ. ಬಂಡಾವಳವನ್ನು ಇಟ್ಟಿದ್ದೇವೆ. ವಿಶ್ವ ಬ್ಯಾಂಕ್ ನೆರವು ಮತ್ತು ಮುಖ್ಯ ಮಂತ್ರಿಗಳ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅದು ಬೇರೆ 2685 ಕಿ.ಮಿ. ರಸ್ತೆ ಮತ್ತು 32 ಸೇತುವೆಗಳನ್ನು ನಿರ್ಮಿಸುತ್ತಿದ್ದೇವೆ. ರಸ್ತೆಗಳ ನಿರ್ಮಾಣಕ್ಕಾಗಿ ಹೆಚ್ಚು ಒತ್ತು ಕೊಟ್ಟಿದ್ದೇವೆ ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹಳ ಮುಖ್ಯವಾಗಿ ನಗರಾಭಿವೃದ್ಧಿ. first time ನಾನು ಒಂದು ಪ್ರಯತ್ನ ಮಾಡುತ್ತಿದ್ದೇನೆ. ನೀವೆಲ್ಲಾ ಸಹಕಾರ ಕೊಡಬೇಕು. ಕಾರ್ಪೋರೇಷನ್

ನಗರಕ್ಕೆ ನಾನು ಏನು ಹೇಳಿದ್ದೇನೆ, 100 ಕೋಟಿ ರೂಪಾಯಿಗಳ ಕಾರ್ಯಕ್ರಮ ತಯಾರಿಸಿ 50 ಕೋಟಿ ರೂ. ಪ್ರತಿ ವರ್ಷ ಕೊಡುತ್ತಿದ್ದೇವೆ. ನೀವು estimate, plan ಎಂದು ಹೇಳಿ ಕುಳಿತರೆ ಅದು ಸೆಪ್ಟಂಬರ್, ಅಕ್ಟೋಬರ್, ನವೆಂಬರ್ ಹಾಗೂ ಡಿಸೆಂಬರ್‌ಗಳಿಗೆ ಹೊರಟು ಹೋಗುತ್ತೀರಿ, ಬೇಡ. ನಾನು ಈ ಸಾರಿ ಹೊಸದಾಗಿ ಆ ಕಾಮಗಾರಿಗಳನ್ನು ಘೋಷಣೆ ಮಾಡಿದೆವು, ಕೆಲವು ಕಡೆ ಕಾಮಗಾರಿಗಳು ಕೊನೇ ಪಕ್ಷ ಪ್ರಾರಂಭವಾಗಿದೆ. ಇನ್ನೊಂದು ಎರಡು – ಮೂರು ತಿಂಗಳುಗಳಲ್ಲಿ 50% ಆದರೂ ಪ್ರೊಗ್ರೆಸ್ ಆಗಬಹುದು. ಮಾನ್ಯ ಸುರೇಶ್ ಕುಮಾರ್‌ರವರು ಪರ್ಸನಲ್ಲಾಗಿ ಎಲ್ಲಾ ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಮುಂದಿನ ವರ್ಷದಿಂದ ನಾನು ಜಿಲ್ಲಾ ಕೇಂದ್ರಗಳಿಗೆ ಪುರಸಭೆ ನಗರಸಭೆ ಇರುವಂತಹ ಕಡೆಗಳಲ್ಲಿ ಸಹ ನಾನು ಈ ಹಣವನ್ನು ಕೊಡುವಂತಹ ಪ್ರಯತ್ನವನ್ನು ಮಾಡುತ್ತಿದ್ದೇನೆ. ಆ ದಿಕ್ಕಿನಲ್ಲಿ ನೀವು ಪೂರ್ಣ ಸಹಕಾರ ಕೊಟ್ಟರೆ ಹೆಚ್ಚು ಅನುಕೂಲ ಆಗಬಹುದು. 50 ಕೋಟಿ ರೂ. ನಗರಕ್ಕೆ, ಜಿಲ್ಲಾ ಕೇಂದ್ರಕ್ಕೆ 15 ಕೋಟಿ ರೂ. ತಾಲ್ಲೂಕು ಕೇಂದ್ರಗಳಿಗೆ 5 ಕೋಟಿ ರೂ. ಪಟ್ಟಣ ಪಂಚಾಯಿತಿಗಳಿಗೆ 2 ಕೋಟಿ ರೂ. ಇದರಿಂದ ಅಲ್ಲಿ ಮೂಲಭೂತ ಸವಲತ್ತುಗಳನ್ನು ಒದಗಿಸಿಕೊಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಈ ಕೆಲಸವನ್ನು ಮಾಡಿದ್ದೇನೆ. ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಕಾಮಗಾರಿಗಳ ಮೇಲೆ ಮಾಡಿದ ಖರ್ಚು ಮಾನ್ಯ ಜಯಚಂದ್ರರವರೇ, ಬಹಳ ದೊಡ್ಡ ಪ್ರಮಾಣದಲ್ಲಿ ನಾವು ಮಾಡಿದ್ದೇವೆ. ಆ ದಿಕ್ಕಿನಲ್ಲಿ ಪ್ರಯತ್ನ ನಡೆಸಿದ್ದೇವೆ. ವಿವರಗಳಿಗೆ ಹೋಗುವುದಿಲ್ಲ, ಬಹಳ ಹೊತ್ತಾಗುತ್ತದೆ, ನಾನು ಆ ಮನೆಗೆ ಹೋಗಬೇಕಾಗಿದೆ. 2003–04ರಲ್ಲಿ 390 ಕೋಟಿ ರೂ. 2004–05 ರಲ್ಲಿ 538 ಕೋಟಿ ರೂ. 2005–06ರಲ್ಲಿ 595 ಕೋಟಿ ರೂ. 2006–07ರಲ್ಲಿ 610 ಕೋಟಿ ರೂ. 2006–07ರಲ್ಲಿ 400 ಕೋಟಿ ರೂ. ಸೀಸ್ ಮಾಡಿದ್ದೇವೆ. 2007–08ರಲ್ಲಿ 1180 ಕೋಟಿ ರೂ. ಖರ್ಚು ಮಾಡಿದರೆ 250 ಕೋಟಿ ರೂ. ನಾವು ಕೊಟ್ಟಿದ್ದೇವೆ. 2008–09ರಲ್ಲಿ 1500 ಕೋಟಿ ರೂ. ಖರ್ಚು ಮಾಡಿದರೆ 300 ಕೋಟಿ ನಾವು ನಮ್ಮ ಸರ್ಕಾರದಿಂದ ಕೊಟ್ಟಿದ್ದೇವೆ. ಈ ವರ್ಷ 2009–10ಕ್ಕೆ 2000ಕೋಟಿ ರೂ. ಸಾಲ ತಂದಾದರೂ ಈ ರಸ್ತೆಗಳನ್ನು improve ಮಾಡಬೇಕು. ಈ ದಿಕ್ಕಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಬೆಂಗಳೂರು ಅಭಿವೃದ್ಧಿಗೋಸ್ಕರ ನಾನು ಮಾಡುತ್ತಿದ್ದೇನೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹುಶಃ ಐದು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿಗೆ ನಾವೇನು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೇವೆ ಬರುವಂತಹ ದಿವಸಗಳಲ್ಲಿ ಬೆಂಗಳೂರು ಅಭಿವೃದ್ಧಿಗೆ ಮೂರರಿಂದ ನಾಲ್ಕು ಪಟ್ಟು ಹೆಚ್ಚು ಹಣವನ್ನು ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಖರ್ಚು ಮಾಡುತ್ತಿದ್ದೇವೆ. ಬರುವಂತಹ 2–3 ವರ್ಷಗಳಲ್ಲಿ ಒಂದು ಕ್ರಾಂತಿಕರವಾದ ಬದಲಾವಣೆ ಮಾಡಿ ಬೆಂಗಳೂರನ್ನು ವಿಶ್ವ ದರ್ಜೆ ನಗರವನ್ನಾಗಿ ಮಾಡಬೇಕೆಂಬ ನಿಮ್ಮೆಲ್ಲರ ಅಪೇಕ್ಷೆ ಏನಿದೆ, ಆ ದಿಕ್ಕಿನಲ್ಲಿ ದಾಪುಗಾಲು ಹಾಕುತ್ತಿದ್ದೇವೆ. ಅನೇಕ

ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಮಾಗಡಿ ರಸ್ತೆ, ಕಾರ್ಡ್ ರಸ್ತೆ ಕೆಳಸೇತುವೆ ಮತ್ತು ಮಲ್ಲೇಶ್ವರಂ ರಸ್ತೆ ಕೆಳ ಸೇತುವೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ತೆರೆಯಲಾಗಿದೆ. ನಗರದ ಪಶ್ಚಿಮ ಭಾಗದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಗೆ ನೇರ ಸಂಪರ್ಕ ನಿರ್ಮಿಸುವುದಕ್ಕಾಗಿ ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಹಳೆಯ ಸೆಂಟ್ರಲ್ ಜೈಲಿನ ಆವರಣದಲ್ಲಿ Freedom Park ಕಾಮಗಾರಿ ಬಹಳ ಮಂದಗತಿಯಿಂದ ನಡೆಯುತ್ತಿತ್ತು. ಈಗ ಅದನ್ನೆಲ್ಲಾ ಪೂರ್ಣಗೊಳಿಸಿದ್ದೇವೆ. 28ನೇ ತಾರೀಖು ಅದರ ಉದ್ಘಾಟನಾ ಕಾರ್ಯಕ್ರಮ ಇದೆ. ಬಹಳ ದೊಡ್ಡ ಪ್ರಮಾಣದಲ್ಲಿ ಆ ಕೆಲಸಕಾರ್ಯಗಳು ಆಗುತ್ತಿವೆ. ಹೀಗೆ ಮೊದಲಿಗಿಂತ ನಾಲ್ಕು ಪಟ್ಟು ಹೆಚ್ಚು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಹಣವನ್ನು ಖರ್ಚು ಮಾಡುತ್ತಿದ್ದೇವೆ. ಮೆಟ್ರೋ ಬಗ್ಗೆ ನಮಗೂ ನಿಮಗೂ ಇಬ್ಬರಿಗೂ ಆಸಕ್ತಿ ಇದೆ. ಈಗಾಗಲೇ ನಾವು 550 ಕೋಟಿ ರೂ. ಖರ್ಚು ಮಾಡಿದ್ದೇವೆ. ಈ ಹಿಂದೆ ಮಾಡಿದ ಒಟ್ಟು ಖರ್ಚಿಗಿಂತ ಹೆಚ್ಚಿನ ಖರ್ಚನ್ನು ನಾವು ಮಾಡಿದ್ದೇವೆ. ಪ್ರತಿಷ್ಠಿತ ಮೆಟ್ರೋ ರೈಲು ನಿಗಧಿತ ಅವಧಿಯಲ್ಲಿ ಕಾರ್ಯಾರಂಭ ಆಗಬೇಕು. ಮೊದಲ ಹಂತದ ಪ್ರಯಾಣ ಮುಂದಿನ ವರ್ಷದ ಅಂತ್ಯದೊಳಗೆ ಆಗಬೇಕು 2010ರೊಳಗಾಗಿ ಸುಮಾರು 600 ಕೋಟಿ ಖರ್ಚು ಮಾಡುತ್ತೇವೆ. ಬಹುಶಃ ನಮ್ಮ ಶಾಸಕ ಮಿತ್ರರು ಯಾರು ಬೆಂಗಳೂರಿನಲ್ಲಿದ್ದೀರಿ, 28 ಕ್ಷೇತ್ರಗಳಲ್ಲಿಯೂ ಸಾಕಷ್ಟು ಕೆಲಸಗಳು ಆಗುತ್ತಿವೆ. ಆದರೆ ಯಾರು ಬೆಂಗಳೂರು ನಗರ ಅಲ್ಲದ ಶಾಸಕರು ಇದ್ದಾರೆ, ಅವರು ಒಂದು ಸುತ್ತು ಬೆಂಗಳೂರು ನಗರಕ್ಕೆ ಹೋಗಿ ಬಂದರೆ ಏನು ಕೆಲಸ ಆಗುತ್ತಿದೆ ಎಂದು ನೋಡಿದರೆ, ನಮ್ಮ ನಮ್ಮ ಜಿಲ್ಲೆಗಳಲ್ಲಿ ನಮ್ಮ ನಮ್ಮ ತಾಲ್ಲೂಕುಗಳಲ್ಲಿ ಆ ರೀತಿ ಕೆಲಸ ಮಾಡುವುದಕ್ಕೆ ಅನುಕೂಲ ಆಗಬಹುದು ಎನ್ನುವ ದೃಷ್ಟಿಯಿಂದ ಬಿಡುವಿದ್ದಾಗ ಒಂದು ಸಾರಿ ಬೆಂಗಳೂರು ನಗರದ ಸುತ್ತಮುತ್ತ ಯಾವ ರೀತಿ ಅಭಿವೃದ್ಧಿ ಕಾರ್ಯ ಆಗುತ್ತಿದೆ ಇದನ್ನು ನೋಡುವುದಕ್ಕೆ ಹೋಗಿ ಬರಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ನೀವು ಬರೀ ಬೆಂಗಳೂರಿನಲ್ಲಿರುವ ಶಾಸಕರಿಗೆ 100–150ಕೋಟಿ ರೂ. ಹಣ ಕೊಟ್ಟು ನಮ್ಮ ಗ್ರಾಮೀಣ ಪ್ರದೇಶಗಳಿಗೆ ಒಂದು ಕೋಟಿ ಹಣವನ್ನೂ ಕೊಟ್ಟಿಲ್ಲ. ನೀವು ಮಾಡಿ ಬೇಡವೆಂದು ಹೇಳುವುದಿಲ್ಲ. ಬೆಂಗಳೂರು ಅಭಿವೃದ್ಧಿ ಮಾಡಬೇಕು ಬೇಡವೆಂದು ಅಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತಿದ್ದಾರೆಂದರೆ, ಬೆಂಗಳೂರು ನಗರಧ್ಧಲ್ಲಿ ಆಗಿರುವ ಕೆಲಸವನ್ನು ನೋಡಿ ಎಂದು ಹೇಳುತ್ತಿದ್ದಾರೆ. ನಾವು ನೋಡುತ್ತಿದ್ದೇವೆ.

ಅಧ್ಯಕ್ಷರು: ಅವರ ರಿಪ್ಲೈ ಮುಗಿಯಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಅದರ ಬಗ್ಗೆ ಗಮನ ಕೊಡುತ್ತೇನೆ. ಬೆಂಗಳೂರು ನಗರದ ಅಭಿವೃದ್ಧಿಗೆ ಮುಂದಿನ ವರ್ಷ 7376 ಕೋಟಿ ರೂ. ಮೀಸಲಿಟ್ಟಿದ್ದೇವೆ. BBMP, BDA ಹಾಗೂ BWSSB ಸಂಸ್ಥೆಯ ಕೆಲಸಗಳಾದರೆ ಇನ್ನು ಒಂದು ವರ್ಷದಲ್ಲಿ ಬೆಂಗಳೂರು ಚಿತ್ರಣವೇ ಬದಲಾವಣೆಯಾಗುತ್ತದೆ. ಆ ದಿಕ್ಕಿನಲ್ಲಿ ನೀವು ಸಹಕಾರ ಕೊಡಬೇಕು. ಮಾನ್ಯ ಶಿವಕುಮಾರ್‌ರವರು ಹೇಳಿದಂತಹ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಹಳ್ಳಿಗಳಿಗೆ ಮೂಲಭೂತ ಸೌಕರ್ಯಗಳು ಸಿಗಬೇಕು. ಅದರ ಬಗ್ಗೆ ಹೆಚ್ಚು ಒತ್ತು ಕೊಡಬೇಕು. ಅದು ಬಂದಾಗ ಅದರ ಕಡೆಗೆ ಗಮನ ಕೊಡಬೇಕು. ಬೆಂಗಳೂರು ನಗರದ ಬಗ್ಗೆ ಮಾತನಾಡುವಂತಹ ಕಾಲದಲ್ಲಿ ಇದಕ್ಕೆ ಯಾವ ರೀತಿ ಒತ್ತು ಕೊಟ್ಟಿದ್ದೇವೆ, ಕೆಲಸ ಮಾಡುತ್ತಿದ್ದೇವೆಂದು ಹೇಳಿದ್ದೇವೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 800 ಕೋಟಿ ರೂ. ಮತ್ತು BBMP ಯಿಂದ 500 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಖಾಸಗಿ ಸಹಭಾಗಿತ್ವದಲ್ಲಿ ನಿರ್ವಹಣೆ ಮಾಡುವುದಕ್ಕೆ 2000 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಕೊಟ್ಟು ಕೆಲಸಗಳನ್ನು ಮಾಡುತ್ತಿದ್ದೇವೆ. ಕೈಗಾರಿಕೆಗಳ ಅಭಿವೃದ್ಧಿ ದೃಷ್ಟಿಯಿಂದ ಹೆಚ್ಚು ಅಭಿವೃದ್ಧಿಗೊಳಿಸಬೇಕೆಂದು ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ನೀವೆಲ್ಲಾ ಸಹಕಾರ ಕೊಟ್ಟರೆ ಪ್ರತಿ ಜಿಲ್ಲೆಯಲ್ಲಿ ಒಂದು ಸಾವಿರದಿಂದ ಎರಡು ಸಾವಿರ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಅದಕ್ಕೆ ಅಗತ್ಯವಿರುವಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿ, Infrastructure develop ಮಾಡಿ ಯಾರಾದರೂ ಕೈಗಾರಿಕೋದ್ಯಮಿಗಳು ಬಂದರೆ, ಆ ಮೀಟಿಂಗ್ ಈ ಮೀಟಿಂಗ್ ಎಂದು ಓಡಾಡಿಸುತ್ತಾಡಿಸಿ ಅವರು ವಾಪಸ್ ಹೋಗುವ ಬದಲಿಗೆ ನೀನು ಎಲ್ಲಪ್ಪ ಕಾರ್ಖಾನೆ ಹಾಕುತ್ತೀಯ ಬೆಂಗಳೂರು ಬಿಟ್ಟು ಬೇರೆ ಕಡೆ ಮಾಡುತ್ತೀಯ ಎಂದು ಹೇಳಿ ಅದಕ್ಕೆ ಜಮೀನು ತಯಾರಾಗಿದೆ ಎಷ್ಟು ಎಕರೆ ಬೇಕೆಂದು ನೋಡಿಕೊಂಡು ಬಾ, ಯಾವ ಕಾರ್ಖಾನೆ ಹಾಕುತ್ತೀಯ? ಈ ರೀತಿ across the ಟೇಬಲ್ ಕುಳಿತು ಅವನಿಗೆ ಬೇಕಾದ ಅನುಕೂಲಗಳನ್ನು ಕೊಟ್ಟು ಅದನ್ನು ಬಗೆಹರಿಸಿ ಒಂದಷ್ಟು ಕೈಗಾರಿಕೆಗಳನ್ನು ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ನೀವೂ ಕೂಡ ಅದರ ಬಗ್ಗೆ ಪ್ರಯತ್ನ ಮಾಡಿದರೆ ಬಹುಶಃ ಹೆಚ್ಚು ಅನುಕೂಲವಾಗಬಹುದು ಎಂದು ನನ್ನ ಅಪೇಕ್ಷೆ ಇದೆ. 1200 ಎಕರೆಯಿಂದ 2,000 ಎಕರೆ ಜಮೀನು ಸ್ವಾಧೀನಪಡಿಸುವುದಕ್ಕೆ ಅಗತ್ಯ ಸವಲತ್ತುಗಳನ್ನು ಕೊಟ್ಟು ಕೈಗಾರಿಕಾ ವಸಾಹಾತುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಒಂದು ಸಾವಿರ ಕೋಟಿ ರೂ.ಗಳನ್ನು ನಾವು ವೆಚ್ಚ ಮಾಡಬೇಕೆಂದಿದ್ದೇವೆ. ಇದು ಗ್ರಾಮೀಣ ಜನರಿಗೆ ಬೇರೆ ಜಿಲ್ಲೆಗಳಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ಇದನ್ನು ನನ್ನ ಕಣ್ಣು ಮುಂದೆ ಇಟ್ಟುಕೊಂಡಿದ್ದೇನೆ. ನಿಮಗೆ ಈಗಾಗಲೇ ಗೊತ್ತಿದೆ, ಹೊಸ ಗಣಿಗಾರಿಕೆ ನೀತಿಯನ್ನು ನಾವು ಜಾರಿಗೆ ತಂದಿದೇವೆ. ನೀವೆಲ್ಲ ಸಹಕಾರ

LA.V.S.F.10

ಕೊಡಿ, ನಮ್ಮ ಸಂಪತ್ತು ಹಾಳಾಗಿ ಹೋಗುವುದಕ್ಕೆ ನಾವು ಬಿಡುವುದಿಲ್ಲ. ಇದರ ಬಗ್ಗೆ ಬಿಗು ನಿಲುವನ್ನು ನಾನು ತೆಗೆದುಕೊಂಡಿದ್ದೇನೆ ಎನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಸಿದ್ಧ ಉಡುಪು ತಯಾರಿಕಾ ಕ್ಷೇತ್ರಕ್ಕೆ ವಿಶೇಷ ಪ್ರೋತ್ಸಾಹ ನೀಡಬೇಕೆಂದು ವಿವಿಧನಗರಗಳಲ್ಲಿ ಸಮುಚ್ಚಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿಮ 40ಕೋಟಿ ರೂ. ಗಳನ್ನು ಒದಗಿಸಿದ್ದೇವೆ. ಎಲ್ಲೆಲ್ಲಿ ಮಾಡಬೇಕೆಂದು ತಾವು ಸಲಹೆ ಕೊಡಿ. 5000 ನೇಕಾರರ ಮಗ್ಗಗಳಿಗೆ ಮಗ್ಗದ ಕೋಣೆಗಳು ಮತ್ತು ಮನೆ ನಿರ್ಮಾಣ ಮಾಡುವುದಕ್ಕೋಸ್ಕರ 30 ಕೋಟಿ ರೂ.ಗಳನ್ನು ವಿಶೇಷ ಅನುದಾನವನ್ನು ನಾನು ಕೊಟ್ಟಿದ್ದೇನೆ. ಮಾನ್ಯ ಡಿ.ಕೆ.ಶಿವಕುಮಾರ್‌ರವರಿಗೆ ಸಮಾಧಾನ ಆಗಲಿ ಎಂದು ಮಂಡ್ಯದ ಬಗ್ಗೆ ಹೇಳುತ್ತಿದ್ದೇನೆ. ನಾನೇ ಹೋಗಿದ್ದೆ, ನಾನು ಅಲ್ಲಿ ಹುಟ್ಟಿ ಬೆಳೆದಂತಹದವನು, ಅದರ ಋಣ ತೀರಿಸಬೇಕಾಗಿದೆ. ನಾನು ಅಲ್ಲಿಗೆ ಹೋದಾಗ ಅಲ್ಲಿಯ ಸ್ಥಿತಿ-ಬಹಳಷ್ಟು ಸುಧಾರಣೆ ಆಗುತ್ತಿದೆ. 50 ಕೋಟಿ ರೂ. ನಾವು ಬಜೆಟ್‌ನಲ್ಲಿ ಕೊಟ್ಟಿದ್ದೇವೆ. 50 ಕೋಟಿ ರೂ. ಸಾಲ ತೆಗೆದುಕೊಳ್ಳುವುದಕ್ಕೆ ಅವರಿಗೆ ಶಕ್ತಿ ಇದೆ. ಮಾಡಿದರೆ, ಬಹುಶಃ ನನಗನ್ನಿಸುತ್ತದೆ, ಒಂದು ವರ್ಷದಲ್ಲಿಯೇ ಸಾಕಷ್ಟು ಸುಧಾರಣೆಗಳು ಆಗಿ ನಾವು ನೆಮ್ಮದಿಯಿಂದ ಹೌದು! ಒಂದು ಅಭಿವೃದ್ಧಿ ಆಯಿತು ಎಂದು ಸಮಾಧಾನ ಪಟ್ಟುಕೊಳ್ಳುವಂತಹ ಅಭಿವೃದ್ಧಿ ಆಗುತ್ತದೆ. ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇನೆ. ಉತ್ತರ ಕರ್ನಾಟಕದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಪೂರಕವಾಗಿ ಕೊಪ್ಪಳ, ಬಳ್ಳಾರಿ, ಬಾಗಲಕೋಟೆ ಬೆಳಗಾವಿ, ಬ್ಯಾಡಗಿ, ಬಸವಕಲ್ಯಾಣ, ಚಿಕ್ಕೋಡಿ ಇತ್ಯಾದಿ ಸ್ಥಳಗಳಲ್ಲಿ ವಿಶೇಷವಾಗಿ ಕೈಗಾರಿಕಾ ವಸಾಹಾತುಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಪ್ರವಾಸೋದ್ಯಮಕ್ಕೆ ನಾವು ಎಷ್ಟು ಕೊಟ್ಟರೂ ಕಡಿಮೆ. ಇಲ್ಲಿ ನಮಗೆ ಇಷ್ಟೊಂದು ಅನುಕೂಲ ಇದೆ. ಆ ಕ್ಷೇತ್ರವನ್ನು ನಾವು ನೆಗ್ಲೆಕ್ಟ್ ಮಾಡಿದ್ದೆವು. ಕಳೆದ 2–3 ವರ್ಷಗಳಿಂದ ಆ ದಿಕ್ಕಿನಲ್ಲಿ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ಕೊಟ್ಟ ಹಣ ಪೂರ್ತಿ ಖರ್ಚಾಗುತ್ತಿಲ್ಲ.

ಅದಕ್ಕೆ ಅಧಿಕಾರಿಗಳಿಗೆ ವಿಶೇಷವಾಗಿ ಗಮನವನ್ನು ನಾವು ಕೊಟ್ಟರೆ, ಈ ಸಾರಿ ಅದಕ್ಕೆ 180 ಕೋಟಿ ರೂ.ಗಳನ್ನು ನಾವು ತೆಗೆದಿಟ್ಟಿದ್ದೇವೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 20 ರಷ್ಟು ಹೆಚ್ಚು ಹಣವನ್ನು ನಾವು ಕೊಟ್ಟಿದ್ದೇವೆ. ಖಾಸಗಿ ಸಹಭಾಗಿತ್ವದಲ್ಲಿ ನಾವು ಅದನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕು ಎನ್ನುವ ದೃಷ್ಟಿಯಿಂದ ಅನುಕೂಲ ಮಾಡುತ್ತಿದ್ದೇವೆ. ಈ ಕೆ.ಎಸ್.ಎಫ್.ಸಿ. ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಯಿಂದ ಪಡೆದ ಸಾಲಗಳ ಮರುಪಾವತಿಗೆ, ಕೈಗಾರಿಕೆಗಳವರಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ one time settlement ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ವೃತ್ತಿ ತೆರಿಗೆ ಮಿತಿಯನ್ನು ಹತ್ತು ಸಾವಿರಕ್ಕೆ ಏರಿಸಿದ್ದೇವೆ. ಐದು ಸಾವಿರದಿಂದ ಹತ್ತು ಸಾವಿರಕ್ಕೆ ಏರಿಸಿದ್ದೇವೆ. ನೂತನ ವಯೋಮಿತಿಯನ್ನು ಜಾರಿಗೆ ತಂದಿದ್ದೇವೆ. ಹೋಟೆಲ್ ಮೇಲಿನ ವಿಲಾಸ ತೆರಿಗೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮುದ್ರಾಂಕ ಶುಲ್ಕವನ್ನು ಶೇ.7.5 ರಿಂದ 6 ಕ್ಕೆ ಇಳಿಸಿದ್ದೇವೆ. ವಿದ್ಯುತ್

ಚಾಲಿತ ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ನಾವು ರೂಪಿಸುತ್ತಿದ್ದೇವೆ. ಮತ್ತೆ ತಮಗೆ ಯೋಜನಾ ವೆಚ್ಚದ ಬಗ್ಗೆ ಎಲ್ಲರೂ ಮಾತನಾಡಿದ್ದೀರಿ. ಮಾತನಾಡಬೇಕಾದಂಥ ಅತ್ಯಂತ ಪ್ರಮುಖವಾದ ವಿಚಾರವೇ ಅದು ಆಗಿರುವುದರಿಂದ ಎಲ್ಲರೂ ಮಾತನಾಡಿದ್ದೀರಿ. ಆದರೆ ಒಂದು ಸಂಗತಿಯನ್ನು ನಾನು ನಿಮಗೆ ಹೇಳಬಯಸುತ್ತೇನೆ. ಈ ವರ್ಷದ ಬಜೆಟ್‌ಗೆ ಅನುಮೋದನೆ ಸಿಕ್ಕಿದ್ದೇ ಜುಲೈ 2008 ರಲ್ಲಿ ಶಿವಕುಮಾರ್‌ರವರೆ. ಅಂದರೆ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳನ್ನು ಕಳೆದುಹೋಗಿತ್ತು. ಹೀಗಾಗಿ ಸ್ವಲ್ಪ ಹಿನ್ನಡೆ ಆಗಿದೆ ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಹಿನ್ನಡೆಯನ್ನು ಹೋದ ವರ್ಷಕ್ಕೆ ಹೋಲಿಸಿದರೆ ಏನಾಗಿದೆ ಎಂಬುದನ್ನು ಈಗ ನಾನು ನಿಮಗೆ ಹೇಳುತ್ತೇನೆ. 2004–05ರಲ್ಲಿ ಯೋಜನಾ ವೆಚ್ಚ ಖರ್ಚಾಗಿದ್ದು 6786 ಕೋಟಿ. 2005–06 ರಲ್ಲಿ 9496 ಕೋಟಿ, ಅಂದರೆ ಹಿಂದಿನ ವರ್ಷಕ್ಕೆ 27% ಜಾಸ್ತಿಯಾಯಿತು. 2006–07 ರಲ್ಲಿ 11,888 ಕೋಟಿಯಾಯಿತು. ಅಂದರೆ ಹಿಂದಿನ ವರ್ಷಕ್ಕಿಂತ 24% ಹೆಚ್ಚು ಖರ್ಚು ಮಾಡಲಾಗಿದೆ. 2007–08 ರಲ್ಲಿ unfortuantely, 10189 ಕೋಟಿಯಾಯಿತು, ಅಂದರೆ–17% ಆಗಿದೆ, ಆಗ ರಾಷ್ಟ್ರಪತಿ ಆಡಳಿತ ಇತ್ತು. ಆದರೆ ಈ ವರ್ಷ 13978 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಹೋದ ವರ್ಷಕ್ಕಿಂತ 37% ಜನವರಿಗೆ ಹೋಲಿಕೆ ಮಾಡಿದರೆ, ನಾನು ಜನವರಿಯ ಅಂಕಿ ಅಂಶವನ್ನು ಹೇಳುತ್ತಿರತಕ್ಕಂಥದ್ದು. 37% ಹಿಂದಿನ ವರ್ಷಕ್ಕಿಂತ ಹೆಚ್ಚು ಖರ್ಚು ಆಗಿದೆ. ಆದರೆ ನಾನು ನಿಮಗೆ ಭರವಸೆಯನ್ನು ಕೊಡುತ್ತೇನೆ, ಈ ವರ್ಷ ನಿಶ್ಚಿತವಾಗಿ, ಹೋದ ವರ್ಷಕ್ಕೆ ಹೋಲಿಸಿದರೆ ಈಗಾಗಲೇ ನಾವು ಜನವರಿಗೆ 3789 ಕೋಟಿ ಹೆಚ್ಚು ಖರ್ಚು ಮಾಡಿದ್ದೇವೆ. ಅಂದರೆ ಸುಮಾರು ಪ್ರತಿಶತ 37 ರಷ್ಟು ನಾವು ಹೆಚ್ಚು ಖರ್ಚು ಮಾಡಿದ್ದೇವೆ. ನಮ್ಮ ಯೋಜನಾ ಗಾತ್ರ ಬಹಳಷ್ಟು ಹೆಚ್ಚಿರುವುದರಿಂದ 26181 ಕೋಟಿಗೆ ಹೋಲಿಸಿದರೆ ಅದು ಸುಮಾರು 53.4 ಖರ್ಚಾಗಿದೆ. ಹಿಂದಿನ ವರ್ಷಗಳಿಗೆ ನಾನು ಹೋಲಿಕೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನಾನಿಷ್ಟು ಮಾತ್ರ ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಿಶ್ಚಿತವಾಗಿ ಯೋಜನಾ ವೆಚ್ಚ 90% ದಾಟುತ್ತೇವೆ, ಅದರ ಹತ್ತಿರ ಹತ್ತಿರ ಹೋಗುವುದಕ್ಕೆ ಎಲ್ಲ ರೀತಿಯಲ್ಲಿ ನಾವು ಪ್ರಯತ್ನವನ್ನು ಮಾಡುತ್ತೇವೆ. ಏಕೆಂದರೆ ಈಗಾಗಲೇ ನಿಮಗೆ ಜನವರಿಯವರೆಗೆ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ನಾವು ಏನು ಖರ್ಚು ಮಾಡಿದ್ದೇವೆಂದು ಹೇಳಿದ್ದೇನೆ. ಫೆಬ್ರವರಿ ಅಂತ್ಯವಾಗುತ್ತ ಬರುತ್ತಿದ್ದಂತೆ ಮತ್ತೆ ಹೊಸ ಅಂಕಿ ಅಂಶ ನಮಗೆ ಸಿಕ್ಕೇ ಸಿಗುತ್ತದೆ. ಮಾರ್ಚ್‌ನಲ್ಲಿ ಎಲ್ಲ ಅಂಕಿ ಅಂಶ ಬರುತ್ತದೆ. ಒಂದು ಕೆಟ್ಟ ಪದ್ಧತಿ ಹಿಂದಿನಿಂದ ಬಂದಿರುವುದೇನೆಂದರೆ ಜನವರಿ, ಫೆಬ್ರವರಿ ಮತ್ತು ಮಾರ್ಚ್‌ನಲ್ಲಿ ಹಣವನ್ನು ಖರ್ಚು ಮಾಡುವಂಥದ್ದು ಅಭ್ಯಾಸವಾಗಿದೆ. ಅದಕ್ಕೋಸ್ಕರ ನಾನು ಏನು ಮಾಡಿದ್ದೇನೆಂದರೆ 2009–10ರ ಬಜೆಟ್ ಆಗುತ್ತಿದ್ದಾಗ ಏಪ್ರಿಲ್ ಕೊನೆಯೊಳಗೆ ಏನೇನು ಫಾರ್ಮಲಿಟಿಸ್

ಇರುತ್ತದೋ ಅವೆಲ್ಲವೂ ಮುಗಿದುಹೋಗಿಬಿಡಬೇಕು, ನಿಮ್ಮ ಹತ್ತಿರ ಸಿಬ್ಬಂದಿ ಇಲ್ಲ, ನಿಮ್ಮ ಅಧಿಕಾರಿಗಳು ಸೋಂಬೇರಿಗಳು ಕೆಲಸಗಳನ್ನು ಮಾಡುವುದಿಲ್ಲ ಎನ್ನುವುದಾದರೆ, ನಮ್ಮ ಅಧಿಕಾರಿಗಳು ಎಸ್ಟಿಮೇಟ್ ಪ್ಲಾನ್ ಮಾಡುವುದಕ್ಕೆ ಯಾವುದಾದರೂ ಪ್ರೈವೇಟ್ ಏಜೆನ್ಸಿಯನ್ನು ತೆಗೆದುಕೊಳ್ಳಿ. But, ಏಪ್ರಿಲ್ ಕೊನೆಯೊಳಗೆ ಎಲ್ಲಾ ಫಾರ್ಮಾಲಿಟಿಸ್ ಏನಿದೆಯೋ ಅವೆಲ್ಲವೂ ಮುಗಿದಿರಬೇಕು ಎಂದು ಡೈರೆಕ್ಷನ್ ಕೊಟ್ಟಿದ್ದೇವೆ. ಬಜೆಟ್ ಭಾಷಣದಲ್ಲಿಯೂ ಕೂಡ ನಾನು ಆ ಮಾತನ್ನು ಹೇಳಿದ್ದೇನೆ. ಆದುದರಿಂದ ಇದನ್ನು ತಾವು ಒಪ್ಪುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಒಟ್ಟಿನಲ್ಲಿ ನಿಶ್ಚಿತವಾಗಿ ಒಂದು ಬದಲಾವಣೆಯನ್ನು ತರುವಂಥ ಪ್ರಯತ್ನವನ್ನು ಮಾಡುತ್ತಿದ್ದೇನೆ. ಇನ್ನು ವರ್ಗಾವಣೆ ಬಗ್ಗೆ ಹೇಳಬೇಕೆಂದರೆ, ವಿಶೇಷವಾಗಿ ಆಡಳಿತ ಪಕ್ಷದವರು ಹೆಚ್ಚು ವರ್ಗಾವಣೆಯನ್ನುಮಾಡಿಸಿಕೊಳ್ಳುತ್ತಾರೆ ಎನ್ನುವುದು ನಡೆದುಕೊಂಡು ಬಂದಿರುವಂಥದ್ದು ಈ ಖಾಯಿಲೆ. ಆದರೆ ನಾವು ಈಗಾಗಲೇ ನಾವು ಅಧಿಕಾರಕ್ಕೆ ಬಂದಮೇಲೆ ಅವರಿಗೆ ಯಾರೋ ಬೇಕೋ ವರ್ಗಾವಣೆಯಾಗಿದೆ. ಆದುದರಿಂದ ಈ ಬಾರಿ ಬಹಳ ಕಟ್ಟುನಿಟ್ಟಾಗಿ ವರ್ಗಾವಣೆಗೆ ಕೈ ಹಾಕಬಾರದು, ಖಾಲಿ ಇರುವ ಹುದ್ದೆಗಳಿಗೆ ಮಾತ್ರ ವರ್ಗಾವಣೆ ಮಾಡಬೇಕು, ಅನಿವಾರ್ಯವಾಗಿ ಮಾಡಬೇಕಾದಂಥದ್ದನ್ನು ಬಿಟ್ಟರೆ ವರ್ಗಾವಣೆಯನ್ನು ಯಾವುದೇ ಕಾರಣಕ್ಕೆ ಮಾಡಬಾರದು ಎಂದಿದ್ದೇವೆ. ಆದರೂ ಜನ ಬೇಸರ ಮಾಡಿಕೊಳ್ಳುತ್ತಾರೆ. ಒಂದು ಕಡೆ ಇದ್ದ ಅಧಿಕಾರಿಗಳನ್ನು ಇನ್ನೊಂದು ಕಡೆಗೆ ವರ್ಗಾವಣೆ ಮಾಡಿದರೆ ಏನು ಬದಲಾವಣೆಯಾಗುತ್ತದೆ? ನಮ್ಮ ಶಾಸಕರ ಚಾಕಚಕ್ಯತೆ ಇರುವುದೇ ಇರುವ ಅಧಿಕಾರಿಯಿಂದ ಹೆಚ್ಚು ಕೆಲಸವನ್ನು ತೆಗೆದುಕೊಳ್ಳುವಂಥದ್ದು. ಈ ರೀತಿ ಮಾಡದಿದ್ದರೆ ಈ ವರ್ಗಾವಣೆ ಸಮಸ್ಯೆಗೆ, ಈ ರೋಗಕ್ಕೆ ಕೊನೆ ಇಲ್ಲದಂತಾಗುತ್ತದೆ. ಅದಕ್ಕೋಸ್ಕರ ಸ್ವಲ್ಪ ಬಿಗಿ ನಿಲುವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು ತೆರಿಗೆ ಆದಾಯದಲ್ಲಿ ಸಮಾಧಾನಕರ ಪ್ರಗತಿಯಾಗಿಲ್ಲವೆಂದು ಹಲವಾರು ಮಾನ್ಯ ಸದಸ್ಯರುಗಳು ಮಾತನಾಡುತ್ತಾ ತಮ್ಮ ಭಾವನೆಯನ್ನು ವ್ಯಕ್ತಮಾಡಿದ್ದಾರೆ. ಆದರೆ ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಶೇಕಡ 11% ತೆರಿಗೆಯಲ್ಲಿ ಹೆಚ್ಚಳವಾಗಿದೆ. ಆದರೆ ನಮ್ಮ ಅಪೇಕ್ಷೆ ಜಾಸ್ತಿ ಇತ್ತು. ಈ ಆರ್ಥಿಕ ಹಿಂಜರಿತದ ಪರಿಣಾಮ ನಮಗೆ ವ್ಯತ್ಯಾಸವಾದರೂ ಸಹ ನಮ್ಮ ಕಮರ್ಶಿಯಲ್ ಟ್ಯಾಕ್ಸ್, ಎಕ್ಸೈಸ್ ಮೇಲೆ ವಿಶೇಷ ಪರಿಶ್ರಮ ಹಾಕಿದ ಪರಿಣಾಮದಿಂದ, ನೋಡಿ ವಾಣಿಜ್ಯ ತೆರಿಗೆಯಲ್ಲಿ 2007–08 ರಲ್ಲಿ 15552 ಕೋಟಿ ತೆರಿಗೆ ಸಂಗ್ರಹವಾಗಿದ್ದರೆ 2008–09 ರಲ್ಲಿ ನಮ್ಮ ಅಂದಾಜು ಇದ್ದದ್ದು 17595 ಕೋಟಿ ಸಂಗ್ರಹವಾಗಿದೆ. ಅಂದರೆ 13% ಜಾಸ್ತಿಯಾಯಿತು. ರಾಜ್ಯ ಅಬಕಾರಿಯಲ್ಲಿ 4812 ಕೋಟಿ ಕಳೆದ ವರ್ಷದಲ್ಲಿ ಸಂಗ್ರಹವಾಗಿತ್ತು, ಈ ವರ್ಷ ನಾವು ಎಕ್ಸ್‌ಪೆಕ್ಟ್ ಮಾಡಿರುವುದು 5627 ಕೋಟಿ, ಅಂದರೆ 17% ಹೆಚ್ಚಳವಾಗುತ್ತದೆ. ಮೋಟಾರು ವಾಹನ ತೆರಿಗೆಯಲ್ಲಿ ಕಾರಣಗಳು ತಮಗೆ ಗೊತ್ತಿದೆ. ಕಳೆದ ಸಾರಿ 1788

ಕೋಟಿ ಸಂಗ್ರಹವಾಗಿದ್ದರೆ ಈ ಸಾರಿ 1875 ಕೋಟಿ ಸಂಗ್ರಹವಾಗಿದೆ. ಅಂದರೆ ಶೇಕಡ 5 ರಷ್ಟು ಜಾಸ್ತಿಯಾಗಿದೆ. ಆದರೆ ಕಡಿಮೆ ಆಗಿರುವುದು ಒಂದೇ ಬಾಬಿನಲ್ಲಿ. ಅದು ಯಾವುದೆಂದರೆ ನೋಂದಣಿ ಮತ್ತು ಮುದ್ರಣದಲ್ಲಿ. ಕಳೆದ ಸಲ 3617 ಕೋಟಿಯಾಗಿದ್ದರೆ ಈ ಸಾರಿ 3318 ಕೋಟಿಯಾಗಿದೆ. –8% ಆಗಿದೆ. ಇದಕ್ಕೆ ಕಾರಣ ರಿಜಿಸ್ಟ್ರೇಶನ್ ಎಲ್ಲವೂ ನಿಂತಿತು, ಬಹುಶಃ ಇನ್ನು ಮೇಲೆ ಸುಧಾರಣೆಯಾಗಬಹುದೆಂಬ ವಿಶ್ವಾಸ ನನಗಿದೆ. ಆದರೆ ಒಟ್ಟು ತೆರಿಗೆ 2007–08 ರಲ್ಲಿ 26367 ಕೋಟಿ ಸಂಗ್ರಹವಾಗಿದ್ದರೆ ಈ ಬಾರಿ 29138 ಕೋಟಿ ಸಂಗ್ರಹವಾಗುತ್ತದೆ ಎನ್ನುವ ವಿಶ್ವಾಸ ನನಗಿದೆ. ಅಂದರೆ 11% ಏರಿಕೆಯಾಗಿದೆ. ನಮ್ಮದು ನಿರೀಕ್ಷೆ ಸುಮಾರು 22 ಪ್ರತಿಶತ ಆಗಬೇಕು ಎಂದು ಇತ್ತು. ಬೇರೆ ಬೇರೆ ಕಾರಣಕ್ಕೋಸ್ಕರ ಈ ಹಿನ್ನೆಡೆಯಾಗಿದ್ದರಿಂದ ನಮಗೆ ಸ್ವಲ್ಪ ಅದರಲ್ಲಿ ತೊಂದರೆಯಾಗಿದೆ. ಒಂದು ಮಾತನ್ನು ನಾನು ಅತ್ಯಂತ ವಿನಯದಿಂದ ನಿಮಗೆ ಹೇಳಬಯಸುತ್ತೇನೆ. ಬೆಂಗಳೂರಿನಲ್ಲಿರುವಂಥ ಜಮೀನುಗಳ ಮಾರಾಟದಿಂದ 3 ಸಾವಿರ ಕೋಟಿ ರೂಪಾಯಿ ಬರುತ್ತದೆಂದು ನಾವು ನಿರೀಕ್ಷೆ ಮಾಡಿದ್ದು ನಿಜ. ಆದರೆ ನಮಗೆ ಬರಲಿಲ್ಲ. ಒಂದಿನ್ನೂರು ಕೋಟಿಯೊಳಗೇ ಎಲ್ಲಾ ಸೇರಿ ಆಯಿತು. ಕಾರಣ ಒಂದೆರಡ್ಮೂರು ಸಂಗತಿ ಅದರಲ್ಲಿ ಇರುವಂಥದ್ದು. ಒಂದು, ಅದನ್ನು ಮಾರಾಟ ಮಾಡಿಬಿಡಬಹುದಾಗಿತ್ತು. ಒಂದು, ಒಂದೂವರೆ ಸಾವಿರ ಕೋಟಿ ಬಂದರೆ ಮಾರಿ ಮುಗಿಸಿಬಿಡೋಣ, ಒಟ್ಟಿನಲ್ಲಿ ಬೊಕ್ಕಸಕ್ಕೆ ಹಣ ಬಂದರೆ ಸಾಕು ಎಂದು ಆ ರೀತಿಯಲ್ಲಿ ನಾವು ಮಾಡಲಿಲ್ಲ. ಒಂದು ವರ್ಷ, ಆರು ತಿಂಗಳು ಕಾಯ್ದರೆ ಸ್ವಲ್ಪ ಜನ ಸೆಟ್ಲ್ ಆಗುತ್ತಾರೆ, ಆಮೇಲೆ ಜಮೀನಿಗೆ ಒಳ್ಳೆಯ ಬೆಲೆ ಸಿಗಬಹುದು ಎನ್ನುವುದಕ್ಕೋಸ್ಕರ ಮಾರಲಿಲ್ಲ. ಈಗ ನಮ್ಮ ನಿರೀಕ್ಷೆಯಂತೆ 2009–10 ಕ್ಕೆ ಆಗಿಯೇ ಆಗುತ್ತದೆ. ಅದಕ್ಕೋಸ್ಕರ ಅದೊಂದರಲ್ಲಿ ನಮಗೆ ಹಿನ್ನಡೆಯಾಗಿದೆ ಹೊರತು, ಒಟ್ಟಾರೆ ನಮಗೆ ಸುಮಾರು ಮೂರು ಸಾವಿರ ಕೋಟಿ ನಾವು ಆದಾಯವನ್ನು ಏನು ನಿರೀಕ್ಷೆ ಮಾಡಿದ್ದೆವೋ ಅಷ್ಟು ಕಡಿಮೆಯಾಗಿದೆ. ಆದರೆ ಜಮೀನಿದೆ, ಜಮೀನಿನಿಂದ ನಮಗೆ ದುಡ್ಡು ಬಂದೇ ಬರುತ್ತದೆ. ಆದುದರಿಂದ ನಾನು ಅದನ್ನು ಲೆಕ್ಕ ಹಾಕುವುದಕ್ಕೆ ಹೋಗಿಲ್ಲ. ನಮ್ಮ ಆದಾಯದ ನಿರೀಕ್ಷೆ ಏನಿತ್ತು, ಈ ವರ್ಷ ಮಾರ್ಚ್ ಅಂತ್ಯದೊಳಗೆ ಸುಮಾರು ಮೂರು ಸಾವಿರ ಕೋಟಿ ಮೈಮೇಲೆ ಬರಬಹುದು. ಅಂದರೆ ನಮ್ಮ ನಿರೀಕ್ಷೆಯಲ್ಲಿ ಇಷ್ಟು ಹಿನ್ನಡೆಯಾಗಬಹುದೇ ಹೊರತು ಒಂಭತ್ತು ಸಾವಿರ, ಹತ್ತು ಸಾವಿರ ಕೋಟಿ ಎನ್ನುವ ಪ್ರಶ್ನೆಯೇ ಇಲ್ಲ. ನಾವು ಈ ವರ್ಷ ಈ ಜಮೀನುಗಳನ್ನು ಮಾರಾಟ ಮಾಡುವುದರಿಂದ 1900 ಕೋಟಿ ಬರುತ್ತದೆ ಎಂದು ನಿರೀಕ್ಷೆ ಇದೆ. ನಾವು ಮತ್ತು ನಮ್ಮ ರೆವಿನ್ಯೂ ಮಂತ್ರಿಗಳು ಈ ಬಗ್ಗೆ ಗಮನ ಹರಿಸಿದಾಗ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಬೆಂಗಳೂರಿನಲ್ಲಿ ಒತ್ತುವರಿಯಾಗಿರುವಂಥದ್ದು ಕೂಡ ಇದೆ. ಶಿವಕುಮಾರ್‌ರವರೆ, ನಾವು ನಿರ್ದಾಕ್ಷಿಣ್ಯವಾಗಿ ಅದನ್ನು ವಶಕ್ಕೆ ತೆಗೆದುಕೊಂಡು ಹರಾಜು ಮಾಡಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಸರ್ಕಾರಕ್ಕೆ ತುಂಬುವುದಕ್ಕೆ

ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇವೆ. ಮತ್ತೆ ಹೆಚ್ಚುವರಿ ಸಂಪನ್ಮೂಲ ಕ್ರೋಢೀಕರಿಸುವುದರ ಬಗ್ಗೆ ಹೇಳಬಯಸುತ್ತೇನೆ. ಏಕೆಂದರೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಸಂಪನ್ಮೂಲವನ್ನು ಹೇಗೆ ಸಂಗ್ರಹ ಮಾಡುತ್ತೀರಿ ಯಡಿಯೂರಪ್ಪನವರೆ ಎಂದು ನೀವು ಕೇಳಬಹುದು. ಐ.ಎಂ.ಎಫ್.ಎಲ್. ಮತ್ತು ಬಿಯರ್ ಮತ್ತು ಇನ್ನಿತರ ಆಲ್ಕೋಹಾಲ್ ಪ್ರಮಾಣ ಕಡಿಮೆ ಇರುವ ಮದ್ಯಗಳ ಮೇಲೆ ಹೆಚ್ಚುವರಿ ಅಬಕಾರಿ ಸುಂಕದಲ್ಲಿ ಹೆಚ್ಚಳವನ್ನು ಮಾಡುವುದಿದೆ. ಮತ್ತೆ ಚಿಲ್ಲರೆ ಮದ್ಯ ಮಾರಾಟಗಾರರ ಲಾಭಾಂಶದಲ್ಲಿ ಸ್ವಲ್ಪ ಇಳಿಕೆಯನ್ನು ಮಾಡುತ್ತೇವೆ. ಏಕೆಂದರೆ ಎಷ್ಟು ಹೋಗುತ್ತಿತ್ತೋ ಅದರ ನಾಲ್ಕು ಪಟ್ಟು ಕೇಸ್‌ಗಳು ಖರ್ಚಾಗುತ್ತಿರುವುದರಿಂದ ಅದರಲ್ಲಿ ಕಮಿಶನ್ ಅವರಿಗೆ ಏನು ಸಿಗುತ್ತಿತ್ತೋ ಅದನ್ನು ಕಡಿಮೆ ಮಾಡುವ ಸಲುವಾಗಿ ಅದನ್ನು ಇಳೀಕೆ ಮಾಡುತ್ತೇವೆ. ಐ.ಎಂ.ಎಫ್.ಎಲ್. ನ ಎಂ.ಆರ್.ಪಿ ಯಲ್ಲಿ ಹೆಚ್ಚಿನ ಬದಲಾವಣೆ ಆಗುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಐ.ಎಂ.ಎಫ್.ಎಲ್.ಮೇಲೆ ಹೆಚ್ಚುವರಿ ಅಬಕಾರಿ ಸುಂಕದ ದರದ ಶ್ರೇಣಿಯನ್ನು ಪರಿಷ್ಕರಿಸುತ್ತೇವೆ. ಈ ಕ್ರಮದಿಂದಾಗಿ 820 ಕೋಟಿ ಹೆಚ್ಚುವರಿಯಾಗಿ ಆದಾಯ ಬರುತ್ತದೆ ಎಂದು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ಅಧಿಸೂಚನೆಯನ್ನು ಕೂಡ ನಾನು ಹೊರಡಿಸುತ್ತೇನೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮೂರ್ನಾಲ್ಕು ಅಂಶಗಳನ್ನು ಈ ಮನೆಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಅದೇನೆಂದರೆ, ಈ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರವರ ಹೆಸರನ್ನು ಇಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರದಿಂದ ರೆಕಮೆಂಡ್ ಮಾಡಿ ನಾವು ಕಳುಹಿಸುತ್ತೇವೆ. ನೀವೆಲ್ಲರೂ ಇದನ್ನು ಸ್ವಾಗತ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್: ನಾವು ಈಗಾಗಲೇ ತಮಗೆ ಕೇಂದ್ರ ಸರ್ಕಾರಕ್ಕೆ ಎಲ್ಲಾ ಶಾಸಕರು ಬರೆದುಬಿಟ್ಟೇ ಕೊಟ್ಟಿದ್ದೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಆಯಿತು ಬಿಡಿ. ಬಹಳ ಸಂತೋಷ. ಒಳ್ಳೆಯ ಸಲಹೆ. ಆಮೇಲೆ ಕನ್ನಡ ತಂತ್ರಾಂಶ ಅಭಿವೃದ್ಧಿ ಮಾರಾಟದ ಮೇಲಿನ ವ್ಯಾಟ್ ತೆರಿಗೆಯನ್ನು ಶೇಕಡ 12.5 ರಿಂದ ಶೇಕಡ 4 ಕ್ಕೆ ಇಳಿಸುತ್ತಿದ್ದೇವೆ. ಪ್ರಸ್ತುತ ಗ್ರಾಮ ಸಹಾಯಕರಿಗೆ ಕೊಡುತ್ತಿರುವ ಗೌರವ ಧನದ ಮೊತ್ತವನ್ನು 2 ಸಾವಿರದಿಂದ 3 ಸಾವಿರಕ್ಕೆ ಏರಿಸುತ್ತಿದ್ದೇವೆ. ಅವರಿಂದ ಹೆಚ್ಚು ಕೆಲಸವನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಒಂದು ಸಾವಿರ ರೂ.ಗಳನ್ನು ಹೆಚ್ಚು ಕೊಡಲು ಹೊರಟಿದ್ದೇವೆ. ಸಿಲಿಪಾಲಿನ್ ಪ್ಲಾಸ್ಟಿಕ್ ಮತ್ತು ಟಾರ್ಪಾಲ್ ಮೇಲಿನ ವ್ಯಾಟ್‌ನ್ನು ಶೇಕಡ 12.5 ರಿಂದ ಶೇಕಡ 4ಕ್ಕೆ ಇಳಿಸುತ್ತಿದ್ದೇವೆ. Federation of Kodava ಸಮಾಜದ ಒಂದು ಸಂಸ್ಕೃತಿ ಮತ್ತು ಕ್ರೀಡಾ ಸಮುಚ್ಚಯ ಕಟ್ಟಡಕ್ಕೆ ಒಂದು ಕೋಟಿ ರೂಪಾಯಿಗಳ

ಸಹಾಯಧನವನ್ನು ಮಾಡುತ್ತಿದ್ದೇವೆ. ಸಾವಯವ ತ್ಯಾಜ್ಯ ವಸ್ತು ಕನ್ವರ್ಟರ್‌ಗಳ ಮಾರಾಟದ ಮೇಲಿನ ವ್ಯಾಟ್ ತೆರಿಗೆಯನ್ನು ಶೇ 12.5 ರಿಂದ ಶೇ. 4ಕ್ಕೆ ಇಳಿಸುತ್ತಿದ್ದೇವೆ.

ಸಾರಾಯಿ ನಿಷೇಧದಿಂದ ನಿರಾಶ್ರಿತರಾದಂತಹ, ಆ ವೃತ್ತಿ ಮಾಡುವಂತಹ ಈಡಿಗ ಸಮಾಜದವರಿಗೆ ಶೇಕಡ 3ರ ಬಡ್ಡಿ ದರದಲ್ಲಿ ಸಾಲ ಕೊಡುವುದಕ್ಕೆ ಒಂದು ಏನೂತನ ಯೋಜನೆಯನ್ನು ರೂಪಿಸುತ್ತಿದ್ದೇವೆ. ಅಡಿಕೆಗೆ ಬೆಂಬಲ ಬೆಲೆ ಕೊಡುವಂತಾದ್ದು ತುಂಬಾ ಅಗತ್ಯ ಇದೆ. ಅದರೆ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚೆಯಾಗಿದೆ. ಅಡಿಕೆಗೆ ಪ್ರತಿ ಕ್ವಿಂಟಾಲ್‌ಗೆ 9,500 ರೂಪಾಯಿ ಬೆಂಬಲ ಬೆಲೆಯನ್ನು ನಾವು ಕೊಡುತ್ತೇವೆ. ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಗ್ರಾಮದಲ್ಲಿ ಆರ್ಯಈಡಿಗ ಒಂದು ಮಹಾಸಂಸ್ಥಾನ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಛಲವಾದಿ ಜನಾಂಗದ ಅಭಿವೃದ್ಧಿ ಸಲುವಾಗಿ ಬೆಂಗಳೂರು, ಶಿವಮೊಗ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಛಲವಾದಿ ಭವನ ಕಟ್ಟುವುದಕ್ಕೆ ಒಂದೊಂದು ಕೋಟಿ ರೂಪಾಯಿ ಕೊಡುತ್ತೇನೆಂದು ನಾನು promise ಮಾಡಿದ್ದೆನು. ಅದು ಬಜೆಟ್‌ನಲ್ಲಿ ಕೈಬಿಟ್ಟು ಹೋಗಿತ್ತು. ಅಲ್ಲಿ ಮೂರು ಕಡೆಗೆ ಮೂರು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಬಸವ ಕಲ್ಯಾಣದಲ್ಲಿ ಪ್ರತಿ ವರ್ಷ ದೊಡ್ಡ ಪ್ರಮಾಣದಲ್ಲಿ ಬಸವ ಉತ್ಸವವನ್ನು ಆಚರಿಸಬೇಕು ಎಂದು ಹೇಳಿದ್ದಾರೆ. ಅದಕ್ಕೆ ಸರ್ಕಾರದ ಕಡೆಯಿಂದ 50 ಲಕ್ಷ ರೂಪಾಯಿ ಪ್ರತಿವರ್ಷ ಅನುದಾನ ಕೊಟ್ಟು ಅದು ವಿಜೃಂಭಣೆಯಿಂದ ನಡೆಯಬೇಕು ಎಂದು ಇದೆ. ಮಳವಳ್ಳಿ ತಾಲ್ಲೂಕಿನ ಪೂರಿಗಾಲಿಯಲ್ಲಿ ಏತನೀರಾವರಿ ಯೋಜನೆಗೆ ಮಂಜೂರಾತಿ ಹಾಗೂ ಮುಂದಿನ ವರ್ಷ ಅದಕ್ಕೆ ಐದು ಕೋಟಿ ರೂಪಾಯಿ ಒದಗಿಸುತ್ತಿದ್ದೇವೆ. ನವಿಲುಗುಂದ ತಾಲ್ಲೂಕಿನ ಅಣ್ಣಿಗೇರಿಯಲ್ಲಿ ಪಂಪ ಸ್ಮಾರಕ ನಿರ್ಮಾಣ ಮಾಡುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕುಪ್ಪಳ್ಳಿಯ ಕುವೆಂಪು ಪ್ರತಿಷ್ಠಾನ ಚೆನ್ನಾಗಿ ನಡೆಯಬೇಕೆಂಬ ದೃಷ್ಟಿಯಿಂದ ಪ್ರತಿವರ್ಷ 50 ಲಕ್ಷ ರೂಪಾಯಿಗಳ ಅನುದಾನ. ಚಿತ್ರದುರ್ಗ ಜಿಲ್ಲೆಯ ಸಾಣೇಹಳ್ಳಿಯಲ್ಲಿ ಸಾಂಸ್ಕೃತಿಕ ಚಟುವಟಿಕೆ ಇಡೀ ರಾಜ್ಯದ ಗಮನ ಸೆಳೆಯುತ್ತಿದೆ. ಪ್ರತಿವರ್ಷ ಚೆನ್ನಾಗಿ ಮಾಡಲಿ ಎಂದು ಅವರಿಗೆ 20 ಲಕ್ಷ ರೂಪಾಯಿ ಅನುದಾನ ಕೊಡಬೇಕು. ಕರ್ನಾಟಕದ ದಿವಂಗತ ಎಸ್.ಎಲ್ ಜಗನ್ನಾಥ್‌ರಾವ್ ಜೋಷಿಯವರ ಒಂದು ಮನೆ ನರಗುಂದದಲ್ಲಿ ಇದೆ, ಅದನ್ನು ವಶಕ್ಕೆ ತೆಗೆದುಕೊಂಡು, ಅಲ್ಲಿ ಒಂದು ಸ್ಮಾರಕ ಭವನ ನಿರ್ಮಾಣ ಹಾಗೂ ಒಂದು ಕೋಟಿ ರೂಪಾಯಿಯಲ್ಲಿ ಅದನ್ನು ಅಭಿವೃದ್ಧಿ ಪಡಿಸಬೇಕೆಂದು ಇದ್ದೇವೆ. ಬಾರ್ಕೂರಿನ ಬೆಣ್ಣೆಕುದ್ರಾದಲ್ಲಿ ಕರ್ನಾಟಕದ ಮೊಗವೀರ ಸಮಾಜದ ಮೂಲಸ್ಥಾನದಲ್ಲಿ ಸಮಾಜ ಭವನ ಮತ್ತು ಪೀಠ ಸ್ಥಾಪನೆಗಾಗಿ ಒಂದು ಕೋಟಿ ರೂಪಾಯಿ ಕೊಡುತ್ತಿದ್ದೇವೆ. ಮಹಾರಾಷ್ಟ್ರದಲ್ಲಿರುವ ಪಂಡರಾಪುರಕ್ಕೆ ವಿಠಲ ರುಕ್ಮಾಯಿ ದೇವಸ್ಥಾನಕ್ಕೆ ಕರ್ನಾಟಕದಿಂದ ಸಾವಿರಾರು ಜನ ಭಕ್ತರು ಪ್ರತಿನಿತ್ಯ

ಹೋಗುತ್ತಾರೆ. ಭಕ್ತರ ಅನುಕೂಲಕ್ಕಾಗಿ ಪಂಡರಾಪುರದಲ್ಲಿ ಯಾತ್ರಿನಿವಾಸ್ ನಿರ್ಮಾಣಕ್ಕೆ ಒಂದು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇನೆ.

ಶ್ರೀ ಬಿ. ಪ್ರಕಾಶ್ ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ಅಲ್ಲಿಗೆ ಎರಡು ಕೋಟಿ ರೂಪಾಯಿ ಕೊಡಿ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಿದ್ದೆ... ದಯವಿಟ್ಟು ಅಲ್ಲಿಗೆ ಎರಡು ಕೋಟಿ ರೂಪಾಯಿ ಕೊಡಬೇಕು ಎಂದು ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ದತ್ತಪೀಠ ಮತ್ತು ಮುಳ್ಳಯ್ಯನ ಗಿರಿ ಆ ಜಿಲ್ಲೆಯಲ್ಲಿ ಪ್ರಮುಖ ಪ್ರವಾಸಿ ತಾಣವಾಗಿದೆ. ಅಲ್ಲಿ ಪ್ರತಿನಿತ್ಯ ಸಾವಿರಾರು ಜನ ಬಂದು ಹೋಗುತ್ತಾರೆ. ಅಲ್ಲಿ ಮೂಲಭೂತ ಸವಲತ್ತುಗಳನ್ನು ಒದಗಿಸುವುದಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಕನ್ನಡ ಚಲನಚಿತ್ರೋದ್ಯಮಕ್ಕೆ ಹೆಚ್ಚಿನ ಒಂದು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ, ಇವತ್ತು ಕನ್ನಡ ಚಲನಚಿತ್ರೋದ್ಯಮ ಈ ವರ್ಷ ವಜ್ರ ಮಹೋತ್ಸವ ಆಚರಿಸುತ್ತಿದೆ. ಈ ಸಂಭ್ರಮದ ಆಚರಣೆ ಸಂದರ್ಭದಲ್ಲಿ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡುವುದು ನಮ್ಮ ಸರ್ಕಾರದ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ರಾಷ್ಟ್ರಪ್ರಶಸ್ತಿ ವಿಜೇತ ಕನ್ನಡ ಚಲನ ಚಿತ್ರಗಳಿಗೆ ಉತ್ತೇಜನ ಹಣವನ್ನು ಮೂರು ಲಕ್ಷ ರೂಪಾಯಿಯಿಂದ ಐದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸುತ್ತಿದ್ದೇವೆ. ಪ್ರತಿವರ್ಷ 50 ಕನ್ನಡ ಚಲನ ಚಿತ್ರಗಳಿಗೆ ತಲಾ ಹತ್ತು ಲಕ್ಷ ರೂಪಾಯಿ ಸಹಾಯ ಧನ ನೀಡುತ್ತಿದ್ದು, ಅದಕ್ಕೆ ಹೆಚ್ಚುವರಿಯಾಗಿ ಎರಡು ಕೋಟಿ ರೂಪಾಯಿಗಳನ್ನು ಒದಗಿಸುತ್ತಿದ್ದೇವೆ. ಚಲನ ಚಿತ್ರ ಕಾರ್ಮಿಕರ ಕಲ್ಯಾಣ ದತ್ತಿ ನಿಧಿ ಸ್ಥಾಪಿಸುವುದಕ್ಕೋಸ್ಕರ ಒಂದು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇವೆ. ಕನ್ನಡ ಚಲನ ಚಿತ್ರ ಮತ್ತು ಹಾಡುಗಳನ್ನು duplicate ಮಾಡಿ ಮಾರಾಟ ಮಾಡುವ ಒಂದು ಕೆಟ್ಟ ಪದ್ಧತಿ ನಮ್ಮಲ್ಲಿ ಇದೆ. ಇದೊಂದು ಅಪರಾಧ. ಈಗಿರುವ ಕಾನೂನುಗಳಿಂದ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಿ.ಡಿ, ಡಿ.ವಿ.ಡಿ ಮತ್ತು ಕ್ಯಾಸೆಟ್‌ಗಳ piracy ಹಾವಳಿ ನಿಲ್ಲಿಸುವುದಕ್ಕೋಸ್ಕರ ವಿಶೇಷ ಕಾನೂನನ್ನು ತಂದು ತಡೆಹಿಡಿಯುವುದಕ್ಕೆ ಒಂದು ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಗದಗ ಜಿಲ್ಲೆಯ ಲಕ್ಕುಂಡಿ ಒಂದು ಐತಿಹಾಸಿಕ ಸ್ಥಳ. ಇದರ ಅಭಿವೃದ್ಧಿಗೆ ಎರಡು ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದೆಲ್ಲವನ್ನು ನಾನು ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರುವಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಸಿದ್ಧು ಸವದಿ: ಶ್ರೀಶೈಲ ಮಲ್ಲಿಕಾರ್ಜುನ ಯಾತ್ರಾ ನಿವಾಸದ ಬಗ್ಗೆ ಹೇಳಲಿಲ್ಲ. ನಮ್ಮ ವೀರಶೈವರು ಬಹಳ ಮಂದಿ ಹೋಗುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ತಮ್ಮೆಲ್ಲರ ಅನುಮತಿಯನ್ನು ಪಡೆದುಕೊಂಡು ಇಂದು ಬೆಳಿಗ್ಗೆ ತಿರುಪತಿಗೆ ಪೂಜೆಗೆಂದು ಹೋಗಿದ್ದೆನು. ಇವತ್ತು ತಿರುಪತಿಯಲ್ಲಿ ಸುಮಾರು 90–95 ಕೋಟಿ ರೂಪಾಯಿ ವೆಚ್ಚದಲ್ಲಿ 500 ಕೊಠಡಿಗಳ ಒಂದು ಕಟ್ಟಡದ ಶಂಕುಸ್ಥಾಪನೆ ಮಾಡಿ ಸಾರ್ವಜನಿಕ ಸಹಕಾರದೊಂದಿಗೆ ಅದನ್ನು ಅಭಿವೃದ್ಧಿ ಪಡಿಸಲು ಬೆಳಿಗ್ಗೆ ಶಿಲಾನ್ಯಾಸ ಮಾಡಿದ್ದೇವೆ. ಮತ್ತೊಮ್ಮೆ ಇಲ್ಲಿ ಭಾಗವಹಿಸಿದ ಸಲಹೆ ಕೊಟ್ಟಂತಹ ಎಲ್ಲಾ ಸದಸ್ಯರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಈ ಆಯವ್ಯಯಕ್ಕೆ ಅನುಮೋದನೆ ನೀಡಬೇಕು. ಈ ಬಾರಿ ಅತ್ಯಂತ ಒಳ್ಳೆಯ ರೀತಿಯಲ್ಲಿ ಚರ್ಚೆಯಾಗಿದೆ. ನಾನು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀವು ಏಕೋ ಏನೋ 8–9 ತಿಂಗಳಿಂದ ನಮ್ಮ ಮೇಲೆ ಸಿಟ್ಟು ಮಾಡಿಕೊಂಡಿದ್ದೀರಿ. ಯಾವುದೇ ಸಹಕಾರ ಕೊಡಲಿಲ್ಲ. ನಾವು ಇಲ್ಲಿ ಇರುತ್ತೇವೋ, ಹೋಗುತ್ತೇವೋ ಎನ್ನುವ ಕಾರಣಕ್ಕೋಸ್ಕರ ಏನೋ co-operate ಮಾಡಲಿಲ್ಲ. ಆದರೆ ಇವರು ಐದು ವರ್ಷ ಇರುತ್ತಾರೆ ಎಂದೆನಿಸಿದ ಮೇಲಾದರೂ ಈಗ co-operate ಮಾಡುತ್ತಿದ್ದೀರಿ. ಅದಕ್ಕಾಗಿ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀವು ಸಹಕಾರ ಕೊಟ್ಟರೆ ಇನ್ನೂ ಒಳ್ಳೆಯ ಕೆಲಸ ಮಾಡುವಂತಹ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಆಯವ್ಯಯವನ್ನು ಮಂಜೂರು ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೇ, ಶಾಸಕರ ನಿಧಿ ಬಗ್ಗೆ ಹೇಳಲಿಲ್ಲ.

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಗಳೇ, ಶಾಸಕರ ನಿಧಿ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಶಾಸಕರ ನಿಧಿ 50 ಲಕ್ಷ ರೂಪಾಯಿ ಇತ್ತು. ಇನ್ನು 50 ಲಕ್ಷ ರೂಪಾಯಿ ಬಿಡುಗಡೆ ಮಾಡಿದ್ದೇನೆ. ಮುಂದಿನ ಆರ್ಥಿಕ ಸ್ಥಿತಿ ನೋಡಿಕೊಂಡು ಮತ್ತೆ ಮೇ ತಿಂಗಳಲ್ಲಿ ಸೇರುತ್ತೇವಲ್ಲ, ಆಗ ಪರಿಶೀಲನೆ ಮಾಡೋಣ. ಒಂದು ಕೋಟಿ ರೂಪಾಯಿ ಪೂರ್ತಿ ಹಣವನ್ನು ನಾವು ಕೊಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಆಯವ್ಯಯದ ಚರ್ಚೆಯ ಸಂದರ್ಭದಲ್ಲಿ ಅನೇಕ ಲೋಪದೋಷಗಳ ಬಗ್ಗೆ, ಆಯವ್ಯಯದಲ್ಲಿ ಮಂಡನೆ ಮಾಡಿರುವಂತಹ ನ್ಯೂನತೆಗಳ

LA, Vol-5 F. 11

ಬಗ್ಗೆ ಸಾಕಷ್ಟು ವಿಚಾರಗಳನ್ನು ವಿರೋಧ ಪಕ್ಷದ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಎಲ್ಲರಿಗೂ ತೃಪ್ತಿ ಪಡಿಸುವಂತಹ ರೀತಿಯಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಾರೆ ಮತ್ತು ಸಮಜಾಯಿಸಿ ಉತ್ತರವನ್ನು ಕೊಡುತ್ತಾರೆಂದು ನಿರೀಕ್ಷೆ ನಮ್ಮದಾಗಿತ್ತು. ಆದರೆ ಆ ನಿರೀಕ್ಷೆ ಒಂದು ಕಡೆ ಹುಸಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಒಂದು ಮುಖ್ಯವಾಗಿರತಕ್ಕಂಥ ವಿಚಾರ. ಕೇಂದ್ರ ಸರ್ಕಾರದ ಸಾಲದ ಯೋಜನೆ, ಆ ಸಾಲದ ಯೋಜನೆಯಲ್ಲಿ ಇವತ್ತು ಆಡಳಿತಾತ್ಮಕವಾದಂತಹ ಕೆಲವು ತೊಂದರೆಗಳಾಗಿವೆ. ಸಾಲವನ್ನು PLD Bank ಮುಖೇನ ಪಡೆದಿರುವಂತಹ ಸಣ್ಣ ರೈತರಿಗೆ ಸಾಲ ಮನ್ನಾ ಆಗದಿರುವಂತಹ ಸಂದರ್ಭಗಳು ಇದೆ. ಅದರ ಬಗ್ಗೆ ಯಾವುದೇ ರೀತಿಯಾದಂತಹ ಗಮನ ಹರಿಸಿಲ್ಲವೆನ್ನುವ ವಿಚಾರವನ್ನು ಸಾಕಷ್ಟು ಸದಸ್ಯರು ಪ್ರಸ್ತಾಪ ಮಾಡಿದರು. ಅದಕ್ಕೆ ಸಂಬಂಧಪಟ್ಟ ಹಾಗೆ ಏನು ಕಾರ್ಯಕ್ರಮವನ್ನು ಹಾಕಿದ್ದಾರೆಂದು ಹೇಳುವಂತಹ ಪ್ರಸ್ತಾಪವನ್ನು ಕೂಡ ಮಾಡಲಿಲ್ಲ. ನೀರಾವರಿ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದರು. ನೀರಾವರಿ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಈಗಾಗಲೇ ನಾವು 2,700 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಇನ್ನೂ ಕೂಡ ಖರ್ಚು ಮಾಡಿ, ನೂರಕ್ಕೆ ನೂರು ಸಾಧನೆ ಮಾಡುತ್ತೇವೆಂದು ಹೇಳಿದರು. ಆದರೆ ನೀವು ನೀರಾವರಿ ಯೋಜನೆಗೆ ಆದ್ಯತೆ ಮೇಲೆ ಎಷ್ಟು ಹಣ ಇಡಬೇಕು ಎನ್ನುವುದರಲ್ಲಿ ಇಟ್ಟಿದ್ದೇ ಕಡಿಮೆ, ಅದರಲ್ಲಿ ಸಂಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆಂದು ಹೇಳುವುದರಲ್ಲಿ ಏನೂ ಕೂಡ ಪ್ರಯೋಜನವಾಗುವುದಿಲ್ಲ. ಅದು ನಮ್ಮ ಯೋಜನೆಗೆ
ಸಹಾಯವಾಗಬೇಕಾಗಿರತಕ್ಕಂಥಾದ್ದು. ಇವತ್ತು ನಾವು 3.4 ಲಕ್ಷ ಎಕರೆಗಳನ್ನು ಗುರಿಯಲ್ಲಿಟ್ಟು, ಕೇವಲ 24 ಲಕ್ಷ ಎಕರೆಗೆ ಮಾತ್ರ ನೀರಾವರಿ ಕೊಡುವುದಕ್ಕೆ ಸಾಧ್ಯವಾಗಿದೆ. ಇನ್ನು 12 ಲಕ್ಷ ಎಕರೆಗೆ reach ಆಗಬೇಕಾಗಿರುವಾಗ ಸುಮಾರು ನೀವು 50–60 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕಾದಂತಹ ಸಂದರ್ಭದಲ್ಲಿ ನೀವು ಇದಕ್ಕೆ ಪ್ರತಿಯಾಗಿ 3,000–4,000 ಕೋಟಿ ರೂಪಾಯಿಗಳನ್ನು ಇಡುವುದರಿಂದ ಖಂಡಿತವಾಗಿ ಕೂಡ ಪರಿಸ್ಥಿತಿ ಸುಧಾರಣೆಯಾಗುವುದಕ್ಕೆ ಸಾಧ್ಯವಿಲ್ಲ. ನೀವು ರೈತರ ನಾಯಕರು. ರೈತರ ಬಗ್ಗೆ ಕಾಳಜಿ ಇರುವಂತಹ ಜನರು, ನೀರಾವರಿಗೆ ಹೆಚ್ಚಿನ ಆದ್ಯತೆ ಹಾಗೂ ಒತ್ತನ್ನು ಕೊಡಬೇಕಾಗುತ್ತದೆ. ಆದರೆ ಅದನ್ನು ಕೊಡಲಿಲ್ಲವೆನ್ನುವುದು ಒಂದು ಮಾತನ್ನು ಹೇಳುತ್ತೇನೆ. ಇನ್ನು ಇದ್ಯುಚ್ಛಕ್ತಿ ವಿಚಾರದಲ್ಲಿ ಕೂಡ ಹೇಳುವುದಾದರೆ, ಇವತ್ತು ಕರ್ನಾಟಕ ಕಗ್ಗತ್ತಲಿನಲ್ಲಿ ಇದೆ. ಇವತ್ತು ಏನಾಗಿದೆ? ನೀವು ಇನ್ನು ಮುಂದಿನ ಐದು ವರ್ಷಕ್ಕೆ 5,000 ಮೆಗಾವ್ಯಾಟ್ ವಿದ್ಯುತ್ ಉತ್ಪತ್ತಿ ಮಾಡುತ್ತೇವೆಂದು ಹೇಳುವುದರ ಜೊತೆಗೆ, ಯಾವ ರೀತಿ ಹಣವನ್ನು ತೊಡಗಿಸುತ್ತೀರಿ ಎನ್ನುವ ವಿಚಾರದಲ್ಲಿ ಜನರ ಮನಸ್ಸಿನಲ್ಲಿ ಇರುವಂತಹ ಅನುಮಾನವನ್ನು ನಿವಾರಣೆ ಮಾಡುವಂತಹ ಕೆಲಸವನ್ನು

ನೀವು ಮಾಡಲಿಲ್ಲ. Food ಬಗ್ಗೆ ಒಂದು ಮಾತನ್ನು ಹೇಳಿದಿರಿ. ಇವತ್ತು ತಾತ್ಕಾಲಿಕವಾಗಿ ಕೊಟ್ಟಿರುವಂತಹ ಎಲ್ಲಾ ಕಾರ್ಡುಗಳಿಗೆ ಕೂಡ....

ಅಧ್ಯಕ್ಷರು: ರೇವಣ್ಣನವರೇ, 'ಅವರು ಮಾತನಾಡಿದ್ದು ಮುಗಿದ ಮೇಲೆ ನೀವು ಮಾತನಾಡಿ.

ಶ್ರೀ ಹೆಚ್.ಡಿ.ರೇವಣ್ಣ: ಬಜೆಟ್ ಬಗ್ಗೆ clarifiacation ಕೇಳುತ್ತಿದ್ದಾರೆ. ಉಪನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಯಾವ ಪರಿಸ್ಥಿತಿ ಇದೆ ನೋಡಿ.

ಶ್ರೀ ಟಿ.ಬಿ. ಜಯಚಂದ್ರ: ಮಾರ್ಚ್ ಒಂದನೇ ತಾರೀಖಿನಿಂದ ತಾತ್ಕಾಲಿಕವಾಗಿ ಪಡೆದಿರುವಂತಹ ಕಾರ್ಡುಗಳಿಗೆ food grains ಕೊಡುವುದಕ್ಕೆ ಎಲ್ಲಾ ರೀತಿಯಲ್ಲಿ ಪ್ರಯತ್ನ ಪಡುತ್ತೇವೆ ಎನ್ನುವ ಮಾತನ್ನು ಕೂಡ ಹೇಳಿದ್ದೀರಿ.
ನಾವು ವಿರೋಧಪಕ್ಷದಲ್ಲಿ ಎಲ್ಲರನ್ನೂ ಟೀಕೆ ಮಾಡುತ್ತೇವೆಂದು ಅಲ್ಲ. ರೈತರ ಪರವಾಗಿರುವಂಥ 3% ಅನ್ನು ರಾಷ್ಟ್ರೀಕೃತ Bankನಿಂದ ಪಡೆದಿರುವಂಥ ಸಾಲಕ್ಕೆ ನೀವು ಕೊಡುತ್ತಿರುವಂಥಾದ್ದನ್ನು ಕೂಡ ನಾವು ಸ್ವಾಗತ ಮಾಡುತ್ತೇವೆ. ಅದರ ಬಗ್ಗೆ ನಾವು ಏನು ಹೇಳುವುದಿಲ್ಲ. ಅದೇ ರೀತಿಯಾಗಿ ಇವತ್ತು ಅಡಿಕೆಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದ್ದೀರಿ, ಅದನ್ನೂ ಕೂಡ ನಾವು ಸ್ವಾಗತ ಮಾಡುತ್ತೇವೆ. ಅದೇ ರೀತಿಯಾಗಿ ತೆಂಗು ಬೆಳೆಗಾರರು ಕೂಡ ಇವತ್ತು ಅತ್ಯಂತ ಕಷ್ಟದಲ್ಲಿದ್ದಾರೆ. ತೆಂಗು ಇವತ್ತು 3,700 ರೂಪಾಯಿಗಳು, 3,800 ರೂಪಾಯಿಗಳಿಗೆ ಹರಾಜು ಆಗುತ್ತಿದೆ. ಅವರಿಗೆ ಇವತ್ತು 5,000, 6;000 ರೂಪಾಯಿಗಳನ್ನು ಕೊಟ್ಟರೂ ಕೂಡ ಸಾಲದೇ ಇರುವಂಥ ಪರಿಸ್ಥಿತಿ ಇರುವಾಗ ಅವರ ಬಗ್ಗೆಯೂ ಕೂಡ ಕಾಳಜಿಯನ್ನು ವಹಿಸುತ್ತೀರೆಂದು ನಾವು ನಿರೀಕ್ಷೆ ಮಾಡಿದ್ದೆವು. ಆದರೆ ಅದು ಏನೂ ಆಗಲಿಲ್ಲ. ಇನ್ನು ಡಾ:ನಂಜುಂಡಪ್ಪನವರ ವರದಿಯಲ್ಲಿ ಕಳೆದ ಎರಡು ವರ್ಷದಲ್ಲಿ ಕೂಡ ಸುಮಾರು 4,000ಕೋಟಿ ರೂಪಾಯಿಗಳನ್ನು ಇಡುತ್ತೇವೆಂಬ ಮಾತನ್ನು ಹೇಳಿದಿರಿ. ಅದರೆ ನೀವು ನಿಜವಾಗಿಯೂ ಕೂಡ ಡಾ:ನಂಜುಂಡಪ್ಪನವರ ಉದ್ದೇಶವೇನು ಇದೆ, ಆ ಉದ್ದೇಶವನ್ನು ಬಿಟ್ಟು ಬೇರೆ ಬೇರೆ ರೀತಿಯಲ್ಲಿ divert ಮಾಡಿ ಹಣವನ್ನು ಖರ್ಚು ಮಾಡುವಂಥ ಕೆಲಸವನ್ನು ಮಾಡಿದ್ದೀರಿ.

ಅಧ್ಯಕ್ಷರು: ತಾವು ಸ್ಪಷ್ಟೀಕರಣವನ್ನು ಕೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನೀವು ಕೇಳುವುದು ಬೇಡವೆಂದರೆ ನಾನು ಕುಳಿತುಬಿಡುತ್ತೇನೆ. ನಾನು clarification ಕೇಳುವಂಥಾದ್ದನ್ನು ಕೇಳುವುದಿಲ್ಲವೆಂದರೆ ಇದು ಎಂಥಾದ್ದು? ಇವತ್ತು ನಾವು.. .. ..

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಜಯಚಂದ್ರರವರೆ, ನಿಮ್ಮ clarification ಅನ್ನು ಅವರು ಯಾರು ಕೇಳುತ್ತಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಮುಖ್ಯಮಂತ್ರಿಯವರೆ, ನಮ್ಮ ಉದ್ದೇಶವಿದ್ದದ್ದು ನೀವು ಸಂಪನ್ಮೂಲವನ್ನು ಕ್ರೋಢೀಕರಿಸುವುದರಲ್ಲಿ ಇವತ್ತು ಬಹಳ ambitious ಅನ್ನು projectionsಗೆ ಕೊಟ್ಟು, ಇವತ್ತು ನೀವು ಸಂಪನ್ಮೂಲವನ್ನು ಎಲ್ಲಿಂದ ತರುತ್ತೀರೆನ್ನುವಂಥ ಮಾತನ್ನು ನಾವು ಅನೇಕ ಸಾರಿ ಹೇಳಿದ್ದೇವೆ. ಸುಮಾರು 10 ರಿಂದ 15 ಸಾವಿರ ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆಂಬ ಮಾತನ್ನು ಹೇಳಿದ್ದೇವೆ. ಇವತ್ತು ಕೇವಲ ಸಾಲದಿಂದ, Market borrowings ನಿಂದ ಹೆಚ್ಚು ಬಡ್ಡಿಯನ್ನು ಕೊಟ್ಟು ಇವತ್ತು ಸಾಲವನ್ನು ತರುವಂಥ ಕೆಲಸವನ್ನು ಮಾಡಿದ್ದೀರಿ. ಇದರಿಂದ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ, ಪೂರಕವಾಗಿ ಇವತ್ತು ಯಾವುದೇ asset create ಆಗತಕ್ಕಂಥ ಪ್ರಶ್ನೆಯೇ ಇಲ್ಲ. ಆದರೆ ಇವತ್ತು ಸಾಲ ಹೆಚ್ಚಾಗುತ್ತಿದೆ, ಸಾಲವನ್ನು ಯಾವ ರೀತಿಯಾಗಿ ಕಡಿಮೆ ಮಾಡುತ್ತೀರೆಂಬ ಪ್ರಶ್ನೆಗಳನ್ನು ಸಹ ಪ್ರಸ್ತಾಪ ಮಾಡಿದೆವು. ಅದರ ಬಗ್ಗೆ ಯಾವ ರೀತಿಯಾದ ಗಮನವನ್ನು ಹರಿಸಿಲ್ಲ. ಇಲ್ಲಿ ನಿಮ್ಮ ಮುಖ್ಯವಾದಂಥ ಉದ್ದೇಶವೇನಾಗಿತ್ತೆಂದರೆ, ಕೇಂದ್ರಸರ್ಕಾರದಿಂದ ಯೋಜನೆಗಳ ಮುಖೇನಾ ಬರತಕ್ಕಂಥ ಹಣವನ್ನು ನೀವು ಇವತ್ತು ಪಡೆಯುವುದರಲ್ಲಿ ಸಂಪೂರ್ಣ ವಿಫಲರಾಗಿದ್ದೀರಿ. ಎರಡನೆಯ installment ಅನ್ನು claim ಮಾಡುವಂಥಾದ್ದರಲ್ಲಿ ಇವತ್ತು ಬಹಳಷ್ಟು ಇಲಾಖೆಗಳಲ್ಲಿ ಆಗಿಲ್ಲ. ಆ ಇಲಾಖೆಗಳು RDPR ಇರಬಹುದು, irrigation ಇರಬಹುದು, ಕೇಂದ್ರಸರ್ಕಾರದಿಂದ ಪಡೆಯುವಂಥ ಹಣದಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ಅವರು ಹಣವನ್ನು ಕೊಡುವುದಕ್ಕೆ ತಯಾರಾಗಿ ಇದ್ದರೂ ಕೂಡ, ಈ ಹಣವನ್ನು ಪಡೆಯುವುದರಲ್ಲಿ ನಿಮ್ಮ utilization certificate ಕೊಡುವುದರಲ್ಲಿ ಇವತ್ತು ವಿಳಂಬವಾಗಿರುವುದರಿಂದ ನಿಮಗೆ ಎರಡನೆಯ installment ಬರುವುದಿಲ್ಲ ಮತ್ತು additionality ಕೂಡ ಬರುವುದಕ್ಕೆ ಸಾಧ್ಯವಿಲ್ಲ. ನೀವು ಅಲ್ಲೆ ಸಂಪೂರ್ಣವಾಗಿ ವಿಫಲರಾಗಿದ್ದೀರೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಮ್ಮ ಮಾತಿನ ಒಟ್ಟಾರೆ ಅರ್ಥವೇನೆಂದರೆ, ಈಗ ನೀವು ಘೋಷಣೆಯನ್ನು ಮಾಡಿರುವಂಥಾದ್ದನ್ನು ನೋಡಿದರೆ, ನಾವು ಇನ್ನೂ ಎಷ್ಟು ಘೋಷಣೆಗಳು ಇವೆಯೋ ಮಾಡಲಿ ಎಂದು ಕುಳಿತಿದ್ದೆವು. ನಿಮ್ಮ ಘೋಷಣೆಗಳು ಇವತ್ತು ಅದು ಕೇವಲ ಬಜೆಟ್‌ಗೆ ಸೀಮಿತವಾಗಿಲ್ಲ. ತಮ್ಮ ಬಜೆಟ್ ಭಾಷಣದ ನಂತರವೂ ಕೂಡ, ಇವತ್ತು ನೀವು ಅನೇಕ ಘೋಷಣೆಗಳನ್ನು ಮಾಡಿದ್ದೀರಿ. ನಿಮ್ಮೆಲ್ಲರ ಒಟ್ಟಾರೆ ಅಭಿಪ್ರಾಯವೇನು ಇತ್ತೆಂದರೆ ನಿಮ್ಮ ಕುರ್ಚಿ ಇರುವಂಥಾದ್ದು, ಈ ರಾಜ್ಯದ ಜನರ ಮೇಲೆ ಗುರಿ ಇಲ್ಲ, ಮುಂದಿನ ಚುನಾವಣೆಯ ಮೇಲೆ ಗುರಿ ಇಟ್ಟುಕೊಂಡು ಇವತ್ತು ಈ ರೀತಿಯಾದಂಥ ಬಜೆಟ್ ಅನ್ನು ನೀವು ಮಂಡನೆ ಮಾಡಿದ್ದೀರಿ. ಇದರಿಂದ ರಾಜ್ಯದ ಜನರಿಗೆ

ಒಳ್ಳೆಯದಾಗುವುದಿಲ್ಲ, ಆದರೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡಿರುವ ಬಜೆಟ್‌ಗೆ ನಾವು ಸಂಪೂರ್ಣವಾಗಿ ವಿರೋಧ ಮಾಡುವುದಕ್ಕೆ ಇಚ್ಛಿಸುತ್ತೇವೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಜನ್ಮ ದಿನದಂದು ಬಜೆಟ್‌ಗೆ ಉತ್ತರವನ್ನು ಕೊಟ್ಟಿದ್ದಾರೆ. ಅವರು ಇದಕ್ಕೆ ಬೆಂಬಲವನ್ನು ಕೊಡಿಯೆಂದು ಓಟು ಕೂಡ ಕೇಳುತ್ತಿದ್ದಾರೆ. ನಾವೆಲ್ಲಾ ವಿರೋಧಪಕ್ಷದವರು ಸಂಪ್ರದಾಯವಾಗಿ Financial Bill ಆಗಲಿ ಏನೇ ಆಗಲಿ ನಾವು ಯಾರು ಯಾವತ್ತು ವಿರೋಧ ಮಾಡಿದಂಥಾದ್ದು ಇಲ್ಲ. ಅವರಿಗೆ ಈ ವರ್ಷ ನಮ್ಮ ವಿರೋಧಪಕ್ಷದಲ್ಲಿ ಕುಳಿತಿರುವವರೆಲ್ಲರ ಪರವಾಗಿ ಈ ಹುಟ್ಟುಹಬ್ಬದ ಸಂದರ್ಭದಲ್ಲಿ ಶುಭಾಶಯಗಳನ್ನು ಮೊದಲು ನಾವು ಅರ್ಪಿಸುತ್ತೇವೆ. ಎರಡನೆಯದಾಗಿ, ಇವತ್ತು ನಮ್ಮ ಎಂ.ಎಲ್.ಎಗಳಿಗೆ ಏನಾದರೂ ಮಾಡಬೇಕೆಂದು ತಮ್ಮ birthday ದಿವಸ ತಿರುಪತಿ ತಿಮ್ಮಪ್ಪನ ದರ್ಶನವನ್ನು ಮಾಡಿ 500 ಕೊಠಡಿಗಳನ್ನು ಕಟ್ಟಬೇಕೆಂದು ದೊಡ್ಡ ತೀರ್ಮಾನವನ್ನು ಮಾಡಿ ಬಂದಿದ್ದೀರಿ. ನಿಮಗೆ ಖಂಡಿತವಾಗಿ ಆ ತಿರುಪತಿ ಭಗವಂತನೂ ಒಳ್ಳೆಯದು ಮಾಡಲಿ, ಅಲ್ಲಿಗೆ ಹೋಗುವ ಯಾತ್ರಿಕರಿಗೂ ಕೂಡ ಅನುಕೂಲವಾಗಲಿ, ಹಿಂದೆ ನಾವು ಇದರ ಬಗ್ಗೆ ಸಂಕಲ್ಪ ಮಾಡಿ, ಪ್ರಯತ್ನ ಮಾಡಿದ್ದೆವು, ಈಗ ತಾವು ಅದನ್ನು ಮುಂದುವರೆಸಿದ್ದೀರಿ, ಒಳ್ಳೆಯ ಕೆಲಸವಾಗಿದೆ. ತಾವು Airportಗೂ ಕೆಂಪೇಗೌಡರ ಹೆಸರನ್ನು ಇಡಲು ತೀರ್ಮಾನ ತೆಗೆದುಕೊಂಡಿದ್ದೀರಿ. ಆ ವಿಚಾರಕ್ಕೂ ತಮಗೆ ಅಭಿನಂದನೆಗಳನ್ನು ಹೇಳುತ್ತೇವೆ. ಆದರೆ ಒಂದು ಮುಖ್ಯವಾದ ವಿಚಾರವೇನೆಂದರೆ ಡಾ:ನಂಜುಂಡಪ್ಪನವರ ವರದಿ ಏನು ಇದೆ, ಆ ವರದಿಗೆ ತಾವು ಹಣ ಕೊಟ್ಟಿದ್ದೇವೆಂದು ಇಟ್ಟಿದ್ದೀರಿ, specific ಆಗಿ ಸುಮ್ಮನೆ generalize ಮಾಡಬೇಡಿ. ಪ್ರತಿಯೊಂದು ಕ್ಷೇತ್ರದಲ್ಲೂ ಯಾವ್ಯಾವುದು ಹಿಂದುಳಿದಿವೆ, ಈಗ ನೀವು package ಅನ್ನು cityಗಳಿಗೆ ಯಾವ ರೀತಿಯಾಗಿ ಕೊಟ್ಟಿದ್ದೀರಿ, ನಿಮ್ಮ ಬೇಕಾದ ಕ್ಷೇತ್ರಗಳಿಗೆ ಕೊಟ್ಟಿದ್ದೀರಿ, ಡಾ:ನಂಜುಂಡಪ್ಪನವರ ವರದಿಯ ಆಧಾರದ ಮೇಲೆಯೇ ನಾವು ಕನಕಪುರಕ್ಕೆ ಕೊಡಿ, ಇನ್ನೊಂದಕ್ಕೆ ಕೊಡಿ, ಮಾಗಡಿಗೆ ಕೊಡಿಯೆಂದು ಅಲ್ಲ. ಇದಕ್ಕೆ ನಿಮ್ಮದೇ ಆದಂಥ ಒಂದು criteria ಇದೆ. ಇದರಲ್ಲಿ highest ಯಾವುದು, lowest ಯಾವುದೆಂದು ಇದೆ. ಅದರ ಮೇಲೆ ಆದರೂ ಈ ವರ್ಷ ಈ ಬಜೆಟ್‌ನಿಂದ specific ಆಗಿ ಈ ಕ್ಷೇತ್ರಕ್ಕೆಂದು number 1, number 2, 3ಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ, 2 ಕೋಟಿ ಕೊಟ್ಟಿದ್ದೇವೆ, 3 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು, 5 ಕೋಟಿ ಕೊಟ್ಟಿದ್ದೇವೆಂದು, ತಾವು ಹಿಂದೆ 600 ಕೋಟಿ ರೂಪಾಯಿಗಳೆಂದು ಏನು ಮಾತನಾಡಿದ್ದೀರಿ, ಅದರ ಮೇಲೆ ಇವತ್ತು ತಾವು ಏನಾದರೂ ಒಂದು ಉತ್ತರವನ್ನು ಕೊಟ್ಟು ಬಿಟ್ಟರೆ ಅದಕ್ಕಿಂತ ದೊಡ್ಡ ಉಪಕಾರವಿಲ್ಲ, ಏಕೆಂದರೆ ನೀವು ಘೋಷಣೆಯನ್ನು ಮಾಡಿಕೊಂಡು ಬರುತ್ತಿದ್ದೀರಿ.

ನಿಮಗೆ ನಾವು ಯಾವುದಕ್ಕೂ ಅಡ್ಡಿ ಮಾಡಿಲ್ಲ, ನೀವು ಯಾವ ಮಠಕ್ಕಾದರಳೂ ಕೊಡಿ, ಯಾವ ಜನಕ್ಕಾದರೂ ಕೊಡಿ, ನೀವು electionಗೆ ಹೋಗಬೇಕು, ನೀವು ಬದ್ಧರಾಗಿರಬೇಕು. ನೀವು ಬದ್ಧರಾಗಲಿಲ್ಲವೆಂದರೆ, ನಿಮ್ಮ chair ಹೆಚ್ಚು ಕಡಿಮೆಯಾಗುತ್ತದೆ. ಅದೆಲ್ಲಾ ನಮಗೆ ಗೊತ್ತಿದೆ, ಅದರೂ ಕೂಡ ದಯವಿಟ್ಟು ನಮಗೆ ಏನಾದರೂ ಚಿಂತನೆ ಮಾಡಿ, ತಾವು ಸಹಾಯ ಮಾಡಿ ಹಿಂದುಳಿದ ತಾಲ್ಲೂಕುಗಳಿಗೆ ಏನಾದರೂ ಒಂದು announcement ಮಾಡಬೇಕೆಂದು ತಮ್ಮನ್ನು ಒತ್ತಾಯ ಮಾಡುತ್ತೇನೆ.

ಡಾ:ಹೆಚ್.ಸಿ.ಮಹದೇವಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ನಾಲ್ಕನೇ ಬಜೆಟ್ ಅನ್ನು ಮಂಡಿಸಿದ್ದಾರೆ. ಇವರು ಸಮ್ಮಿಶ್ರ ಸರ್ಕಾರದಲ್ಲಿ 2 ಮತ್ತು ಬಿ.ಜೆ.ಪಿ. ಸರ್ಕಾರದ ನೇತೃತ್ವವನ್ನು ವಹಿಸಿ 2 ಬಜೆಟ್ ಅನ್ನು ಸದನದ ಮುಂದಿಟ್ಟಿದ್ದಾರೆ. ಎಲ್ಲಾ ಸಂದರ್ಭಗಳಲ್ಲೂ ಅವರು ಮಾತನಾಡುತ್ತಾ, ಅನೇಕ ಅಭಿವೃದ್ಧಿಯ ಕೆಲಸಗಳ ಬಗ್ಗೆ ವಿಶ್ಲೇಷಣೆಯನ್ನು ಮಾಡಿ ಹಣಕಾಸಿನ ವಿಷಯವನ್ನು ಮಂಡನೆ ಮಾಡುವಾಗ, reply ಕೊಡುವಂಥ ಸಂದರ್ಭದಲ್ಲಿ ಇದಕ್ಕೆ ಯಾರು ಕಾರಣವೆಂದು ಹೇಳುತ್ತಾ, ತಮ್ಮ ಉತ್ತರವನ್ನು ಕೊಡುತ್ತಿದ್ದಾರೆ. ಅವರು ಉತ್ತರ ಕೊಡುವ ಸಂದರ್ಭದಲ್ಲಿ ಅನೇಕ ಪತ್ರಿಕೆಗಳ ಶಿರೋನಾಮೆಯನ್ನು, ಸಂಪಾದಕೀಯವನ್ನು ಉಲ್ಲೇಖ ಮಾಡಿ ಮಾತನಾಡುತ್ತಾ ಯಾರ್ಯಾರು ಕಾರಣವೆಂದು ಮಾತನಾಡಿದ್ದಾರೆ. ಈ ದೇಶದ ಆಡಳಿತ ವ್ಯವಸ್ಥೆಯನ್ನು ಒಂದು ಸಾರಿ ನೋಡಿದಾಗ ಬಹುತೇಕ ಎಲ್ಲಾ ಪ್ರಜಾಪ್ರಭುತ್ವದ ಆಧಾರ ಸ್ಥಂಭಗಳು ತಮ್ಮ ಯಥಾಸ್ಥಿತಿ ವಾದವನ್ನು ಮುಂದುವರೆಸಿಕೊಂಡು ಬಂದಿರುವುದರಿಂದ ದೇಶದಲ್ಲಿ ಇನ್ನೂ ಬಡತನ ಮತ್ತು ಅನಕ್ಷರತೆ ಮುಂದುವರೆಯುತ್ತಾ ಹೋಗುತ್ತಿದೆ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಯಾಥಾಸ್ಥಿತಿ ವಾದ, ನೀವು ಇದಕ್ಕೆ ಕಾರಣ 63ವರ್ಷಗಳೆಂದು ಹೇಳಿದ್ದೀರಿ. ನೀವೇ ಕಾರಣವೆಂದು ಹೇಳುತ್ತಿದ್ದಾರೆ. ದಿದೇವರಾಜ ಅರಸುರವರು ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯಾಗಿದ್ದಾಗ ಮಾಡಿದಂಥ ಕ್ರಾಂತಿಕಾರಕವಾದಂಥ ಬದಲಾವಣೆ, ಯಾರ್ಯಾರು ಗುಲಾಮರಾಗಿ ಜೀತ ಪದ್ಧತಿಯನ್ನು ಮಾಡುತ್ತಿದ್ದರು, ಅವರನ್ನು ಅದರಿಂದ ಬಿಡಿಸಿ, ಪುನರ್ ವಸತಿ ಕಲ್ಪಿಸಿಕೊಂಡುವಂಥ ತೀರ್ಮಾನ, ಇದು ಒಂದು ಐತಿಹಾಸಿಕವಾದ ತೀರ್ಮಾನವಾಗಿದೆ. "ಉಳುವವನೇ ಭೂಮಿಯ ಒಡೆಯ" ಎನ್ನುವಂಥಾದ್ದು, ಸಾಲ ಮಾಡಿ ತೀರಿಸುವುದಕ್ಕೆ ಆಗದೇ ಶತಮಾನಗಳಿಂದಲೂ ಜೀತ ಪದ್ಧತಿಯಲ್ಲೇ ಮುಂದುವರೆಯುವಂಥ ಘಟನೆಗಳಿವೆ. ಈ ರೀತಿ ಅನೇಕ ಕ್ರಾಂತಿಕಾರಕ ಬದಲಾವಣೆ ಕಾಂಗ್ರೆಸ್ ಮತ್ತು ದಿದೇವರಾಜ ಅರಸುರವರ ಕಾಲದಲ್ಲಿ ಮಾಡಿರುವಂಥಾದ್ದನ್ನು ನಾವೆಲ್ಲಾ ಇಡೀ .. .. .

ಅಧ್ಯಕ್ಷರು : ತಾವು ಸ್ಪಷ್ಟೀಕರಣವನ್ನು ಕೇಳಿ, ಏಕೆಂದರೆ ಇನ್ನು ಬಹಳ ಜನ ಶಾಸಕರು ಮಾತನಾಡುವವರು ಇದ್ದಾರೆ.

ಡಾ: ಹೆಚ್.ಸಿ.ಮಹದೇವಪ್ಪ : ಇದರ ಜೊತೆಗೆ ಅದೇ ರೀತಿಯಲ್ಲಿ ಯಾವ ಯಥಾಸ್ಥಿತಿ ವಾದಗಳು ಮಲವನ್ನು ಒಬ್ಬ ಮನುಷ್ಯ ತಲೆ ಮೇಲೆ ಹೊರುತ್ತಿದ್ದ, ಆ ಮಲ ಹೊರುವ ಪದ್ಧತಿಯನ್ನೇ ರದ್ದು ಮಾಡಿದಂಥ ಐತಿಹಾಸಿಕ ತೀರ್ಮಾನವನ್ನು ದಿಃಬಸವಲಿಂಗಪ್ಪನವರು ಮತ್ತು ಶ್ರೀಮತಿ ಇಂದಿರಾಗಾಂಧಿಯವರು ರಾಜ್ಯ ಮತ್ತು ದೇಶದ ಉದ್ಧಗಲಕ್ಕೂ ಕೈಗೊಂಡಿರುವಂಥ ತೀರ್ಮಾನಗಳಾಗಿದೆ. ಇವತ್ತು ದಲಿತರು, ಹರಿಜನರು.. ..

ಅಧ್ಯಕ್ಷರು : ಮಾನ್ಯ ಮಹದೇವಪ್ಪನವರೆ, ತಾವು ಬಜೆಟ್ ಮೇಲೆ ಏನಾದರೂ ಸ್ಪಷ್ಟೀಕರಣವನ್ನು ಕೇಳುವುದಿದ್ದರೆ ಕೇಳಿ. ಇದನ್ನು ಬೇರೆ ದಿವಸಗಳಲ್ಲಿ ಮಾತನಾಡಬಹುದು.

ಡಾ: ಹೆಚ್.ಸಿ.ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವಿ ಏನೆಂದರೆ ನಾವೆಲ್ಲರೂ ಪದೇ ಪದೇ ಕೇಳುತ್ತಿದ್ದೇವೆ. ಕಳೆದ ಬಜೆಟ್‌ನಲ್ಲಿ ಬೆಳಗಾಂನಲ್ಲಿ ಕೇಳಿದೆವು, 3,242 ಕೆಓಟಿ ರೂಪಾಯಿಗಳು SC/STಗೆ ಇದೆ. ಅದರಲ್ಲಿ 23% ಅಷ್ಟೆ ಖರ್ಚು ಮಾಡಿದ್ದಾರೆ. ಅಂದರೆ ಬರೇ 811 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದಕ್ಕೆ 3,242 ಕೋಟಿ ರೂಪಾಯಿಗಳನ್ನು ಇಟ್ಟಿರುವುದು, ಇದರಲ್ಲಿ ಖರ್ಚು 811 ಕೋಟಿ ರೂಪಾಯಿಗಳನ್ನು ಮಾಡಿರುವಂಥಾದ್ದು. ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ, ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಇದು plan sizeಗೆ SC/ST ಜನಸಂಖ್ಯೆ ಎಷ್ಟು ಇರುತ್ತದೆ, ಅದಕ್ಕೆ ಅನುಗುಣವಾಗಿ ಇಡಬೇಕು ಮತ್ತು ಖರ್ಚು ಮಾಡಬೇಕೆನ್ನುವಂಥಾದ್ದು. ಇದು ರಾಜ್ಯಾಂಗ ಬದ್ಧವಾಗಿರುವಂಥಾದ್ದು, ಇದನ್ನು ಏನು ದಾನ ಕೊಟ್ಟು ಬಿಡುವಂಥಾದ್ದು ಅಲ್ಲ, ಮೀಸಲಾತಿ ಎಂದರೆ ದಾನ ಕೊಟ್ಟು ಬಿಡುತ್ತಿದ್ದೇವೆ, ಪುಕ್ಕಟೆಯಾಗಿ ಕೊಟ್ಟು ಬಿಡುತ್ತಿದ್ದೇವೆ. ನಾವು ಕೊಟ್ಟಿದ್ದು, ನಾವು ಮಾಡಿದ್ದು ಎನ್ನುವಂಥಾದ್ದು ಅಲ್ಲ. ಇದನ್ನು ದೇಶದ ಐತಿಹಾಸಿಕ ತೀರ್ಮಾನದ ಮುಖಾಂತರ ಮೀಸಲಾತಿಯನ್ನು ಒಪ್ಪಿಕೊಂಡು ಶತಮಾನದಿಂದಲೂ ತುಳಿತಕ್ಕೆ ಒಳಗಾಗಿರುವವರಿಗೆ ಕೊಡುತ್ತಿರುವಂಥಾದ್ದು. ಅದುದರಿಂದ ದಯಮಾಡಿ ಇದನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡಬೇಕು. ಇನ್ನು backlog ಹುದ್ದೆಗಳನ್ನು ತುಂಬುವಂಥದ್ದರ ಬಗ್ಗೆ ನಾವು ಒತ್ತಾಯ ಮಾಡಿದೆವು, ಅದನ್ನು ಇದುವರೆಗೂ ಮಾಡಿಲ್ಲ. ಎರಡನೆಯದಾಗಿ, ಸ್ವಾತಂತ್ರ್ಯ ಹೋರಾಟಗಾರರಿಗೆ 3,000 ರೂಪಾಯಿಗಳ pension ಕೊಡುತ್ತಾರೆ. ಬೇರೆಬೇರೆ ರಾಜ್ಯಗಳಲ್ಲಿ 4–5–6 ಸಾವಿರ ರೂಪಾಯಿಗಳ pensionಅನ್ನು ಕೊಡುತ್ತಿದ್ದಾರೆ. ಈ ಬಗ್ಗೆ ಸ್ವಾತಂತ್ರ್ಯ ಹೋರಾಟಗಾರರೂ ಮನವಿ ಮಾಡಿದ್ದಾರೆ. ಅದನ್ನು ಹೆಚ್ಚು ಮಾಡಿ ಎಂದು ಕೇಳಿದ್ದೇವೆ. S.C./S.T.ಗಳು ತೆಗೆದುಕೊಳ್ಳತಕ್ಕಂಥ ಸಾಲಕ್ಕೆ ಇರುವಂಥ 6% ಬಡ್ಡಿಯನ್ನು ಕಡಿಮೆ ಮಾಡಿಕೊಡಿ ಎಂದು ಕೇಳಿದ್ದೇವೆ ಮತ್ತು ಅವರ ಸಾಲವನ್ನು ಮನ್ನಾ ಮಾಡಿಕೊಡಿ ಎಂದು ಕೇಳಿದ್ದೇವೆ. ಭಾಗ್ಯಜ್ಯೋತಿ ಯೋಜನೆಯಲ್ಲಿ ಒಂದು

ಲೈಟ್‌ಗೆ 3,000–5,000–10,000 ರೂ ಬೇಕಾಗುತ್ತದೆ, ಅದನ್ನು ಮನ್ನಾ ಮಾಡಿಎಂದು ಕೇಳಿದ್ದೇವೆ. ಅದ್ಯಾವುದನ್ನೂ ಕೂಡ ಮಾಡುತ್ತಿಲ್ಲ. ಗಂಗಾ ಕಲ್ಯಾಣ ಯೋಜನೆಯ ಸಾಲವನ್ನೂ ರದ್ದು ಮಾಡಿಕೊಡಿ ಎಂದು ಕೇಳಿದ್ದೇವೆ. ಇವುಗಳ್ಯಾವುದನ್ನೂ ಮಾಡದೇ, S.C./S.T., backward classes, ಬಂಜಾರಗಳು ಇವರ ಬಗ್ಗೆ ಏನೂ ಮಾತನಾಡುತ್ತಿಲ್ಲ. ದಯವಿಟ್ಟು ಇವುಗಳ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಹುಟ್ಟುಹಬ್ಬದ ಈ ದಿನ ಗಂಭೀರವಾಗಿ ಪರಿಗಣಿಸಬೇಕು, ಇದು ರಾಜ್ಯಾಂಗಬದ್ಧವಾದಂಥ ಹಕ್ಕು ಆಗಿರುವುದರಿಂದ ಅದನ್ನು ಜಾರಿ ಮಾಡುವುದಕ್ಕೆ ಘೋಷಣೆ ಮಾಡಬೇಕು. ಕಳೆದ ನಾಲ್ಕು ಬಜೆಟ್‌ಗಳಿಂದಲೂ ಕೇಳುತ್ತಿದ್ದೇವೆ, ಅವರು ಚಕಾರ ಎತ್ತುತ್ತಿಲ್ಲ.

ಶ್ರೀ ಹೆಚ್.ಡಿ.ರೇವಣ್ಣ : ಬಜೆಟ್ ಮೇಲೆ ನಾನು ಮಾತನಾಡಲಿಲ್ಲ. ಏಕೆಂದರೆ, ಇದು ಚುನಾವಣಾ ಬಜೆಟ್ ಆಗಿರುವುದರಿಂದ ಅದರ ಬಗ್ಗೆ ನಾನು ಮಾತನಾಡಬಾರದು ಎಂದು ತೀರ್ಮಾನ ತೆಗೆದುಕೊಂಡೆ. ಕೇವಲ ಎರಡು ಕ್ಲಾರಿಫಿಕೇಷನ್‌ಗಳನ್ನು ಕೇಳಬೇಕಾಗಿದೆ, ಅವನ್ನು ಕೇಳುತ್ತೇನೆ. ಒಂದು ಪಡಿತರ ಚೀಟಿಯ ಬಗ್ಗೆ, ಈಗ 78 ಲಕ್ಷ ಪಡಿತರ ಚೀಟಿಯನ್ನು ಕೊಟ್ಟಿದ್ದಾರೆ. ಈಗ additional ಆಗಿ 20 ಲಕ್ಷ ಕೊಡುತ್ತೇವೆ ಎಂದು ಹೇಲಿದ್ದಾರೆ. ಆದರೆ ಇವತ್ತು 38 ಲಕ್ಷ ಅರ್ಜಿಗಳು ಬಂದಿವೆ ಎಂದು ಹೇಳುತ್ತಾರೆ. ಇದಕ್ಕೆ 750 ಕೋಟಿ ಹಣವನ್ನು ಇಟ್ಟಿದ್ದೇವೆ ಎಂದು ಹೇಳುತ್ತಾರೆ. ಆದರೆ ಇದಕ್ಕೆ ಒಟ್ಟು 1,050 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ಹಾಗಾಗಿ, ಇನ್ನೂ 300 ಕೋಟಿ ರೂಪಾಯಿಗಳನ್ನು extra ಇಡುತ್ತಾರೆಯೇ ಅಥವಾ ಕೇವಲ ಚುನಾವಣಾ ದೃಷ್ಟಿಯಿಂದ 3 ತಿಂಗಳಲ್ಲಿ ಮಾಡುವುದಕ್ಕಾಗಿ ಇದು temporary arrangement ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. 10,000 ಕಿಲೋಮೀಟರ್ ರಸ್ತೆ ವಿಷಯವೆಲ್ಲ ಈಗ ಬೇಡ, ಅದೆಲ್ಲ ಏನಾಗುತ್ತದೆ ಎಂದು ಮುಂದಿನ ಅಧಿವೇಶನದಲ್ಲಿ ಕೇಳೋಣ. ನಬಾರ್ಡ್‌ನಲ್ಲಿ 12, 13, 14 ಗಳಿಗೆ ಇವತ್ತಿನವರೆಗೂ ಹಣ release ಆಗುತ್ತಿದೆಯೋ, ಇಲ್ಲವೋ, ಅದಕ್ಕೆ ಕಾರಣಗಳೇನು ಎಂದು ಹೇಳಬೇಕು. ಏಕೆಂದರೆ L.O.C.ಯನ್ನು release ಮಾಡಬೇಕಾದರೆ ದುಡ್ಡು ತೆಗೆದುಕೊಂಡು release ಮಾಡುತ್ತಿದ್ದಾರೆ ಎನ್ನುವ ಬಗ್ಗೆ ನನಗೆ ಒಂದು ಮಾಹಿತಿ ಇದೆ 12, 13, ನಲ್ಲಿ ಎಷ್ಟೆಷ್ಟು release ಮಾಡುತ್ತಿದ್ದಾರೆ, release ಮಾಡದೇ ಇರಲು ಕಾರಣವೇನು? ನಬಾರ್ಡ್‌ನಿಂದ ದುಡ್ಡು ಕೊಡುತ್ತಿಲ್ಲವೇ ಅಥವಾ ರಾಜ್ಯ ಸರ್ಕಾರದ ಕಡೆಯಿಂದೇನಾದರೂ ತೊಂದರೆ ಇದೆಯೇ? ನಬಾರ್ಡ್‌ನಲ್ಲಿ 11ರಲ್ಲೂ ಕೊಟ್ಟಿಲ್ಲ. ಅಂಥ ಪರಿಸ್ಥಿತಿ ಇದೆ. ನಾವು ಇದ್ದಂಥ ಕಾಲದಲ್ಲಿ ನಬಾರ್ಡ್ ಕೊಟ್ಟಂಥ ಹಣವನ್ನು

ವಾಪಸ್ಸು ಕೊಡುತ್ತಿದ್ದೆವು. ಅಷ್ಟಕ್ಕೆ L.O.C. ಕೊಡುತ್ತಿದ್ದೆವು. ಈಗ release ಮಾಡದೇ ಇರಲು ಕಾರಣವೇನು ಎನ್ನುವುದನ್ನು ದಯಮಾಡಿ ಹೇಳಿ.

ಉಪಾಧ್ಯಕ್ಷರು :– ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ರೇಣುಕಾಚಾರ್ಯರವರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಒಂದು ವಿಷಯ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಅವರಿಗೆ ಸಮಾಧಾನಪಡಿಸುವುದಕ್ಕಾದರೂ ಒಂದು ಸದನ ಸಮಿತಿ ಮಾಡಿ. ಮಾನ್ಯ ಧರ್ಮಸಿಂಗ್ ಮತ್ತು ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ ಏನಾದರೂ discrimination ಆಗಿದ್ದರೆ ಅದು ಕೂಡ ಹೊರಕ್ಕೆ ಬರಲಿ. ಮತ್ತೆ ಮಾನ್ಯ ರೇವಣ್ಣ

ಮತ್ತು ಮಾನ್ಯ ಕುಮಾರಸ್ವಾಮಿ ಕಾಲದಲ್ಲಿ ಅಗಿರತಕ್ಕಂಥದ್ದು ಕೂಡ ಹೊರಕ್ಕೆ ಬರಲಿ. ಹಾಗೆಯೇ, ಇವತ್ತಿನದು ಕೂಡ ಹೊರಕ್ಕೆ ಬರಲಿ. ಆದ್ದರಿಂದ, ಒಂದು ಸದನ ಸಮಿತಿ ಮಾಡಿ, ಇದಕ್ಕೆ ನಾವು ಕೂಡ ಒಪ್ಪುತ್ತೇವೆ. ನಿಮ್ಮ ನಾರ್ಮ್ಸ್ ಪ್ರಕಾರ ಏನು ಮಾಡಬೇಕೆಂದು ನಿಮ್ಮ ಪ್ರೊಸೀಡಿಂಗ್ಸ್‌ನಲ್ಲಿ ಎಲ್ಲಾ ಇದೆ. ಹಿಂದೆ ಆಗಿರತಕ್ಕಂಥವುಗಳು ಬಹಳ ಚೆನ್ನಾಗಿ ಆಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿರುವುದು ಪ್ರೊಸೀಡಿಂಗ್ಸ್‌ನಲ್ಲಿದೆ. ಇದರ ಆಧಾರದ ಮೇಲೆ ಎರಡನೆಯದಕ್ಕೆ ಪ್ರಸ್ತಾವನೆ ಕೊಡತಕ್ಕಂಥದ್ದಕ್ಕೆ ಪ್ರಾರಂಭವಾಯಿತು. ಆದರೆ, ಬದಲಾವಣೆ ಮಾಡುವಾಗ ಅವಶ್ಯಕತೆ ಇರತಕ್ಕಂಥ ಕಡೆ ತಾವು ನೋಡಬೇಕಾಗುತ್ತದೆ. ಆದರೆ, ಒಂದು ಸಾರಿ ಕೊಟ್ಟಮೇಲೆ ಪುನ: ನಿಮಗೆ ಬೇಕಾದಂಥ ರೀತಿಯಲ್ಲಿ ಬದಲಾವಣೆ ಮಾಡತಕ್ಕಂಥದ್ದು ಅನ್ಯಾಯವೆಂದು ಹೇಳುತ್ತೇನೆ. ನೀವು ಈಗ ಕೆಲವು ಅಂಕಿ-ಅಂಶಗಳನ್ನು ಹೇಳಿದ್ದೀರಿ. ಆದರೆ, ಇದನ್ನು ಮಾನ್ಯ ರೇವಣ್ಣನವರು ಮಾಡಿದ್ದಾರೆಂದು ಅವರನ್ನು ಸಮರ್ಥನೆ ಮಾಡಿಕೊಂಡು ಹೇಳುತ್ತಿಲ್ಲ. ಅವರ ಕಾಲದಲ್ಲಿ ಅನ್ಯಾಯವಾದಾಗಲೂ ನಾನು ಹೋರಾಟ ಮಾಡಿದ್ದೇನೆ ಮತ್ತೆ ನಬಾರ್ಡ್ ಯೋಜನೆಗಳಲ್ಲಿ ಕೆಲವು ಅನ್ಯಾಯವಾಗಿದ್ದಂಥವುಗಳ ಬಗ್ಗೆ ನಾನು ಬಹಿರಂಗವಾಗಿ ಹೇಳಿದ್ದೇನೆ. ಅಂದರೆ, ಈ ವಿಷಯವನ್ನು ಕ್ಯಾಬಿನೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದೇನೆ. ನಮ್ಮ ನೋಟ್‌ನ್ನು PWD ಯವರದು ತೆಗೆದು ನೋಡಿದರೆ ಗೊತ್ತಾಗುತ್ತದೆ. ಆದರೆ, ಒಬ್ಬರು discriminate ಮಾಡಿದರು, ಮತ್ತೊಬ್ಬರು ತಪ್ಪು ಮಾಡಿದರೆ, ಅದನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ನಾನು ಇನ್ನೊಂದು ತಪ್ಪು ಮಾಡುತ್ತೇನೆಂದು ಹೇಳತಕ್ಕಂಥದ್ದು ನ್ಯಾಯವೇ? ಇದು ಸರ್ಕಾರ ನಡೆಸತಕ್ಕಂಥ ಕ್ರಮವೇ? ಇದನ್ನು ಸರಿಪಡಿಸುತ್ತೇನೆಂದು ಮತ್ತು ಎಲ್ಲಿ ನಿಜವಾಗಿಯೂ ಅವಶ್ಯಕತೆ ಇದೆಯೋ ಅಂಥ ಜಿಲ್ಲೆಗಳಿಗೆ ನಾವು ಪ್ರಾಧನ್ಯತೆ ಕೊಡುತ್ತೇವೆಂದು ಹೇಳಿ. ಆದರೆ, ಇದೇನಾಗಿದೆ ಎಂದರೆ, ಒಂದು ರೀತಿಯಲ್ಲಿ ಬಫೆ ಸಿಸ್ಟಮ್ ಟೈಪ್ ಆಗಿದೆ. ಯಾರಿಗೆ ಎಷ್ಟು ಸಿಗುತ್ತದೆಯೋ ಅಷ್ಟನ್ನು ಹಂಚಿಕೊಂಡು ಹೋಗತಕ್ಕಂಥ ಕೆಲಸವಾಗಿದೆ. ಅವರಿಗೆ ಸಿಕ್ಕಾಗ 1000 ಕಿ.ಮೀ. ಅವರು ಮಾಡಿಕೊಂಡರು. ಈಗ ನಿಮ್ಮ ಕೈಗೆ ಸಿಕ್ಕಿರುವಾಗ ನಾವೇಕೆ ಮಾಡಬಾರದೆಂಬ ವಾದ ನಿಮ್ಮದಾಗಿದೆ. ನೀವು ಸಮರ್ಥನೆ ಮಾಡುವುದನ್ನು ನೋಡಿದರೆ ನಾವೇಕೆ ಮಾಡಬಾರದೆಂಬ ವಾದ ನಿಮ್ಮದಾಗಿದೆ. ನೀವು ಸಮರ್ಥನೆ ಮಾಡುವುದನ್ನು ನೋಡಿದರೆ ನಾವೇಕೆ ಮಾಡಕೊಳ್ಳಬಾರದು ಎಂಬ ರೀತಿಯಲ್ಲಿದೆ. ಇಡೀ ರಾಜ್ಯದ ಎಲ್ಲಾ ಅಭಿವೃದ್ಧಿ ಕೆಲಸ ಮಾಡತಕ್ಕಂಥ ವಿಚಾರ ಇದಾಗಿಲ್ಲ. ಇದು ಕೇವಲ ತಾತ್ಪೂರ್ತಿಕವಾಗಿ ನಿಮ್ಮ ego ವನ್ನು satisfy ಮಾಡಿಕೊಳ್ಳುವುದಕ್ಕೋಸ್ಕರ ಹೇಳತಕ್ಕಂಥ ಮಾತುಗಳಾಗಿವೆ. ಆದ್ದರಿಂದ, ನಿಮಗೆ ಅನ್ಯಾಯವಾಗಿದೆ ಎಂದು ನಿಮ್ಮ ಮನಸ್ಸಿಗೆ ಅನಿಸಿದರೆ ತಕ್ಷಣ ದಯವಿಟ್ಟು ಒಂದು ಕಮಿಟಿ ಮಾಡಿ, ಯಾರ್ಯಾರ ಕಾಲದಲ್ಲಿ ಏನಾಗಿದೆಯೋ ಅದನ್ನು ಹೊರಕ್ಕೆ ತರಲಿ. ಆದರೆ, ಇದನ್ನು ಬದಲಾವಣೆ ಮಾಡತಕ್ಕಂಥ ಪ್ರಮೇಯ ನಿಮಗೆ ಇರಲಿಲ್ಲ. ನಿಮ್ಮ

ಕ್ಷೇತ್ರದಲ್ಲಿ ಅನೇಕವುಗಳನ್ನು ನೀವು ಮಾಡಿಕೊಂಡಿದ್ದಿರಿ. ಅಂದರೆ, maintenance ನಲ್ಲಿ ಮತ್ತು ಸಿ.ಆರ್.ಎಫ್.ನಲ್ಲಿ, 3054 ಹೆಡ್‌ನಲ್ಲಿ ನೀವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಮಾಡಿಕೊಂಡಿದ್ದೀರಿ. ನೀವಿಬ್ಬರೇ ಇದ್ದರೆ ಸರ್ಕಾರವಾಗುವುದಿಲ್ಲ. ನೀವು ಗೆದ್ದು ಬರಬೇಕಾದರೂ ಕನಿಷ್ಟ 120 ರಿಂದ 130 ಸೀಟ್‌ಗಳು ಬೇಕು. ಆದ್ದರಿಂದ, ನೀವು ರಾಜ್ಯದಲ್ಲಿ ದಯವಿಟ್ಟು ಈ ರೀತಿಯಾಗಿ ಮಾಡುವುದಕ್ಕೆ ಹೋಗಬೇಡಿ. ಈ ರೀತಿಯಾಗಿ ತಪ್ಪು ಮಾಡುತ್ತಾ ಹೋದರೆ ಮುಂದೆ ಬರತಕ್ಕಂಥವರು ಇದನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ.

ಶ್ರೀ ಎ.ಮಂಜು :– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಮ್ಮ ನಾಯಕರು ಸ್ಪಷ್ಟವಾಗಿ ಎಲ್ಲವನ್ನೂ ಹೇಳಿದ್ದಾರೆ. ಆದ್ದರಿಂದ, ಮಾನ್ಯ ಮಂತ್ರಿಯವರಲ್ಲಿ ನಾವು ಕೇಳುವುದೇನೆಂದರೆ, ಅವರು ಮಾಡಿದ್ದಾರೆಂದು ಇವರು ಮಾಡುವುದರಿಂದ ನಮ್ಮಂಥ ಬಡ ತಾಲ್ಲೂಕಿಗೆ ಅನ್ಯಾಯವಾಗುತ್ತದೆ. ಇವರು ಯಾವ ಉದ್ದೇಶ ಇಟ್ಟುಕೊಂಡು ಮಾಡಿದ್ದಾರೆಯೋ ಅದೇ ರೀತಿಯಾಗಿ ಮಾಡುತ್ತೇವೆಂದು ತಾವು ಹೇಳತಕ್ಕಂಥ ಉತ್ತರವನ್ನು ಒಪ್ಪುವುದಕ್ಕೆ ನಾವು ತಯಾರಿಲ್ಲ. ಮತ್ತೆ 2nd Phaseಗೆ ಅನುಮೋದನೆ ಕೊಟ್ಟಿರತಕ್ಕಂಥದ್ದರಲ್ಲಿ ಬದಲಾವಣೆ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲ. ಆದ್ದರಿಂದ, ಮೊದಲು ಏನಿತ್ತೋ ಅದರಂತೆಯೇ ನೀವು ದಯವಿಟ್ಟು ಅನುಮೋದನೆಯನ್ನು ಮಾಡಬೇಕು. ಬದಲಾವಣೆ ಮಾಡುವುದಕ್ಕೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿಲ್ಲ. ಆದ್ದರಿಂದ, ವೈಯಕ್ತಿಕವಾಗಿ ಮಾಡುವುದಕ್ಕೆ ನಿಮಗೆ ಹಕ್ಕಿಲ್ಲ. ಮಾನ್ಯ ಮಂತ್ರಿಗಳು ನೀಡಿರುವ ಹೇಳಿಕೆಯನ್ನು ದಯಮಾಡಿ ವಾಪಸ್ಸು ತೆಗೆದುಕೊಳ್ಳಬೇಕು.

(ಗೊಂದಲ)

ಉಪಾಧ್ಯಕ್ಷರು :– ಅವರು ಮೊದಲು ಉತ್ತರ ಕೊಡಲಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ನನಗೆ ಅವಕಾಶ ಕೊಡಿ.

ಉಪಾಧ್ಯಕ್ಷರು :– ನೀವು ಇಷ್ಟ ಬಂದಾಗ ಸದನ ಬಾವಿಗೆ ಬರುತ್ತೀರಿ ಮತ್ತೆ ಮಾತನಾಡುವುದಕ್ಕೆ ನಿಮ್ಮ ಸ್ಥಾನಕ್ಕೆ ಹೋಗುತ್ತೀರಿ. ಆದ್ದರಿಂದ, ಮಾತನಾಡುವುದಕ್ಕೆ ನಿಮಗೆ ಅವಕಾಶ ಕೊಟ್ಟಿಲ್ಲ. ಈಗ ಆ ಪ್ರಶ್ನೆಯನ್ನು ಮುಕ್ತಾಯಮಾಡುತ್ತೇನಷ್ಟೇ. ತಾವು ದಯವಿಟ್ಟು ಉತ್ತರ ಕೊಡಿ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

<u>(ಈ ಹಂತದಲ್ಲಿ ಮಾನ್ಯ ಎ.ಮಂಜುರವರು ಮತ್ತು ಮಾನ್ಯ ಬಿ.ರಮಾನಾಥ್‌ರೈ ರವರು ಸದನದ ಬಾವಿಗೆ ಬಂದು ಧರಣಿಯಲ್ಲಿ ನಿರತರಾದರು)</u>

ಶ್ರೀ ಸಿ.ಎಂ.ಉದಾಸಿ:– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿರತಕ್ಕಂಥ ಮಾತುಗಳನ್ನು ನಾನು ಬಹಳ

ಗಂಭೀರವಾಗಿ ಗಮನಿಸಿದ್ದೇನೆ. ಯಾರಿಗೂ ಕೂಡ ತಾರತಮ್ಯ ಆಗಬಾರದೆಂಬ ಬಗ್ಗೆ ಎರಡು ಮಾತಿಲ್ಲ ಎಂಬ ಬಗ್ಗೆ ಇಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಾನು ಏನು ಹೇಳಿದ್ದೇನೆಂದರೆ, ಈಗ 3411 ಕಿ.ಮೀ.ರಸ್ತೆಗಳು ಏನಿವೆ, ಆ ರಸ್ತೆಗಳನ್ನು ಹೊರತುಪಡಿಸಿ ಬೇರೆ ಯಾವುದನ್ನು ನಾವು ಮಾಡಿಲ್ಲ. (ಗೊಂದಲ) ಎರಡನೇ ಸಲ ತೆಗೆದುಕೊಳ್ಳುವಂಥ ಸಂದರ್ಭದಲ್ಲಿ ಆ ರಸ್ತೆಗಳನ್ನು ನಾವು ತೆಗೆದುಕೊಳ್ಳುತ್ತೇವೆ. ಅವರು ವಾಗಝರಿ ಮತ್ತು ರಿಬ್ಬನ್‌ಪಲ್ಲಿ ರಸ್ತೆಯ ಬಗ್ಗೆ ಹೇಳಿದರು. ಅದಕ್ಕೆ ಇವತ್ತೇ DCF ನಲ್ಲಿ ಕೊನೆಯ ದಿವಸ ಇದೆ. ಮೂರು ರಸ್ತೆಗಳನ್ನು ತೆಗೆದುಕೊಂಡಿರುವುದರಲ್ಲಿ ಇದೊಂದು ರಸ್ತೆ ಇದೆ. ಟೆಂಡರ್ ಹಾಕುವುದಕ್ಕೆ ಇವತ್ತೇ 27ನೇ ತಾರೀಖು ಕೊನೆಯ ದಿವಸ ಇತ್ತು. ಇದು ಫೈನಲ್ ಇದ್ದು, ಇದರಲ್ಲಿ ನಾಲ್ಕಾರು ಜನ ಭಾಗಿಯಾಲಿಕ್ಕೆ ಬಂದಿದ್ದಾರೆ. ಈ ವಾಗ್‌ಝರಿ – ರಿಬ್ಬನ್‌ಪಲ್ಲಿ ರಸ್ತೆ ಆಗುತ್ತದೆಂದು ತಮ್ಮೆದುರಿಗೆ ಹೇಳುವುದಕ್ಕೆ ನಾನು ಬಯಸುತ್ತೇನೆ. ವಾಡಿ–ರಾಯಚುರು ರಸ್ತೆ ಈಗ ಮುಗಿದಿದೆ. ಆದರೆ ಗುಲ್ಬರ್ಗಾ–ವಾಡಿ ರಸ್ತೆ ಇನ್ನು ಕೆಲವೇ ದಿವಸಗಳಲ್ಲಿ ತೆಗೆದುಕೊಳ್ಳುವ ಕೆಲಸ ಮಾಡುತ್ತೇವೆ ಎನ್ನುವಂಥದ್ದನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ. 3411 ಕಿ.ಮೀ. ರಸ್ತೆ ಏನಿದೆ, ನಾವು ಮೊದಲು ಐಡೆಂಡಿಟಿಫೈ ಮಾಡಿರುವಂಥ ರಸ್ತೆಗಳನ್ನು, ಆ ರಸ್ತೆಗಳನ್ನು ಹೊರತುಪಡಿಸಿ ನಾವು ಯಾವುದನ್ನೂ ತೆಗೆದುಕೊಂಡಿಲ್ಲ.

ಉಪಾಧ್ಯಕ್ಷರು :– ಮಾನ್ಯ ಸಚಿವರು ಉತ್ತರವನ್ನು ಹೇಳಲಿ, ಯಾರು ವೆಲ್‌ನಲ್ಲಿ ಇರುವವರು ಮಾತನಾಡಬೇಡಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ಮೇ ತಿಂಗಳೊಳಗೆ ಆದ್ಯತೆಯ ಮೇಲೆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆಂದು ಅತ್ಯಂತ ಗೌರವದಿಂದ ಹೇಳುವುದಕ್ಕೆ ಬಯಸುತ್ತೇನೆ. ತಾವು ಸಹಕಾರ ಮಾಡುತ್ತೀರೆಂದು ವಿನಂತಿಸಿಕೊಳ್ಳುತ್ತೇನೆ....

(ಗೊಂದಲ)

ಉಪಾಧ್ಯಕ್ಷರು :– ಪ್ರಶ್ನೋತ್ತರ ಅವಧಿಯನ್ನು ಈಗ ಮುಕ್ತಾಯ ಮಾಡಿದ್ದೇನೆ. ಈಗ ಮುಂದಿನ ವಿಷಯಕ್ಕೆ ಹೋಗುತ್ತಿದ್ದೇನೆ. ದಯವಿಟ್ಟು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

(ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಸ್.ಸುರೇಶ್ ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಇಂದಿನ 5ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 66 ಪ್ರಶ್ನೆಗಳ ಪೈಕಿ 63 ಪ್ರಶ್ನೆಗಳಿಗೆ ಉತ್ತರಗಳನ್ನು ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು :– ಮಂಡಿಸಲಾಯಿತು.

ಅನುಬಂಧ–8

ಶ್ರೀ ಎಸ್.ಸುರೇಶ್ ಕುಮಾರ್(ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ದಿನಾಂಕ: 27.2.2009 ರಂದು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಯ ಪ್ರಸ್ತಾಪವನ್ನು ಮಂಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ 3 ವಿಧಾನಸಭಾ ಸದಸ್ಯರುಗಳನ್ನು ನಾಮ ನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರವನ್ನು ನೀಡಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು :– ಪ್ರಸ್ತಾಪ ಅಂಗೀಕರಿಸಲಾಯಿತು. ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಸಹಕಾರ ನೀಡಿ, ನಾನು ಎಲ್ಲರಲ್ಲಿ ವಿನಂತಿಯನ್ನು ಮಾಡುತ್ತೇನೆ, ಸದನವನ್ನು ನಡೆಸೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು):– ಮಾನ್ಯ ಉಪಾಧ್ಯಕ್ಷರೆ, ತಮಗೆ ಗೊತ್ತಿದೆ, World Bankದಾಗಲೀ ಅಥವಾ ಬೇರೆ ಯಾವುದೇ ವಿಚಾರದಲ್ಲಿ 5 ಕೋಟಿ ರೂ.ಗಳಿಂತ ಹೆಚ್ಚಿನ ಬೇರೆ ಯಾವುದೇ ಯೋಜನೆಗಳು ಇದ್ದರೆ ಅದನ್ನು ನೀವು ಬದಲಾವಣೆ ಮಾಡಬೇಕಾಗಲಿ, ಆ ಪ್ರಸ್ತಾವನೆಯನ್ನು ಒಪ್ಪಬೇಕಾದರೆ ನಿಮ್ಮ Business Transaction Rules ಪ್ರಕಾರ ಇದನ್ನು cabinet ನಲ್ಲಿ ಇಟ್ಟು ನೀವು ಬದಲಾವಣೆ ಮಾಡಬೇಕು. ಅದನ್ನು ಬದಲಾವಣೆ ಮಾಡಿದ್ದೀರೋ ಹೇಗೆ? ಮಾಡಿದ್ದರೆ ಯಾವ ಕ್ಯಾಬಿನೆಟ್‌ನಲಿ ಯಾವ ದಿನಾಂಕದಂದು ಮಾಡಿದ್ದೀರಿ. ಮಾಡದೇ ಇದ್ದರೆ ಇದಕ್ಕೆ ಕಾರಣವೇನು? ಇವತ್ತು ನೀವು ಸ್ವಲ್ಪ ಜ್ಯೋಶ್‌ನಲ್ಲಿದ್ದೀರಿ. ಒಂದು ಸಾರಿ ಸಿಕ್ಕಿಬಿದ್ದರೆ ಯಾರೇ ಇರಬಹುದು ಹೊರಗೆ ಬರುವುದಕ್ಕಾಗುವುದಿಲ್ಲ. ನಾವು Business Transaction Rules ಒಳಗಡೆ ಕೆಲಸ ಮಾಡದೆ ಹೋದರೆ, ಇವತ್ತಲ್ಲ ನಾಳೆ ಸಿಕ್ಕಿ ಬೀಳುತ್ತೀರಿ. ದಯವಿಟ್ಟು ಇದನ್ನು World Bank ಒಪ್ಪಿದೆಯೋ ಹೇಗೆ? ಅಥವಾ World Bankಗೆ ನೀವು ಒಪ್ಪಿಸಬೇಕಾದರೆ cabinet decision ತೆಗೆದುಕೊಂಡಿದ್ದೀರೋ ಹೇಗೆ? ಮಾಡಿದ್ದರೆ ಎಂದು ಮಾಡಿರುತ್ತೀರಿ, ಯಾವ ದಿನಾಂಕಕ್ಕೆ ಮಾಡಿರುತ್ತೀರಿ ಅದನ್ನು ಹೇಳಬೇಕು.

ಉಪಾಧ್ಯಕ್ಷರು :– ನಾನು ಪ್ರಶ್ನೋತ್ತರವನ್ನು ಮುಕ್ತಾಯ ಮಾಡಿದ್ದೇನೆ. ಉದಾಸಿಯವರೆ ಉತ್ತರವನ್ನು ಹೇಳಿ.

ಶ್ರೀ ಸಿ.ಎಂ.ಉದಾಸಿ :– ನನಗೆ ಅಧಿಕಾರಿಗಳಿಂದ ಬಂದ ಮಾಹಿತಿಯ ಪ್ರಕಾರ World Bank ನ ಯಾವುದೇ workಗಳಿಗೆ ಸಹಿತ amount ಪ್ರಶ್ನೆ ಬಂದಾಗ cabinetಗೆ ಇದು ಬರಬೇಕಾದ ಅವಶ್ಯಕತೆ ಇಲ್ಲವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಆದ್ದರಿಂದ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಉಪಾಧ್ಯಕ್ಷರೆ, ಕೆ–ಶಿಫ್ ಎನ್ನುವಂಥದ್ದು it is an agreement between the Government of

Karnataka and the World Bank. ಒಂದು technical feasibility reportನ್ನು independent agency ಯಿಂದ ಮಾಡಿಸಿ ಆ programme ನ್ನು approve ಮಾಡಿರುವಂಥದ್ದು ಅದನ್ನು ಬದಲಾವಣೆ ಮಾಡಬೇಕಾದರೆ cabinetನಲ್ಲಿ approve ಆಗುವುದರ ಜೊತೆಗೆ World Bank ಒಪ್ಪಿದರೆ ಮಾತ್ರ ಸಾಧ್ಯ ಆಗುತ್ತದೆ. (ಗೊಂದಲ) ಇದರಲ್ಲಿ World Bank approval ಕೊಟ್ಟಿಲ್ಲವೆಂದರೆ ಏಕಾಏಕಿ ಟೆಂಡರ್‌ನ್ನು ಕರೆದಿದ್ದಾರೆಂದು ಹೇಳಿದರೆ they are flouting all the rules.

(ಗೊಂದಲ)

ಶ್ರೀ ಸಿದ್ದು ಸವದಿ :– ಕೆ–ಶಿಫ್‌ನಲ್ಲಿ ಬಹಳಷ್ಟು ಉತ್ತರ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದಾರೆ. ಇವರು ಆಗ ನಮಗೆ ರಸ್ತೆಗಳನ್ನು ಕೊಟ್ಟೇ ಇಲ್ಲ. (ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಒಂದು ಕೊನೆಯಾಗಬೇಕಾಗುತ್ತದೆ. World Bank ನಿಂದ ಇವರಿಗೆ ಎರಡನೆಯ ಹಂತಕ್ಕೆ ಒಂದು ರೂ.ಗಳು ಸಿಗುವುದಕ್ಕೆ ಸಾಧ್ಯವಿಲ್ಲ. (ಗೊಂದಲ)

ಶ್ರಿ ಸಿದ್ದು ಸವದಿ :– ಅದಕ್ಕಾಗಿ ನಮ್ಮ ಸರ್ಕಾರದಲ್ಲಿ ಮಾನ್ಯ ಸಚಿವರು ಸರಿಪಡಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. (ಗೊಂದಲ)

ಉಪಾಧ್ಯಕ್ಷರು :– ಈ ವಿಷಯವನ್ನು ಮುಕ್ತಾಯ ಮಾಡಿರುವುದರಿಂದ ಮತ್ತೆ ಚರ್ಚೆಗೆ ಅವಕಾಶವಿಲ್ಲ. ಮುಂದಿನ ವಿಷಯಕ್ಕೆ ಹೋಗೋಣ. ಈಗ ಗಮನ ಸೆಳೆಯುವ ಸೂಚನೆ.

(ಗೊಂದಲ)

ಶ್ರೀ ಸಿದ್ದು ಸವದಿ :– ಅನ್ಯಾಯವನ್ನು ಸರಿಪಡಿಸುತ್ತಿದ್ದಾರೆ. ಅದರ ಬಗ್ಗೆ ಅವರು ಹೇಳಬೇಕಲ್ಲವೆ? ನಮಗೆ ಜನ ಓಟು ಹಾಕಿದ್ದಾರೆ, ನಮಗೂ ಕೂಡ ಹೇಳುವುದಕ್ಕೆ ಅವಕಾಶವನ್ನು ಮಾಡಿಕೊಡಿ. ಬರೀ ಅವರೇ ಮಾತನಾಡಿದರೆ. ಹೇಗೆ?

ಉಪಾಧ್ಯಕ್ಷರು :– ಉತ್ತರವನ್ನು ಹೇಳಿಬಿಡಿ.

ಶ್ರೀ ಸಿದ್ದು ಸವದಿ :– ದಕ್ಷಿಣ ಕರ್ನಾಟಕಕ್ಕೆ 3500 ಕೋಟಿ ರೂಪಾಯಿಗಳನ್ನು ಕೊಟ್ಟು, ಉತ್ತರ ಕರ್ನಾಟಕಕ್ಕೆ 1500 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಈ ತಾರತಮ್ಯವನ್ನು ತಾವು ಸರಿಪಡಿಸಬೇಕು. ಅದರ ಬಗ್ಗೆ ತಾವು ಹೇಳಬೇಕಲ್ಲವೆ?

ಉಪಾಧ್ಯಕ್ಷರು :– ದಯಮಾಡಿ ತಾವುಗಳು ಕುಳಿತುಕೊಳ್ಳಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :– ಸುಮಾರು 100 ಕೋಟಿ ರೂಪಾಯಿಗಳ ಬಿಲ್ಸ್ ಲ್ಯಾಪ್ಸ್ ಆಗುತ್ತದೆ. Within one month you cannot do it.

ಶ್ರೀ ಸಿ.ಎಂ.ಉದಾಸಿ :– ನಾನು ಮಾಹಿತಿ ಹಕ್ಕುದಾರಿಕೆಯ ಇಲಾಖಾಧಿಕಾರಿಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ. ನಾನು ನಮ್ಮ ಪ್ರಧಾನ ಕಾರ್ಯದರ್ಶಿಗಳಿಂದ ಮಾಹಿತಿಯನ್ನು ಪಡೆದುಕೊಂಡಿದ್ದೇನೆ.

ಉಪಾಧ್ಯಕ್ಷರು :– ತಾವುಗಳು ದಯಮಾಡಿ ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ಒಂದು ನಿಮಿಷ, ನಾನು ಮಾತನಾಡಬೇಕಾದಾಗ ನಾನು ಗೊತ್ತಿಲ್ಲದಂತಹ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಮಾಹಿತಿಗಳನ್ನು ಪಡೆದುಕೊಂಡೇ ಮಾತನಾಡುತ್ತಿದ್ದೇನೆ. ಆ ಪ್ರಕಾರ ಇರುವುದರಿಂದ ಸ್ಪಷ್ಟವಾಗಿ ಆ ಮಾತುಗಳನ್ನು ಹೇಳುತ್ತಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ರೇವಣ್ಣನವರೆ, ಮಾತನಾಡುವಾಗ ಮಾತ್ರ ತಮ್ಮ ಸ್ಥಾನಕ್ಕೆ ಹೋಗುವುದು ಬೇಡ. ದಯವಿಟ್ಟು ಅಲ್ಲಿಯೇ ಕುಳಿತಿರಿ.

(ಗೊಂದಲ)

ಶ್ರೀ ಸಿ.ಎಂ.ಉದಾಸಿ :– ನಾನು ವಿನಯಪೂರ್ವಕವಾಗಿ ಹೇಳುವುದಿಷ್ಟೆ. Imbalance ಎಲ್ಲಿ ಆಗಿದೆ, ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇನೆ.

ಉಪಾಧ್ಯಕ್ಷರು :– ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :– ಇದನ್ನು ಮುಕ್ತಾಯ ಮಾಡಿರುವುದರಿಂದ ಈ ಬಗ್ಗೆ ಚರ್ಚೆಗೆ ಅವಕಾಶವಿಲ್ಲ. ಈಗ ಗಮನಸೆಳೆಯುವ ಸೂಚನೆಗಳು. ಶ್ರೀಮತಿ ಸೀಮಾ ಅಶೋಕ್ ಮಸೂತಿಯವರೆ ತಾವು ಗಮನ ಸೆಳೆಯಿರಿ.

ತಾವುಗಳು, ತಮ್ಮ ಸ್ಥಾನಗಳಿಗೆ ಹೋಗಿ ಎಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡುತ್ತಿದ್ದೇನೆ. ನೀವು ಬಾವಿಯಲ್ಲಿ ನಿಂತುಕೊಂಡು ಮಾತನಾಡುವುದು ಬೇಡ ತಾವು ತಮ್ಮ ಸ್ಥಾನಗಳಿಗೆ ಹೋಗಿ.

(ಗೊಂದಲ)

ಶ್ರೀಮತಿ ಸೀಮಾ ಅಶೋಕ್ ಮಸೂತಿ: ರಾಜ್ಯದ ಎಲ್ಲಾ ಮಹಿಳಾ ಕಾಲೇಜುಗಳನ್ನು ಬಿಜಾಪುರದಲ್ಲಿ ಏಕೈಕ ಹಾಗೂ ಪ್ರತಿಷ್ಠಿತ ಮಹಿಳಾ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡಿಸುವ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ(ಜಲಸಂಪನ್ಮೂಲ ಸಚಿವರು):–ಈ ವಿಷಯವು ಪದೇಪದೇ ಸದನದಲ್ಲಿ ಬರುವುದರಿಂದ ಕೆಲವೊಂದು ಗಂಭೀರವಾದ ಸಲಹೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಯಾವುದೇ ವಿಷಯವನ್ನು ಮುಚ್ಚಿಡುವಂತಹ ಪ್ರಶ್ನೆ ಇಲ್ಲ. ಈಗಾಗಲೇ

ಅವರು ಹೇಳಿದ್ದಾರೆ. ಆದರೂ ಕೂಡ ಮಾನ್ಯ ವಿರೋಧಪಕ್ಷದ ನಾಯಕರು ಗಂಭೀರವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ರೇವನ್ನನವರು ಮತ್ತು ಜೆಡಿಎಸ್‌ನ ಸದಸ್ಯರುಗಳು ಕೆಲವು ಆಕ್ಷೇಪವನ್ನು ಎತ್ತಿದ್ದಾರೆ. ಈ ಒಂದು ವಿಷಯದಲ್ಲಿ ಪಿಡಬ್ಲ್ಯೂಡಿ ಸಚಿವರುಗಳು ಒಂದು ವಿಶೇಷವಾದಂತಹ ಸಭೆಯನ್ನು ಕರೆದು ಫ್ಲೋರ್ ನಾಯಕರುಗಳನ್ನು ಕರೆದು ಏನೇನು ನಡೆದಿದೆ World Bankನಲ್ಲಿ approve ಎಷ್ಟು ಆಗಿದೆ, ಯಾವಾಗ ಎಷ್ಟೆಷ್ಟು ಹಣವು ಬಿಡುಗಡೆಯಾಗಿದೆ ಮತ್ತು ಯಾವ್ಯಾವ ರೋಡ್‌ಗಳನ್ನು ತೆಗೆದುಕೊಂಡಿದ್ದಾರೆ, ಬದಲಾವಣೆಯಾಗಿದ್ದರೆ ಏನಾಗಿದೆ ಈ ಬಗ್ಗೆ ಇದಕ್ಕೆ Project Governing Board ಎಂದು ಇದೆ. Chief Secretaryಯವರ ಅಧ್ಯಕ್ಷತೆಯಲ್ಲಿ ಇದು ಇದೆ. ಇ ಎಲ್ಲಾ ವಿಚಾರಗಳನ್ನು ಸನ್ಮಾನ್ಯ PWD ಮಂತ್ರಿಗಳು ಸಭೆಯನ್ನು ಕರೆದು ಫ್ಲೋರ್ ನಾಯಕರುಗಳನ್ನು ಕರೆದು ಎಲ್ಲಾ ವಿಷಯವನ್ನು ಮಂಡಿಸುತ್ತಾರೆ. ಏನಾದರೂ ತಪ್ಪುಗಳಿದ್ದರೆ ಅದನ್ನು ಸರಿಪಡಿಸುವುದಕ್ಕೆ ಅನುಕುಲವಾಗುತ್ತದೆ. ಇಲ್ಲಿ ಎಲ್ಲರ ಉದ್ದೇಶವೇನೆಂದರೆ, ಎಲ್ಲಾ ಭಾಗದಲ್ಲಿಯೂ ಸಮಗ್ರವಾಗಿ ಅಭಿವೃದ್ಧಿಯಾಗಬೇಕು. ನಮ್ಮ ನಮ್ಮ ಕ್ಷೇತ್ರಗಳು ಅಭಿವೃದ್ಧಿಯಾಗಬೇಕು. ಅದೇ ದೃಷ್ಟಿಕೋನ ಇದೆ. ಬೇರೆ ಏನೂ ದೊಡ್ಡ ವಿಚಾರವಿಲ್ಲ. ಆ ಹಿನ್ನೆಲೆಯಲ್ಲಿ ನಮ್ಮ PWD ಮಂತ್ರಿಗಳು ಎಲ್ಲರನ್ನು ಕರೆದು ಏನೇನು ಆಗಿದೆ ಎಂದು ಸಂಪೂರ್ಣವಾದ ವಿವರಗಳನ್ನು ಕೊಡುತ್ತಾರೆ. ಏನಾದರೂ ತಪ್ಪುಗಳು ಇದ್ದರೆ ಅದನ್ನು ಸರಿಪಡಿಸುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕಾಗಿ ಎಲ್ಲರೂ ಸೇರಿ ಮಾಡುವುದರಿಂದ ನಾನು ನಮ್ಮ ಜೆಡಿಎಸ್ ನಾಯಕರುಗಳಿಗೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಆ ಸಭೆಯಲ್ಲಿ ತಮ್ಮದೇನಾದರೂ ಆಕ್ಷೇಪಣೆಗಳು ಇದ್ದರೆ ವ್ಯಕ್ತಪಡಿಸಬಹುದು. ಬೇರೆ ಕಲಾಪಗಳು ನಡೆಯುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಜಾಗದ ಸಮಸ್ಯೆಯಿಂದ ಎಂದರೆ ನಾವು ಒಪ್ಪಿಕೊಳ್ಳುತ್ತೇವೆ. ಅವರು ರಿಪೋರ್ಟ್‌ನ್ನು ತರಿಸಲಿ, ರಸ್ತೆ ಮಾಡಲಿಕ್ಕೆ ಜಾಗದ ತೊಂದರೆಯಾಗಿದ್ದರೆ, acquisition ತೊಂದರೆಯಾಗಿದ್ದರೆ, ಆ ವಿಷಯವನ್ನು ಮಾನ್ಯ ಮಂತ್ರಿಗಳು ಹೇಳಿದರು.

ಉಪಾಧ್ಯಕ್ಷರು :- ಈಗ ಈಗ ವಿಚಾರವನ್ನು ಮುಕ್ತಾಯ ಮಾಡಿರುವುದರಿಂದ ಮತ್ತೆ ಚರ್ಚೆಗೆ ಅವಕಾಶವಿಲ್ಲ. ಚರ್ಚೆ ಮಾಡಬೇಕೆಂದರೆ ಆಮೇಲೆ ಚರ್ಚೆ ಮಾಡೋಣ. ಈಗ ಬೇರೆ ವಿಚಾರಕ್ಕೆ ಹೋಗಿದ್ದೇನೆ.

(ಈ ಹಂತದಲ್ಲಿ ಮಾನ್ಯ ಬಾಲಕೃಷ್ಣರವರು ತಮ್ಮ ಸ್ಥಾನಕ್ಕೆ ಹೋದರು)

ಶ್ರೀ ಹೆಚ್.ಸಿ.ಬಾಲಕೃಷ್ಣ :- ದಯವಿಟ್ಟು ಅದನ್ನು ಸರಿಪಡಿಸುವುದಕ್ಕೆ ಹೇಳಿ. ಜಾಗದ ಸಮಸ್ಯೆ ಇದ್ದರೆ ನಾವೆಲ್ಲಾ ಒಪ್ಪಿಕೊಳ್ಳುತ್ತೇವೆ. ನಾವೆಲ್ಲರೂ

ವೆಲ್‌ನಿಂದ ವಾಪಸ್ಸು ಹೋಗುತ್ತೇವೆ. ಜಾಗದ ಸಮಸ್ಯೆ ಇಲ್ಲದೆ ಸುಮ್ಮನೆ ಗೊಂದಲ ಮಾಡುವುದಕ್ಕೆ ಜಾಗದ ಸಮಸ್ಯೆ ಎಂದು ಹೇಳಿದರೆ ಒಪ್ಪುವುದಕ್ಕಾಗುತ್ತದೆಯೇ? ದುರುದ್ದೇಶದಿಂದ ಇದನ್ನು ಬದಲಾವಣೆ ಮಾಡಿರತಕ್ಕಂಥದ್ದು. ಅದನ್ನು ಸರಿಪಡಿಸುವುದಕ್ಕೆ ಮಾನ್ಯ ಮಂತ್ರಿಗಳಿಗೆ ಹೇಳಬೇಕು. ಅಲ್ಲಿ ಜಾಗ ಇಲ್ಲವೆಂದರೆ ನಾವು ಒಪ್ಪಿಕೊಳ್ಳುತ್ತೇವೆ. ಮಾನ್ಯ ಮಂತ್ರಿಗಳು ಸದನದಲ್ಲಿ ಸುಳ್ಳು ಹೇಳಿದರೆ ನಾವು ಎಲ್ಲಿ ಹೋಗುವುದು ಸ್ವಾಮಿ?

ಶ್ರೀ ಸಿದ್ದು ಸವದಿ :– ಆಗ ಉತ್ತರ ಕರ್ನಾಟಕದ ನಮ್ಮ ಜಿಲ್ಲೆಗಳಿಗೆ ಅನ್ಯಾಯವಾಗಿದೆ. ಇವರು ಮೊದಲು ಯಾವ ರೀತಿ ಅನ್ಯಾಯ ಮಾಡಿದರು ಎನ್ನುವ ಬಗ್ಗೆ ತನಿಖೆಯಾಗಬೇಕು. ಅದನ್ನು ಸರಿಪಡಿಸುವ ಕೆಲಸವನ್ನು ಈಗ ನಮ್ಮ ಸರ್ಕಾರ ಮಾಡುತ್ತಿದೆ. 3500 ಕೋಟಿ ರೂ.ಗಳನ್ನು ಆ ಭಾಗಕ್ಕೆ ಕೊಟ್ಟು ನಮ್ಮ ಭಾಗಕ್ಕೆ 1500 ಕೋಟಿ ಕೊಟ್ಟು ನಮ್ಮ ಭಾಗಕ್ಕೆ ಅನ್ಯಾಯವನ್ನು ಮಾಡಿರುತ್ತಿರಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :– ಅನ್ಯಾಯ ಆಗಿರುವುದನ್ನು ಅವರು ಸರಿಪಡಿಸಲಿ. ಅದಕ್ಕೆ ನಮ್ಮದೇನೂ ತಕರಾರಿಲ್ಲ. ನಮ್ಮ ಮೂಲ ಪ್ರಶ್ನೆ ಏನೆಂದರೆ ಜಾಗ ಇಲ್ಲವೆಮದು ಅದನ್ನು ಬದಲಾವಣೆ ಮಾಡಿದ್ದೇವೆಂದು ಹೇಳಿದ್ದಾರೆ. ಜಾಗವಿಲ್ಲವೆಂದರೆ ಅವರು ಬದಲಾವಣೆಯನ್ನು ಮಾಡಿಕೊಳ್ಳಲಿ. ಜಾಗವಿದ್ದರೆ ವಾಪಸ್ಸು ಕೊಡಲಿ. ಎರಡರಲ್ಲಿ ಒಂದನ್ನು ನೀವು ತೀರ್ಮಾನ ಮಾಡಿ. ಅವರು ಕೊಟ್ಟಿರತಕ್ಕಂಥ ಕಾರನ ಸರಿ ಇದ್ದರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ.

ಉಪಾಧ್ಯಕ್ಷರು :– ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ.ಎಂ.ಉದಾಸಿ :– ಮಾನ್ಯ ಸದಸ್ಯರು ಹೇಳಿದ ಹಾಗೆ ಎಲ್ಲಿ 3411 ಕಿ.ಮೀ.ರಸ್ತೆಗಳಿಗೆ ಒಂದು ಸಲ ಕ್ಯಾಬಿನೆಟ್ ಅಪ್ರೂವಲ್‌ನ್ನು ಕೊಟ್ಟಮೇಲೆ state-wise tenderನ್ನು ಕರೆಯಬೇಕಾದಾಗ ಪ್ರತಿ ಸಾರಿಯೂ ಅದು ಕ್ಯಾಬಿನೆಟ್‌ಗೆ ಹೋಗುವ ಅವಶ್ಯಕತೆ ಇಲ್ಲ.

(ಈ ಹಂತದಲ್ಲಿ ಮಾನ್ಯ ಬಾಲಕೃಷ್ಣರವರು ಸದನದ ಬಾವಿಗೆ ಬಂದರು)

ಉಪಾಧ್ಯಕ್ಷರು :– ಸದನದ ಬಾವಿಯಿಂದ ದಯವಿಟ್ಟು ಯಾರು ಮಾತನಾಡಬೇಡಿ. ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು :– ಮಾನ್ಯ ರೇವಣ್ಣನವರೆ, ತಾವು ಹಿರಿಯ ಸದಸ್ಯರಿದ್ದೀರಿ. ಸದನದ ಬಾವಿಗೆ ಬರುತ್ತೀರಿ, ಒಂದೊಂದು ಸಾರಿ ತಮ್ಮ ಸ್ಥಾನಕ್ಕೆ ಹೋಗುತ್ತೀರಿ. ಎಲ್ಲರೂ ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು :– ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಂಡಿರುತ್ತೇನೆ. ದಯವಿಟ್ಟು ಎಲ್ಲರೂ ಸಹಕರಿಸಿ.

ಶ್ರೀ ಸಿದ್ದು ಸವದಿ :- ನಮಗೆ ಮಾತನಾಡುವುದಕ್ಕೆ 5 ನಿಮಿಷ ಸಮಯವನ್ನು ಕೊಡಿ.

ಉಪಾಧ್ಯಕ್ಷರು :- ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದು ಸವದಿ :- ನಮ್ಮಲ್ಲಿ ಬಡ ಮಕ್ಕಳು ಓದುತ್ತಿದ್ದಾರೆ. ದೊಡ್ಡ ಪ್ರಮಾಣದ ಹಗರಣ ಆಗಿರುವುದರಿಂದ ಅದರ ಬಗ್ಗೆ ತನಿಖೆಯಾಗಬೇಕು?

(ಗೊಂದಲ)

ಶ್ರೀ ಪ್ರಕಾಶ್ ಬಿ.ಹುಕ್ಕೇರಿ :- ಈ ಸಮಸ್ಯೆ ಬಗೆಹರಿಯಬೇಕಾದರೆ ದಯಮಾಡಿ ಉಮೇಶ್ ಕತ್ತಿಯವರಿಗೆ ಹೇಳಿಬಿಡಿ.

ಉಪಾಧ್ಯಕ್ಷರು :- ನಾನು ಗಮನ ಸೆಳೆಯುವ ಸೂಚನೆ ಆಗಲೇ ತೆಗೆದುಕೊಂಡಿರುವುದರಿಂದ ತಾವು ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ. ಸದನವನ್ನು ನಡೆಸಲಿಕ್ಕೆ ಅವಕಾಶವನ್ನು ಮಾಡಿಕೊಡಿ. ಸಾಕಷ್ಟು ಚರ್ಚೆಯಾಗಿದೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಸಲಹೆಯನ್ನು ಕೊಟ್ಟಿದ್ದಾರೆ. ಸದನದ ಬಾವಿಯಲ್ಲಿರುವವರು ಯಾರು ಮಾತನಾಡಬೇಡಿ, ಮಾತನಾಡುವುದು ಇದ್ದರೆ ತಮ್ಮ ಸ್ಥಾನಕ್ಕೆ ಹೋಗಿ.

(ಗೊಂದಲ)

ಶ್ರೀ ಸಿ.ಟಿ.ರವಿ :- ಬೆಳಗಾಂ ಅಧಿವೇಶನ ಸಂದರ್ಭದಿಂದಲೂ ಈ ನಿರ್ಣಯವನ್ನು ನಾನು ಮಂಡಿಸಬೇಕೆಂದು ಇದ್ದೆ. ಅಲ್ಲಿ ಅವಕಾಶ ಸಿಗಲಿಲ್ಲ. ಪರಿಸರಕ್ಕೆ ಆಗತಕ್ಕಂಥ ಹಾನಿಯನ್ನು ಮುಂದಿಟ್ಟುಕೊಂಡು ತಡೆಗಟ್ಟುವ ಸಲುವಾಗಿ ಎಲ್ಲಾ ರಿತಿಯ ಪ್ಲಾಸ್ಟಿಕ್ ಬಳಕೆಯ production ದಿಂದ ಹಿಡಿದು marketing ನಿಂದ ಹಿಡಿದು, ಅದರ ಉಪಯೋಗದವರೆಗೆ, ಅದರ ನಿರ್ಣಯವನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು.

ಉಪಾಧ್ಯಕ್ಷರು :- ಮಾನ್ಯ ಸಚಿವರು ಸಾಕಷ್ಟು ಉತ್ತರವನ್ನು ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದು ಸವದಿ :- ಅವರು ಏನು ಹಗರಣವನ್ನು ಮಾಡಿದ್ದಾರೆ, ಏನೇನು ಅನ್ಯಾಯವನ್ನು ಮಾಡಿದ್ದಾರೆ. ನನಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು :- ಈಗ ಸದನವನ್ನು 10 ನಿಮಿಷಗಳ ಕಾಲ ಮುಂದೂಡಲಾಗಿದೆ.

(ಸದನವು 8 ಗಂಟೆ 20 ನಿಮಿಷಕ್ಕೆ ಮುಕ್ತಾಯಗೊಂಡು ಪುನ: 10 ನಿಮಿಷದ ನಂತರ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಪುನ: 9 ಗಂಟೆ 7 ನಿಮಿಷಕ್ಕೆ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(ಜೆಡಿಎಸ್ ಶಾಸಕಾಂಗ ಪಕ್ಷದ ಶಾಸಕರು ಬಾವಿಯಲ್ಲಿ ಬಂದು ಧರಣಿ ಮುಂದುವರೆಸಿದರು)

ಉಪಾಧ್ಯಕ್ಷರು :– ಎಲ್ಲಾ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು.

ಶ್ರೀ ಎಸ್. ಸುರೇಶ್ ಕುಮಾರ್ :– ತಾವೂ ಲೋಕೋಪಯೋಗಿ ಸಚಿವರಾಗಿದ್ದವರು ದಯವಿಟ್ಟು ತಮ್ಮ ಸ್ಥಾನಕ್ಕೆ ಬನ್ನಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಮಂತ್ರಿಗಳು ಏನು ಹೇಳಿದ್ದಾರೆ. ಎಲ್ಲಿ ಲ್ಯಾಂಡ್ ಅಕ್ವಿಜಿಷನ್ ಇಲ್ಲ, ಅಂತಹ ಕಡೆ ಕೈಬಿಡಿ ನಮ್ಮದೇನೂ ಅಭ್ಯಂತರವಿಲ್ಲ. ಲೋಕೋಪಯೋಗಿ ಸಚಿವರು ಲ್ಯಾಂಡ್ ಅಕ್ವಿಜಿಷನ್ ಇರುವಂತಹ ಕಡೆ ತೊಂದರೆ ಇರುವ ಕಡೆ ಕೈ ಬಿಡುತ್ತೇವೆಂದು ಹೇಳಿದ್ದಾರೆ. ಉಳಿದ ಕಡೆ ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಕಾನೂನು ಸಚಿವರ ಸಮ್ಮುಖದಲ್ಲಿ ಹೇಳಿದ್ದಾರೆ. ಅದು ಮಾಡಿ. ಇಲ್ಲವೆಂದರೆ ನಾವು ಸಭಾತ್ಯಾಗ ಮಾಡಬೇಕಾಗುತ್ತದೆ. 585 ಕಿ.ಮೀ. 375 ಕಿ.ಮೀ. ರಸ್ತೆ ಒಂದೇ ಕಡೆ ಬದಲಾವಣೆ ಮಾಡಿದ್ದಾರೆ. ಅದರ ವಿರುದ್ಧ ಮಾನ್ಯ ಖರ್ಗೆ ಸಾಹೇಬರು ಏನು ಹೇಳುತ್ತಾರೆ, ಅದನ್ನು ನೋಡಿಕೊಂಡು ನಾವು ವಾಕ್ ಔಟ್ ಮಾಡುತ್ತೇವೆ.

ಶ್ರೀ ಸಿ.ಎಂ. ಉದಾಸಿ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರ ಕೋರಿಕೆಯನ್ನು ನಾನು ಗಮನಿಸಿದ್ದೇನೆ. ಈಗ ಟೆಂಡರ್ ಕರೆದಿರುವುದರಿಂದ ಇದರಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಮತ್ತೊಂದು ಹಂತದಲ್ಲಿ ಎರಡು–ಮೂರು ತಿಂಗಳಲ್ಲಿ ಮತ್ತೆ ಟೆಂಡರ್ ಕರೆಯಬೇಕಾಗಿದೆ. ಟೆಂಡರ್ ಕರೆಯಬೇಕಾದಾಗ ಆದ್ಯತೆಯನ್ನು ಈಗ ಬಿಟ್ಟಿರುವುದರಲ್ಲಿ ಈಗ ಮಾಡಬೇಕಾಗಿರುವ ಕೆಲಸದಲ್ಲಿ ನಾವು 3411 ಕಿ.ಮೀ. ರಸ್ತೆಗಳ ಆಯ್ದ ಪಟ್ಟಿಗಳಲ್ಲಿ ಮಾಡಬೇಕಾಗಿದೆ. ಆ ಪಟ್ಟಿಯ ಪ್ರಕಾರ ಈಗ ಬಿಟ್ಟಿರುವುದಕ್ಕೆ ಪ್ರಥಮ ಆದ್ಯತೆ ಕೊಟ್ಟು ಮಾಡಿಸಿ ಕೊಡುತ್ತೇವೆನ್ನುವಂತಹ ಭರವಸೆಯನ್ನು ಕೊಡುತ್ತೇನೆ. ದಯವಿಟ್ಟು ಅವರು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಈ ಪ್ರಶ್ನೋತ್ತರ ಕಾಲದಲ್ಲಿ ಪ್ರಸ್ತಾಪವಾದಂತೆ ಕೆಶಿಪ್‌ನಲ್ಲಿ ತೆಗೆದುಕೊಂಡಂತಹ ರಸ್ತೆಗಳ ಬಗ್ಗೆ ಮತ್ತು ಅದರ ತಾರತಮ್ಯದ ಬಗ್ಗೆ ಸಾಕಷ್ಟು ಚರ್ಚೆ ಆಗಿದೆ ಮತ್ತು ಸದಸ್ಯರು ಕೂಡ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಒಂದಂತೂ ನಿಜ. ಮಾನ್ಯ ಲೋಕೋಪಯೋಗಿ ಸಚಿವರು ಒಪ್ಪಿಕೊಳ್ಳುತ್ತಾರೆ. ಒಪ್ಪಿಕೊಂಡಿದ್ದಾರೆ. ಅವರಿಗೆ ಕಷ್ಟ ಏನಿದೆ ಎಂದರೆ, ಈಗ ಮಾಡಿದ್ದೇನೆ, ಏಕೆ ಬದಲಾವಣೆ ಮಾಡಬೇಕು ಎನ್ನುವುದು ಅವರಿಗೆ ಸ್ವಲ್ಪ ತೊಂದರೆಯಾಗುತ್ತಿದೆ. ಆದರೆ ಹಿಂದಿನ ಪ್ರೊಸಿಡಿಂಗ್ಸ್ ನೋಡಿದಾಗ ಯಾವ್ಯಾವ ಕೆಲಸಗಳನ್ನು ಅವರು ತೆಗೆದುಕೊಂಡಿದ್ದರು, ಆ ಕೆಲಸಗಳಲ್ಲಿ ಬದಲಾವಣೆಯನ್ನು ಮಾಡಿಕೊಂಡು ಟೆಂಡರ್ ಕಾಲ್ಡರ್ ಮಾಡಿದ್ದಾರೆ.

ಅದಕ್ಕೆ ನಾವೇನು ಹೇಲಿದ್ದೇವೆ, ನೀವು ಏನು ಟೆಂಡರ್ ಕಾಲ್ಫರ್ ಮಾಡಿದ್ದೀರಿ, ಅನೇಕ ಸಾರಿ ಕ್ಯಾನ್ಸಲ್ ಮಾಡಿದ್ದಿರಿ. ಇದು ಸರ್ವ ಭಾಗದ ಹಿತದೃಷ್ಟಿಯಿಂದ ಎಲ್ಲರಿಗೂ ಅನುಕೂಲವಾಗಲಿ ಎಂದು ಮಾಡುವುದು. ಇದರಲ್ಲಿ ವಿಶೇಷವಾಗಿ ಏನಾಗಿದೆ, ಮಾನ್ಯ ಸುರೇಶ್‌ಗೌಡರ ಕ್ಷೇತ್ರಕ್ಕೆ ಎಫೆಕ್ಟ್ ಆಗಿದೆ. ಅವರ ಮೂರು ಜನ ಸದಸ್ಯರು ಜೊತೆಗೆ ನಮ್ಮ ಮಾನ್ಯ ಸದಸ್ಯರಾದ ಕಿಮ್ಮನೆ ರತ್ನಾಕರ್ ಅವರ ಕ್ಷೇತ್ರದಲ್ಲಿ ಕೆಲವು ಪೋರ್ಷನ್, ಎಫೆಕ್ಟ್ ಆಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ಅನೇಕ ಜನರಿಗೆ ನೀವು ಮೊದಲು ಅದನ್ನು ತೋರಿಸಿ ಇದು ಸ್ಯಾಂಕ್ಷನ್ ಆಗಿದೆ ಎಂದು ಹೇಳಿ, ಈಗ ತಕ್ಷಣ ನೀವು ಬದಲಾವಣೆ ಮಾಡಿ ಬೇರೆ ನೀವು ಕಾಲ್ಫರ್ ಮಾಡಿದರೆ, ಇದು ಸರಿಯಾಗುವುದಿಲ್ಲ. ಅದಕ್ಕೆ ಬದಲಾವಣೆ ಮಾಡಿ ಕೊಡುತ್ತೇವೆಂದು ಮೊದಲು ಹೇಳಿದಿರಿ. ಈಗ ನಾನು ಅದನ್ನು ಟೆಂಡರ್ ಕಾಲ್ಫರ್ ಮಾಡಿದ್ದೇನೆ, ಮಾಡುವುದಕ್ಕಾಗುವುದಿಲ್ಲ. ನಾನು ಮೇ ತಿಂಗಳಲ್ಲಿ ಇದನ್ನು ಖಂಡಿತವಾಗಿ ಮಾಡಿ ಕೊಡುತ್ತೇನೆ ಎನ್ನುವಂತಹ ಮಾತನ್ನು ಹೇಳುತ್ತಿದ್ದಾರೆ. ಇದನ್ನು ನಾವು ಅನೇಕ ಸಲ ಪ್ರಸ್ತಾಪ ಮಾಡಿಕೊಂಡೇ ಹೋಗುತ್ತಿದ್ದೇವೆ. ಪಿ.ಡಬ್ಲ್ಯೂ.ಡಿ. ರಸ್ತೆ ಇರಬಹುದು, ಕೇ-ಶಿಪ್ ರಸ್ತೆ ಇರಬಹುದು, ಕೆ.ಆರ್.ಡಿ.ಸಿ. ಇರಬಹುದು, ಬೇರೆ ಬೇರೆ ಎಲ್ಲದರಲ್ಲಿಯೂ ಕೂಡ ಈ ರೀತಿಯಾದಂಥ ವ್ಯತ್ಯಾಸಗಳು ಆಗುತ್ತಿವೆ. ಈ ರೀತಿಯಾಗದೇ ಇರುವಂಥ ರೀತಿಯಲ್ಲಿ ನೋಡಿಕೊಂಡು ಹೋಗತಕ್ಕಂಥ ಜವಾಬ್ದಾರಿ ತಮ್ಮದಾಗಿದೆ. ಇವತ್ತು ಕಡೆಯ ದಿವಸ ಬೇರೆಯಾಗಿದೆ. ಅದರಲ್ಲಿಯೂ ಇವತ್ತು ಮಾನ್ಯ ಮುಖ್ಯಮಂತ್ರಿಗಳ ಹುಟ್ಟುಹಬ್ಬವಾಗಿದೆ. ಇವತ್ತು ಅವರು ಸದನದ ಕಾರ್ಯಕಲಾಪವನ್ನು ಅಂತಿಮಗೊಳಿಸಬೇಕೆನ್ನುತ್ತಾರೆ. ಆದರೆ ಅಷ್ಟೇ ಲಾರ್ಜ್ ಅಟೆಂಡೆನ್ಸ್ ಇಲ್ಲ. ನಾನು ಅವರು ಮಾತನಾಡುವಾಗ ಇರಲಿಲ್ಲ. ಅವರು ತಮ್ಮ ಭಾಷಣದಲ್ಲಿ ಮತ್ತೆ ಕೆಲವು ಬೋನಸ್‌ಗಳನ್ನು, ಗಿಫ್ಟ್‌ಗಳನ್ನು ಕೊಟ್ಟರು ಎಂಬುದನ್ನು ನಾನು ನೋಡಿದೆ. ಅವರು ಬಂದಕೂಡಲೇ ಕೆಲವು ಬಿಟ್ಟು ಹೋದಂಥ ಅನೇಕ ಜಾತಿಗಳಿಗೆ ಇನ್ನೊಂದನ್ನು ಕೊಟ್ಟರು ಎಂದು ಹೇಳಿದರು. ಅವರು ಮಾತನಾಡುವಾಗ ಶೆಡ್ಯೂಲ್ಟ್ ಕ್ಯಾಸ್ಟ್ ಬಗ್ಗೆ ಹೇಗೆ ತಾರತಮ್ಯಗಳಾಗಿವೆ ಎಂಬ ಬಗ್ಗೆ ಕೂಡ ಹೇಳಿದರಂತೆ. ನಾನು ಅವರು ಮಾತನಾಡುವ ಸಂದರ್ಭದಲ್ಲಿ ಇದ್ದಿದ್ದರೆ ಅದಕ್ಕೆ ನಾನು ಸರಿಯಾದ ರೀತಿಯಲ್ಲಿ ಜವಾಬು ಕೊಡುತ್ತಿದ್ದೆ. ಯಾರು ಯಾವ ಕಾಲದಲ್ಲಿ ಇಡೀ ದೇಶದಲ್ಲಿಯೇ ಏನು ಪರಿಸ್ಥಿತಿ ಇದೆ, ನಮ್ಮ ರಾಜ್ಯದಲ್ಲಿ ಏನು ಪರಿಸ್ಥಿತಿ ಇದೆ ಎನ್ನತಕ್ಕಂಥದ್ದರ ಬಗ್ಗೆ ನಾನು ಹೇಳಬಹುದಾಗಿತ್ತು. ಆದರೆ ಆ ಸಂದರ್ಭದಲ್ಲಿ ನಾನು ಇರಲಿಲ್ಲ ಅದಕ್ಕಾಗಿ ಆ ಬಗ್ಗೆ ಈಗ ನಾನು ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಈಗೇನಾಗಿದೆಯೆಂದರೆ, ಮುಖ್ಯಮಂತ್ರಿಗಳದ್ದು, ನನಗೆ ಒಂದು ಕಥೆ ಜ್ಞಾಪಕ ಬರುತ್ತಿದೆ. ಇಂದು ಕಡೆಯ ದಿವಸ ಹೇಳುತ್ತೇನೆ. ಇಬ್ಬರು ಬಹಳ ಒಳ್ಳೆಯ ಫ್ರೆಂಡ್ಸ್ ಇದ್ದರು. ಕ್ಲಾಸ್‌ಮೇಟ್ಸ್‌ಗಳಾಗಿ ಇಬ್ಬರು ಚೆನ್ನಾಗಿ ಇಂಜಿನಿಯರಿಂಗ್‌ನಲ್ಲಿ ಓದಿದ್ದರು. ಒಂದೇ ಕಡೆ ಯಾವಾಗಲೂ ಇರುತ್ತಿದ್ದರು.

ಅದರಲ್ಲಿ ಒಬ್ಬ ಏನು ಮಾಡಿದನೆಂದರೆ, ತನ್ನ ಆಸ್ತಿ ಪಾಸ್ತಿ ಉಳಿಸಿಕೊಳ್ಳಬೇಕು, ಇಲ್ಲಿಯೇ ಇರಬೇಕು ಮತ್ತು ರೈತನಾಗಿರಬೇಕೆಂದು ತೀರ್ಮಾನ ಮಾಡಿ ಅವನು ಭಾರತ ದೇಶದ ತನ್ನ ಊರಿನಲ್ಲಿಯೇ ಉಳಿದುಕೊಂಡ. ಇನ್ನೊಬ್ಬನು ತಾನು ಬಿ.ಇ. ಕಲಿತಿದ್ದೇನೆ, ಇಲ್ಲೇ ಉಳಿದರೆ ಬಹಳ ವೇಸ್ಟ್ ಆಗುತ್ತದೆಂದು ತಿಳಿದು ಹೊರದೇಶಕ್ಕೆ ಹೋಗಬೇಕೆಂದು ತೀರ್ಮಾನ ಮಾಡಿ ಅವನು ಹೊರದೇಶದಲ್ಲಿ ಸಿಕ್ಕಂಥ ನೌಕರಿಗೆ ಹೋದ. ಆಮೇಲೆ ಅವನು ಅಲ್ಲಿಗೆ ಹೋದಮೇಲೆ ಅಲ್ಲಿ ಸುಖವಾಗಿದ್ದು ಚೆನ್ನಾಗಿ ಆದಾಯವನ್ನು ಕೂಡ ಗಳಿಸಿಕೊಂಡು ಅಲ್ಲಿಯೇ ಇದ್ದ. ಹತ್ತು–ಹದಿನೈದು ವರ್ಷವಾದ ಮೇಲೆ ಕಡೆಗೆ ಭಾರತ ದೇಶಕ್ಕೆ ಬಂದ. ಅವನು ಊರಿನಲ್ಲಿಯೇ ಇದ್ದ ತನ್ನ ತಂಗಿಗೆ ಮದುವೆಯನ್ನು ಮಾಡಬೇಕಾಗಿತ್ತು. ಸಹಜವಾಗಿ ಹೊರದೇಶದಿಂದ ಗಳಿಸಿಕೊಂಡು ಬಂಧಂಥ ಸಂಪತ್ತಿನಲ್ಲಿ ಹೆಚ್ಚು ಹಣವನ್ನು ಖರ್ಚು ಮಾಡಿ ತಾನು ತನ್ನ ತಂಗಿಗೆ ವೈಭವದಿಂದ ಮದುವೆ ಮಾಡಿ ತನ್ನ ವೈಭವವನ್ನು ತೋರಿಸಬೇಕೆಂದು ಹೇಳಿ ಅವನು ಎಲ್ಲಾ ಪ್ರಯತ್ನಗಳನ್ನೂ ಮಾಡಿದ. ಆದರೆ ಅವನು ಊರು ಬಿಟ್ಟು ಹೋಗಿ ಹದಿನೈದು ಇಪ್ಪತ್ತು ವರ್ಷವಾಗಿದ್ದರಿಂದ ಊರಿನಲ್ಲಿ ಅವನನ್ನು ಯಾರೂ ಗುರುತಿಸುತ್ತಿರಲಿಲ್ಲ. ಇವನು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಹೋಗಿದ್ದರಿಂದ ಶಾರೀರಿಕವಾಗಿ ಬಹಳ ಬದಲಾವಣೆಗಳಾಗಿತ್ತು. ಸಹಜವಾಗಿ ಇವನು ಇಪ್ಪತ್ತು ವರ್ಷಗಳ ನಂತರ ಬಂದಿದ್ದರಿಂದ ಊರಿನವರು ಇವನನ್ನು "ಇವನು ಯಾರು," "ಇವರು ಯಾರು" ಎಂದು ಕೇಳುತ್ತಿದ್ದರು. ಅದಕ್ಕೆ ಅವನು ಏನು ಮಾಡಿದನೆಂದರೆ, ತನ್ನ ತಂಗಿ ಲಗ್ನವಿದೆ, ನಾನು ಏನು ಮಾಡಲಿ, ನನಗೆ ಯಾರೂ ಪರಿಚಯವಿಲ್ಲವೆಂದು ತಿಳಿದುಕೊಂಡು ತನ್ನ ಕ್ಲಾಸ್‌ಮೇಟ್ ಹತ್ತಿರ ಹೋದ. ನೋಡಪ್ಪಾ ನನ್ನ ತಂಗಿಯ ಲಗ್ನ ಫಿಕ್ಸ್ ಮಾಡಿದ್ದೇನೆ, ಅದಕ್ಕಾಗಿ ಈಗ ಎಲ್ಲಾ ಕಡೆ ಹೋಗಿ ಆಮಂತ್ರಣ ಪತ್ರಿಕೆಯನ್ನು ಕೊಡಬೇಕಾಗಿದೆ. ದಯವಿಟ್ಟು ನೀನು ನನ್ನ ಜೊತೆಗೆ ಬಂದು ಸಹಕರಿಸಬೇಕು ಎಂದು ಕೇಳಿಕೊಂಡ. ಅದಕ್ಕೆ ಇವನು ಏನು ಹೇಳಿದನೆಂದರೆ, ನಾನು ಊರು ಬಿಟ್ಟು ಹೊರಗಡೆಯೇ ಹೋಗಿಲ್ಲ, ನನ್ನ ಪರಿಸ್ಥಿತಿ ಬಹಳ ಕೆಟ್ಟುಹೋಗಿದೆ, ನನ್ನ ಮೈ ಮೇಲೆ ಬಟ್ಟೆ ಕೂಡ ಸರಿಯಾಗಿಲ್ಲ, ಬರಗಾಲ ಬಂದದ್ದರಿಂದ ನಾನು ಈಗ ಸಾಕಷ್ಟು ತೊಂದರೆಯಲ್ಲಿದ್ದೇನೆ. ಅದಕ್ಕಾಗಿ ನಾನು ಹೊರಗಡೆ ಮುಖ ತೋರಿಸುವಂತಿಲ್ಲ, ನಾನು ಮನೆಯಲ್ಲಿಯೇ ಇರುತ್ತೇನೆ, ನಾನು ನಿನ್ನ ಜೊತೆಯಲ್ಲಿ ಬರುವುದಕ್ಕಾಗುವುದಿಲ್ಲ, ಅದೂ ಅಲ್ಲದೇ ನೀನು ಇಷ್ಟು ದೊಡ್ಡ ಶ್ರೀಮಂತನಾಗಿದ್ದಿ, ನಿನ್ನ ಜೊತೆಯಲ್ಲಿ ನಾನು ಬಂದರೆ ಜನರು ನನ್ನನ್ನು ನೋಡಿ ನಗುತ್ತಾರೆ, ಅದಕ್ಕಾಗಿ ನಾನು ನಿನ್ನ ಜೊತೆಯಲ್ಲಿ ಬರುವುದಿಲ್ಲವೆಂದ. ಆದರೆ ಇವನ ಮಾತನ್ನು ಕೇಳದ ಸ್ನೇಹಿತನೆಂದ, ಅವೆಲ್ಲಾ ಆಗುವುದಿಲ್ಲ, ಎಷ್ಟೇ ಆದರೂ ನಾವಿಬ್ಬರೂ ಚಿಕ್ಕಂದಿನಿಂದ ಗೆಳೆಯರಾಗಿದ್ದೇವೆ, ನೀನು ಬರಲೇಬೇಕು, ನೀನು ಬರದೇ ಹೋದರೆ ನಾನು ನನ್ನ ತಂಗಿಯ ಲಗ್ನ ಮಾಡುವುದಕ್ಕೆ ಆಗುವುದಿಲ್ಲ, ದಯವಿಟ್ಟು ನೀನು

ಸಹಕರಿಸಬೇಕೆಂದು ಅವನನ್ನು ಕೇಳಿಕೊಂಡ. ಒಂದಲ್ಲ, ಎರಡಲ್ಲ, ಮೂರು ಸಲ ವಿನಂತಿ ಮಾಡಿ ಸ್ನೇಹಿತನನ್ನು ಕೇಳಿಕೊಂಡ ಮೇಲೆ ಕಡೆಗೆ ಏನೂ ಫಾಪ ತಂಗಿಯ ಲಗ್ನ ಮಾಡುತ್ತಿದ್ದಾನೆ. ಇದಕ್ಕೆ ಸಹಕರಿಸಬೇಕೆಂದು ತೀರ್ಮಾನ ಮಾಡಿಕೊಂಡು ಗೆಳೆಯನ ಜೊತೆ ಅತನ ತಂಗಿಯ ಮದುವೆಯ ಆಹ್ವಾನ ಪತ್ರಿಕೆಯನ್ನು ಹಂಚಲು ಬರುವುದಕ್ಕೆ ಒಪ್ಪಿಕೊಂಡ. ಬರುವುದಕ್ಕೇನೋ ಒಪ್ಪಿಕೊಂಡ, ಆದರೆ ಅವನಿಗೆ ಒಳ್ಳೆಯ ಬಟ್ಟೆ ಇರಲಿಲ್ಲ, ಏನು ಮಾಡುವುದು ಎಂದು ಯೋಚನೆ ಮಾಡುತ್ತಿದ್ದ. ಆಗ ಅವನ ಗೆಳೆಯ ಹೇಳಿದ, ನಾನು ದುಬೈನಿಂದ ಬರುವಾಗ ರೆಡಿಮೇಡ್ ಬಟ್ಟೆಗಳನ್ನು ತಂದಿದ್ದೇನೆ, ಶೆರ್ವಾನಿಯನ್ನೂ ಕೂಡ ತಂದಿದ್ದೇನೆ, ಪೈಜಾಮವನ್ನೂ ತಂದಿದ್ದೇನೆ, ಹೊಸ ಚಪ್ಪಲಿಗಳನ್ನೂ ತಂದಿದ್ದೇನೆ ಮತ್ತು ಸದನದಲ್ಲಿರುವ ಕುಳಿತಿರುವ ನಮ್ಮ ಕಟ್ಟಾ ಸುಬ್ರಹ್ಮಣ್ಯನಾಯ್ಡುರವರು ಹಾಕಿಕೊಳ್ಳುವ ಟೋಪಿಯನ್ನೂ ಕೂಡ ತಂದಿದ್ದೇನೆ ಎಂದು ಹೇಳಿದ. ಆ ರೀತಿಯಲ್ಲಿ ಹೇಳಿದ ತಕ್ಷಣ ಇವನೇನು ಹೇಳಿದನೆಂದರೆ, ಬೇಡಪ್ಪಾ, ಆ ರೀತಿಯಲ್ಲಿ ಎಲ್ಲವನ್ನೂ ಹೊಸದಾಗಿರುವುದನ್ನು ನಾನು ಹಾಕಿಕೊಂಡಿರುವುದನ್ನು ನೋಡಿದರೆ ಜನರು ನನ್ನನ್ನು ನೋಡಿ ನಗುತ್ತಾರೆ ಮತ್ತು ಇವೆಲ್ಲವೂ ನಿನಗೆ ಎಲ್ಲಿಂದ ಬಂತು ಎಂದು ಕೇಳುತ್ತಾರೆ. ಆದುದರಿಂದ ನನಗೆ ಅವೆಲ್ಲವೂ ಬೇಡ, ದಯವಿಟ್ಟು ನನಗೆ ಆ ರೀತಿಯಲ್ಲಿ ಮುಜುಗರ ಉಂಟುಮಾಡಬೇಡ ಎಂದ. ಅದಕ್ಕೆ ತಕ್ಷಣ ಈತನ ಎಳೆಯ ಏ, ಆ ರೀತಿ ಎಲ್ಲಾ ಆಗುವುದಿಲ್ಲ, ನೀನು ನನ್ನ ಸ್ನೇಹಿತನಾಗಿದ್ದೀಯ, ನಿನಗೆ ಯಾವ ರೀತಿಯಲ್ಲಿಯೂ ಕೂಡ ಅವಮಾನ ಆಗುವ ಹಾಗೆ ನಾನು ನಡೆದುಕೊಳ್ಳುವುದಿಲ್ಲ, ಈಗ ಮೊದಲು ನನ್ನ ಜೊತೆಗೆ ಬಾ ಹೋಗೋಣವೆಂದು ಹೇಳಿ ಅವನಿಗೆ ಪೈಜಾಮ, ಶರ್ಟ್ ಶೆರ್ವಾನಿ, ಚಪ್ಪಲಿ, ಎವೆಲ್ಲವನ್ನೂ ಹಾಕಿಸಿಕೊಂಡು ಅವನನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ಹೋದ. ಮೊದಲನೆಯದಾಗಿಯೇ ಊರಿನಲ್ಲಿ ಡೆಪ್ಯೂಟಿ ಸ್ಪೀಕರ್ ಮನೆ ಸಿಕ್ಕಿತ್ತು. ಮೊದಲು ಅವರಿಗೆ ಇನ್‌ವಿಟೇಶನ್ ಕೊಡುವುದಕ್ಕೆ ಅವರ ಮನೆ ಕರೆದುಕೊಂಡು ಹೋದ. ಇವರಿಬ್ಬರೂ ಬಂದಿದ್ದಾರೆ ಎಂದು ತಿಳಿದ ಕೂಡಲೇ ಇವರಿಬ್ಬರನ್ನೂ ಅವರ ಮನೆಯವರೆಲ್ಲರೂ ನೋಡುತ್ತಿದ್ದರು. ಯಾವ ಫ್ರೆಂಡ್ ಊರಿನಲ್ಲಿಯೇ ಇದ್ದು ಬಡವನಾಗಿದ್ದನೋ ಅವನು ಹಾಕಿಕೊಂಡಿದ್ದ ಹೊಸ ಶೆರ್ವಾನಿ, ಹೊಸ ಟೋಪಿ, ಹೊಸ ಚಪ್ಪಲಿಗಳನ್ನು ಹಾಕಿಕೊಂಡಿರುವುದನ್ನು ಆ ಮನೆಯವರು ನೋಡಿ ಅವನನ್ನು ಕೆಳಗಿನಿಂದ ಮೇಲಿನವರೆಗೂ ನೋಡಿದರು. ಈ ರೀತಿಯಲ್ಲಿ ಕೆಳಗಿನಿಂದ ಮೇಲಿನವರೆವಿಗೂ ಅವರು ನೋಡುವುದಕ್ಕೆ ಪ್ರಾರಂಭ ಮಾಡಿದ ಮೇಲೆ ಟೋಪಿಯನ್ನು ಬಹಳ ಹೊತ್ತು ನೋಡಿದರು. ಆ ರೀತಿಯಲ್ಲಿ ನೋಡುತ್ತಿರುವುದನ್ನು ದುಬೈನಿಂದ ಬಂದಿದ್ದ ಈತನ ಗೆಳೆಯ ಮಾತನಾಡಿ ಈ ಟೋಪಿ ನನ್ನದೇ, ಅವನ ಹತ್ತಿರ ಇದು ಇರಲಿಲ್ಲ, ಆದುದರಿಂದ ಈ ಟೋಪಿಯನ್ನು ಹಾಕಿಕೊಂಡು ಬಾ ಎಂದು ಹೇಳಿ ಅವನಿಗೆ ಟೋಪಿ ಹಾಕಿಸಿಕೊಂಡು ಅವನನ್ನು ಕರೆದುಕೊಂಡು ಬಂದಿದ್ದೇನೆಂದು ಅವರಿಗೆ ಹೇಳಿದ.

ಇವರ ಮನೆಗೆ ಬರುವ ಮೊದಲೇ ನಿನಗೆ ಅವಮಾನ ಮಾಡುವುದಿಲ್ಲ, ನಿನ್ನನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗುತ್ತೇನೆ, ಎಷ್ಟೇ ಆದರೂ ನಾನು ನೀನು ಒಳ್ಳೆಯ ಗೆಳೆಯರು ಎಂದೆಲ್ಲಾ ಹೇಳಿಬಿಟ್ಟು ಈ ಮನೆಗೆ ಬಂದಕೂಡಲೇ ಈ ಟೋಪಿ ನನ್ನದು ಎಂದುಬಿಟ್ಟನಲ್ಲಾ ಎಂದು ಬೇಜಾರು ಆಡಿಕೊಂಡು ಹೊರಗಡೆ ಬಂದ ತಕ್ಷಣ ನೋಡಪ್ಪಾ, ನಿನ್ನ ಜೊತೆ ಬರುವುದೂ ಬೇಡಾ, ಈ ರೀತಿಯಲ್ಲಿ ಅವಮಾನವಾಗುವುದೂ ನನಗೆ ಬೇಡವೆಂದು ಅವನಿಗೆ ಹೇಳಿ ಅವನ ಜೊತೆಯಲ್ಲಿ ಹೋಗುವುದಕ್ಕೆ ಒಪ್ಪಲಿಲ್ಲ. ತಕ್ಷಣ ಈತನ ಗೆಳೆಯ ಏನು ಹೇಳಿದನೆಂದರೆ, ಇಲ್ಲ, ಇಲ್ಲಾಪ್ಪಾ, ಆ ರೀತಿಯಾಗದಂತೆ ನಾನು ಎಚ್ಚರ ವಹಿಸುತ್ತೇನೆ ಇನ್ನು ಕೇವಲ ಮೂರ್ನಾಲ್ಕು ಕಾರ್ಡ್‌ಗಳಿವೆ, ನನು ಇನ್ನು ಮುಂದೆ ನಿನ್ನ ಬಗ್ಗೆ ಯಾರ ಮನೆಗೆ ಹೋದರೂ ಎನ್ನನ್ನೂ ಹೇಳುವುದಿಲ್ಲ, ದಯವಿಟ್ಟು ಬಾ ಎಂದು ಹೇಳಿ ಅವನನ್ನು ಕರೆದುಕೊಂಡು ಎರಡನೆಯ ಮನೆಗೆ ಹೋದ. ಎರಡನೆಯ ಮನೆಯಲ್ಲಿ ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಯವರಿಗೆ ಇನ್‌ವಿಟೇಶನ್ ಕಾರ್ಡ್ ಕೊಟ್ಟ, ಎನ್‌ವಿಟೇಶನ್ ಕಾರ್ಡ್ ತೆಗೆದುಕೊಂಡು ಪಿ.ಡಬ್ಲ್ಯೂ.ಡಿ ಮಂತ್ರಿಗಳು ಹೊಸ ಬಟ್ಟೆ ಹಾಕಿಕೊಂಡವನನ್ನು ಕೆಳಗಿನಿಂದ ಮೇಲಕ್ಕೆ ನೋಡುವುದಕ್ಕೆ ಪ್ರಾರಂಭ ಮಾಡಿದರು. ಏಕೆಂದರೆ ಊರಿನಲ್ಲಿ ಆತ ಇಂಥ ಹೊಸ ಬಟ್ಟೆಗಳನ್ನು ಹಾಕಿಕೊಂಡು ಯಾವತ್ತೂ ತಿರುಗಿರಲಿಲ್ಲ. ಶೆರ್ವಾನಿಯನ್ನು ಸಚಿವರು ಬಹಳ ಹೊತ್ತ ನೋಡಿದ ಮೇಲೆ ಇವನನ್ನು ಕರೆದುಕೊಂಡು ಬಂದವನು ಸುಮ್ಮನೇ ಇರಬೇಕು ತಾನೆ. ಆದರೆ ಅವನು ಸುಮ್ಮನಿರಲಿಲ್ಲ. ಸಚಿವರು ತನ್ನ ಗೆಳೆಯನ ಶೆರ್ವಾನಿಯನ್ನು ನೋಡುತ್ತಿರುವುದನ್ನು ಗಮನಿಸಿ, ನನ್ನ ಗೆಳೆಯ ಹಾಕಿಕೊಂಡಿರುವ ಶೇರ್ವಾನಿ ನನ್ನದೇ, ಪಾಪ ಇವನ ಹತ್ತಿರ ಬಟ್ಟೆ ಇಲ್ಲವೆಂದು ತಿಳಿದು ನಾನೇ ಇವನಿಗೆ ಶೆರ್ವಾನಿ ಕೊಟ್ಟು ಹಾಕಿಕೊಮಡು ಬಾ ಎಂದು ಹೇಳಿದ್ದೆ. ಅವನು ಹಾಕಿಕೊಂಡಿರುವ ಶೆರ್ವಾನಿ ನನ್ನದೇ ಎಂದು ಸಚಿವರಿಗೆ ಹೇಳಿಬಿಟ್ಟ. ತಕ್ಷನ ಈತನ ಗೆಳೆಯನ ಮನಸ್ಸಿಗೆ ಬೇಜಾರಾಗಿ, ಎಂಥವನ್ನಪ್ಪಾ ಇವನು, ಸಹಾಯ ಮಾಡು ಎಂದು ನನಗೆ ಹೇಳಿ ನನ್ನನ್ನು ಕರೆದುಕೊಂಡು ಬಂದು ಈಗ ಇಲ್ಲಿ ಈ ಶೆರ್ವಾನಿ ನನ್ನದೇ ಎಂದು ಹೇಳಿಕೊಂಡು ನನಗೆ ಅವಮಾನು ಮಾಡುತ್ತಿದ್ದಾನಲ್ಲಾ ಎಂದು ಬೇಜಾರು ಮಾಡಿಕೊಂಡ. ಕಡೆಗೆ ಹೊರಗೆ ಬಂದು ನೋಡಪ್ಪಾ ನಿನ್ನ ಜೊತೆ ಬರುವುದು ಸಾಕಪ್ಪಾ, ನಿನ್ನ ಸಂಗಡ ಬರುವುದು ಬೇಡಾ, ನನಗೆ ಅವಮಾನ ಆಗುವುದೂ ಬೇಡಾ, ನೀನು ಈಗ ಹೋಗು, ನಿನ್ನ ತಂಗಿಯ ಲಗ್ನವನ್ನಾದರೂ ಮಾಡು, ಏನಾದರೂ ಮಾಡು, ನೀನು ಯಾರಿಗೆ ಬೇಕಾದರೂ ಇನ್‌ವಿಟೇಶನ್ ಕೊಡು ಎಂದು ಹೇಳಿದ. ತಕ್ಷಣ ಈತನ ಗೆಳಯ, ನೋಡಪ್ಪಾ ಈ ಊರಿನಲ್ಲಿ ನನಗೆ ಯಾರು ಗೊತ್ತಿಲ್ಲ, ನಾನು ಸಚಿವರ ಮನೆಯಲ್ಲಿ ಆ ರೀತಿ ಹೇಳಿದಕ್ಕೆ ತಪ್ಪಾಯಿತು, ನೀನು ನನ್ನ ಜೊತೆ ಬಾ, ಇನ್ನು ಮೇಲೆ ನಾನು ಮಾತನಾಡುವುದೇ ಇಲ್ಲಾ, ನೀನು ನನಗೆ ಈಗ ಕ್ಷಮಿಸು ಎಂದು ಹೇಳಿ ಕೈಜೋಡಿಸುತ್ತೇನೆ, ಕಾಲು ಹಿಡಿಯುತ್ತೇನೆ

ಎಂದೆಲ್ಲಾ ಹೇಳಿ ಮತ್ತೆ ಆತನನ್ನು ತನ್ನ ಜೊತೆ ಕರೆದುಕೊಂಡು ಹೋದ. ಹೀಗೆ ಹೇಳಿ ಅವನನ್ನೂ ಕರೆದುಕೊಂಡು ಮೂರನೆಯ ಮನೆಗೆ ಹೋದ. ಅದು ಮಾನ್ಯ ಸಚಿವರಾದ ಕಾರ್‌ಜೋಳ್‌ರವರ ಮನೆ. ಅವರ ಮನೆಗೆ ಹೋಗಿ ಕುಳಿತುಕೊಂಡು ತದನಂತರ ಅವರಿಗೆ ಇನ್‌ವಿಟೇಶ್‌ನ್‌ನ್ನು ಕೊಟ್ಟರು. ಆಮೇಲೆ ಟೀ ಕುಡಿದರು. ಆಮೇಲೆ ಸಚಿವರ ಮನೆಯವರೆಲ್ಲರೂ ಹೊಸ ಬಟ್ಟೆ ಹಾಕಿಕೊಂಡಿ ಬಂದಿದ್ದವನನ್ನು ನೋಡಿದರು. ಹೀಗೆ ಆತನನ್ನು ಮೇಲಿಂದ ಕೆಳಗಿನವರೆಗೆ ನೋಡುತ್ತಿದ್ದರು, ಕೆಳಗೇ ಬಿದ್ದಿದ್ದ ಲಾಡಿ ನೋಡಿದರು. ಇವನು ಸುಮ್ಮನೇ ಇರಬೇಕು ತಾನೆ, ಅವನು ಸುಮ್ಮನೇ ಇರದೇ, ಓ ನೀವು ನನ್ನ ಗೆಳಯ ಹಾಕಿಕೊಂಡಿರುವ ಪೈಜಾಮದ ಲಾಡಿ ಕಡೆ ನೋಡುತ್ತಿದ್ದೀರಿ, ನಾನೇ ಅವನಿಗೆ ಆ ಪೈಜಾಮವನ್ನು ದುಬೈನಿಂದ ತಂದುಕೊಟ್ಟಿದ್ದೇನೆ, ಪಾಪ, ಅವನಿಗೆ ಹಾಕಿಕೊಳ್ಳಲು ಪೈಜಾಮ ಕೂಡ ಇರಲಿಲ್ಲ, ಅದಕ್ಕೋಸ್ಕರ ಅವನಿಗೆ ಪೈಜಾಮವನ್ನು ತಂದುಕೊಟ್ಟೆ ಎಂದು ಹೇಳಿದ. ಈತನ ಗೆಳೆಯನಿಗೆ ಇದರಿಂದ . ಮತ್ತೂ ಬೇಜಾರಾಯಿತು, ಅವಮಾನವಾಯಿತು. ಮೊದಲನೆಯ ಮನೆಯಲ್ಲಿ ಟೋಪಿ ಬಗ್ಗೆ ಹೇಳಿದ, ಇನ್ನೊಂದು ಮನೆಗೆ ಹೋದರೆ ಶೆರ್ವಾನಿ ಬಗ್ಗೆ ಹೇಳಿದ, ಇಲ್ಲಿಗೆ ಬಂದಮೇಲೆ ಪೈಜಾಮವೂ ನನ್ನದೇ ಎಂದು ಹೇಳಿಬಿಟ್ಟನಲ್ಲಾ. ಇದರಿಂದ ಎಷ್ಟು ಅವಮಾನವಾಯಿತು ನನಗೆ ಎಂದು ನೊಂದುಕೊಂಡು ಬಹಳ ಬೇಸರದಿಂದ ಎದ್ದು ಹೊರಗಡೆ ಬಂದ. ಅವನು ಹೊರಗಡೆ ಬಂದ ಕೂಡಲೇ ಈತನ ಗೆಳೆಯ ಅವನ ಬೆನ್ನುಹತ್ತಿಕೊಂಡು ಬಂದು ತಪ್ಪಾಯಿತು, ನಿನ್ನ ದಮ್ಮಯ್ಯ, ಇನ್ನು ಮುಂದೆ ನಾನು ಏನೂ ಹೇಳುವುದಿಲ್ಲ, ದಯವಿಟ್ಟು ಮತ್ತೊಮ್ಮೆ ನನ್ನನ್ನು ಕ್ಷಮಿಸು. ನನ್ನ ತಂಗಿಯ ಲಗ್ನವಿದೆ. ನನಗೆ ಈ ಊರಿನಲ್ಲಿ ಯಾರೂ ಗೊತ್ತಿಲ್ಲ ಇನ್ನು ಒಂದು ಕಾರ್ಡ್ ಕೊಡುವುದು ಉಳಿದಿದೆ. ಅದನ್ನು ರೇವಣ್ಣನಿಗೆ ಕೊಟ್ಟು ಹೋಗಿಬಿಡೋಣವೆಂದು ಹೇಳಿ ಅವನನ್ನು ಒಪ್ಪಿಸಿ ಕರೆದುಕೊಂಡು ಹೋದ. ಇಬ್ಬರೂ ಕೂಡ ರೇವಣ್ಣನ ಮನೆಗೆ ಹೋದರು ಅಲ್ಲಿ ಅವರ ಮನೆಯವರೆಲ್ಲರೂ ಕುಳಿತಿದ್ದರು. ರೇವಣ್ಣನವರು ಟೀ, ಬಿಸ್ಕತ್ತು ತರಿಸಿಕೊಟ್ಟರು. ಇವರೂ ಕುಡಿದರು, ರೇವಣ್ಣನವರಿಗೆ ಇನ್‌ವಿಟೇಶನ್ ಕಾರ್ಡ್ ಕೊಟ್ಟರು. ಇನ್‌ವಿಟೇಶನ್ ಕಾರ್ಡ್ ತೆಗೆದುಕೊಂಡು ರೇವಣ್ಣನವರು ಹೊಸ ಬಟ್ಟೆ ಹಾಕಿದ್ದವನನ್ನು ಕೆಳಗಿನಿಂದ ಮೇಲಿನವರೆವಿಗೂ ನೋಡಿ ಚಪ್ಪಲಿ ತುಂಬ ಹೊಸದಾಗಿದೆ, ಬೇರೆ ದೇಶದಿಂದ ತಂದಿರಬಹುದೇನೋ ಎಂದು ಅದನ್ನೇ ಬಹಳ ಹೊತ್ತು ನೋಡುತ್ತಿದ್ದರು. ಈ ರೀತಿ ಅವರು ನೋಡುತ್ತಿರುವುದನ್ನು ನೊಡಿ ಸುಮ್ಮನೇ ಕೂರುವುದಕ್ಕೆ ದುಬೈ ಗೆಳೆಯನಿಗೆ ಆಗಲಿಲ್ಲ. ಈ ಹೊಸ ಚಪ್ಪಲಿಗಳ ಕ್ರೆಡಿಟ್ ಎಲ್ಲಿ ಗೆಳಯನಿಗೆ ಹೋಗಿಬಿಡುತ್ತದೋ ಎಂದು ತಿಳಿದು ತಕ್ಷಣ ಹೇಳಿದ. ಅವನು ಹಾಕಿಕೊಂಡಿರುವ ಚಪ್ಪಲಿಯನ್ನು ದುಬೈನಿಂದ ನಾನೇ ಅವನಿಗೆ ತಂದುಕೊಟ್ಟಿದ್ದು. ಅದು ನನ್ನದೇ ಎಂದು ಹೇಳಿದ. ಈ ರೀತಿಯಲ್ಲಿ ತನ್ನ ಗೆಳೆಯ ಹೇಳಿದ ಕೂಡಲೇ ಚಪ್ಪಲಿ ಹಾಕಿಕೊಂಡಿದ್ದವನಿಗೆ ತಕ್ಷಣ ಸಿಟ್ಟು ಬಂತು. ಇದೇನಿದು

ನಾನು ಇವನಿಗೆ ಸಹಾಯ ಮಾಡುವುದಕ್ಕೆ ಇವನ ಜೊತೆಯಲ್ಲಿ ಮನೆ ಮನೆಗೆ ಹೋಗಿ ಇನ್‌ವಿಟೇಶನ್ ಕಾರ್ಡ್‌ಗಳನ್ನು ಹಂಚಿದ್ದೇನೆ. ಅವನು ತನ್ನ ತಂಗಿಯ ಲಗ್ನವಿದೆಯೆಂದು ಹೇಳಿದ್ದಾನೆ. ನಾನು ಕೂಡ ಅವನ ಜೊತೆ ಮನೆ ಮನೆಗೆ ಹೋಗಿ ಹೇಳಿಕೊಂಡು ಬಂದಿದ್ದೇನೆ. ಆದರೆ ಇವನು ನನಗೆ ಹೋದಲೆಲ್ಲಾ ಟೋಪಿ ನನ್ನದು, ಶೆರ್ವಾನಿ ನನ್ನದು, ಪೈಜಾಮ ನನ್ನದು, ಚಪ್ಪಲಿ ನನ್ನದು ಎಂದು ಹೇಳುತ್ತಿದ್ದಾನಲ್ಲಾ, ಏನು ಇವನು ಈ ರೀತಿಯಾಗಿ ನನಗೆ ಅವಮಾನ ಮಾಡುತ್ತಿದ್ದಾನಲ್ಲಾ ಎಂದು ಬೇಸರ ಪಟ್ಟುಕೊಂಡು ಹೊರಗಡೆ ಬಂದ. ನೋಡಪ್ಪ, ನೀನು ಬಹಳ ದೊಡ್ಡ ಮನುಷ್ಯ ಇದ್ದೀಯಾ, ಬಹಳ ಶ್ರೀಮಂತನಿರಬಹುದು, ಅಗರ್ಭ ಶ್ರೀಮಂತನಾಗಿರಬಹುದು, ಆದರೆ ನಿನ್ನ ಸಹವಾಸ ನನಗೆ ಬೇಡ, ನಿನ್ನಿಂದ ನನಗೆ ಅವಮಾನ ಬೇಡ ಎಂದು ಹೇಳಿ ಅವನೇನು ಮಾಡಿದ ಎಂದರೆ, ಈಗ ನಿನ್ನ ಶೆರ್ವಾನಿ ತೆಗೆದುಕೋ, ನಿನ್ನ ಟೋಪಿ ತೆಗೆದುಕೊ, ನಿನ್ನ ಪೈಜಾಮ ತೆಗೆದುಕೊ, ಏನು ನನ್ನ ಚೆಡ್ಡಿ, ಬನಿಯನ್ ಇದೆ ಅದರಲ್ಲೇ ನಾನು ಮನೆಗೆ ಹೋಗುತ್ತೇನೆ ಎಂದು ಹೇಳುತ್ತಾನೆ. ಹಾಗೆ ಮುಖ್ಯಮಂತ್ರಿಗಳು ಏನು ಮಾಡಲು ಹೊರಟಿದ್ದಾರೆ ಎಂದರೆ, ಒಬ್ಬೊಬ್ಬರಿಗೆ ಒಂದೊಂದು ಕೊಟ್ಟು, ಬಹಳಷ್ಟು ಮಠಾಧೀಶರಿಗೆ, ಎಲ್ಲಾ ದೊಡ್ಡವರಿಗೆ ಕೈಜೋಡಿಸಿ ಈ ಸದನದ ಮೂಲಕ ನಾನು ಕೇಳುಕೊಳ್ಳುತ್ತೇನೆ, ನಾಳೆ ಯಡಿಯೂರಪ್ಪನವರು ಹೋಗಿ ಈ ದೇಗುಲ ನನ್ನದು, ಈ ಬಾಗಿಲು ನನ್ನದು, ಈ ಗುಡಿ ನನ್ನದು, ಈ ಕಳಸ ನನ್ನದು ಎಂದು ಹೇಳಿದರೆ ಬಹಳ ದೊಡ್ಡ ಅವಮಾನವಾಗುತ್ತದೆ. ಅದಕ್ಕಾಗಿ ಬೆಟ್ಟು ಮಾಡಿ ಮಾಡಿ ಕೊಡುವುದಕ್ಕೆ ಹೋಗಬೇಡಿ, ಶೆರ್ವಾನಿ, ಪೈಜಾಮದ ಕತೆಯಾದಂತಾಗುತ್ತದೆ, ಪಾಪ ಅವರಿಗೆ ಅವಮಾನವೂ ಕೂಡ ಆಗುತ್ತದೆ. ಕೊಡುವುದನ್ನು ಕೊಟ್ಟು ಧಾರಳವಾಗಿ ಕೊಟ್ಟಿದ್ದೇನೆಂದು ಹೇಳಿ. ನಾನು ಭೌದ್ಧ ಧರ್ಮಕ್ಕೆ ಕೊಟ್ಟೆ, ನಾನು ಕನಕದಾಸರಿಗೆ ಕೊಟ್ಟೆ, ನಾನು ಛಲವಾದಿಗೆ ಕೊಟ್ಟೆ, ನಾನು ಲಂಬಾಣಿಗೆ ಕೊಟ್ಟೆ, ಹೀಗೆ ಹೇಳಿಕೊಟ್ಟರೆ, ಅದು ಅವಮಾನವೇ ಹೊರತು, ಅದು ಕ್ರೆಡಿಟ್ ಅಲ್ಲ. ಯಾವಾಗಲೂ ಕೊಡುವವರು ನ್ಯಾಯವಾಗಿ ಕೊಡಬೇಕು, ಇಲ್ಲವೆಂದರೆ ಅದರ ಗೋಜಿಗೆ ಹೋಗಬಾರದು. ಅದೇ ರೀತಿಯಾಗಿ ಇವತ್ತು ಉದಾಸಿಯವರು, ಕೊಡುತ್ತೇನೆ, ಕೊಡುತ್ತೇನೆಂದು ಹೇಳಿ ಅವರು ಕೂಡ ಎಲ್ಲಿಗೆ ಬಂದಿದ್ದಾರೆಂದರೆ, ನಿಮ್ಮ ಹಾಗೆ, ಇದು ನಮ್ಮದು ಇದು ನಿಮ್ಮದು, ಅವರಿಬ್ಬರ ಮಧ್ಯದಲ್ಲೇ ನಡೆಯುತ್ತದೆ. ಇಲ್ಲಿಯವರೆಗೆ ನಡೆದ ಘಟನೆಯನ್ನು ನೋಡಿದರೆ, ಉಪರ್ ಶೆರ್ವಾನಿ ಅಂದರೆ ಪರಿಶಾನಿ ಹಾಗೆ ಆಗಿದೆ ಎಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಡಾ:ಬಿ.ಎಸ್.ಯಡಿಯೂರಪ್ಪ: ರೇವಣ್ಣ ಇವರ ಮಾತನ್ನು ಕೇಳಬೇಡಿ, ಅವರು ನಮಗೂ ನಿಮಗೂ ತಂದಿಡುತ್ತಾರೆ, ಮೇ ತಿಂಗಳಲ್ಲಿ ಮಾಡಿಕೊಡುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ, ದಯವಿಟ್ಟು ಸಹಕರಿಸಿ, ನಿಮ್ಮ

ಕೆಲಸವನ್ನು ನಾವು ಮಾಡಿಕೊಡುತ್ತೇವೆ, ನಿಮ್ಮ ಸ್ಥಾನಕ್ಕೆ ತೆರಳಿ, don't worry ಖರ್ಗೆಯವರು ನಿಮಗೆ ಉಪಯೋಗ ಮಾಡುತ್ತಾರೆಂದು ನೀವು ಬಾವಿಯಲ್ಲಿ ನಿಂತುಕೊಂಡರೆ ಅದರಿಂದ ಉಪಯೋಗವಾಗುವುದಿಲ್ಲ, ಕೊನೆಯ ದಿವಸ ಚೆನ್ನಾಗಿರುವುದಿಲ್ಲ, ಉದಾಸಿಯವರೆ ಭರವಸೆಯನ್ನು ಕೊಟ್ಟಿದ್ದಾರೆ, ಅದನ್ನು ನಾನು ಸರಿಪಡಿಸುತ್ತೇನೆ ಬನ್ನಿ.

ಶ್ರೀ ಎಂ.ಮಲ್ಲಿಕಾರ್ಜುನ ಎಂ ಖರ್ಗೆ: ಉದಾಸಿಯವರೇನೋ ಭರವಸೆಯನ್ನು ಕೊಟ್ಟಿದ್ದಾರೆ, ಆದರೆ ಮುಖ್ಯಮಂತ್ರಿಗಳು ಇರುತ್ತಿದ್ದರೆಂದರೆ, ಪ್ರತಿಯೊಂದಕ್ಕು ಟೋಪಿ ಕತೆಯನ್ನು ಏನು ಇದು ನಂದು ಇದು ನಂದು ಎಂದು ನಾನು ಹೇಳಿದ್ದೇನಲ್ಲ ಹಾಗೆ ಹೇಳುತ್ತಿದ್ದರು. ಅದೇ ರೀತಿಯಾಗಿ ಇವತ್ತಲ್ಲ ನಾಳೆ ಮಠ ಮಾನ್ಯಗಳಿಗೆ ಇದು ಬಂದೇ ಬರುತ್ತದೆ, ಖಂಡಿತವಾಗಿಯೂ ಎಲ್ಲಿಯಾದರೂ ಒಂದು ಕಡೆ ಹೇಳುತ್ತಾರೆ. ಅದಕ್ಕಾಗಿ, ನಾನು ಆ ಗೋಜಿಗೆ ಹೋಗುವುದಿಲ್ಲ, ಅದು ಅವರಿಗೆ ಬಿಟ್ಟಿದ್ದು. ಆದರೆ ರೇವಣ್ಣನವರೆ, ನಾನು ಅಪೀಲ್ ಮಾಡುತ್ತೇನೆ, ಇವತ್ತು ಉದಾಸಿಯವರು ಮಾತನ್ನು ಕೊಟ್ಟಿದ್ದಾರೆ. ಮಾತಿಗೆ ತಕ್ಕಂತೆ ನಡೆದುಕೊಳ್ಳುತ್ತಾರೆಂದು ನಾವು ನಂಬೋಣ. ಮತ್ತೆ ಇದನ್ನು ಮಾಡಿದ್ದು ಸರ್ವಥಾ ತಪ್ಪು, ಅ ತಪ್ಪನ್ನು ಅವರು ಒಪ್ಪಿಕೊಂಡಿದ್ದಾರೆ, ಸರಿಪಡಿಸುತ್ತೇನೆಂದು ಹೇಳಿದ್ದಾರೆ ಅದಕ್ಕಾಗಿ ತಾವು ಕೂಡ ತಮ್ಮ ಸ್ಥಾನಕ್ಕೆ ಬನ್ನಿ, ಬಂದು ತಮ್ಮ ವಿಚಾರಗಳನ್ನು ಹೇಳಿ, ನಾವು ನಿಮ್ಮ ಜೊತೆಯಲ್ಲೇ ಇದ್ದೇವೆ. ಏಕೆಂದರೆ, ಈ issue ನಿಜವಾಗಲೂ ಸಾರ್ವಜನಿಕರಿಗೆ ಸಂಬಂಧಪಟ್ಟಿದ್ದು. [ಈ ಸಂದರ್ಭದಲ್ಲಿ ಬಾವಿಯಲ್ಲಿದ್ದ ಜೆಡಿಎಸ್ ಸದಸ್ಯರು ತಮ್ಮ ಸ್ಥಾನಕ್ಕೆ ತೆರಳಿದರು] ಮೊದಲನೆ ಸಲ ರೇವಣ್ಣನವರ ಒಂದು ರೋಡ್ ಅವರಿಗೆ ಸಂಬಂಧಪಟ್ಟಿದ್ದರೆ ಬೇರೆಯವರಿಗೆ ಸಂಬಂಧಪಟ್ಟ ರೋಡ್‌ಗಳೇ ಹೆಚ್ಚಿಗೆ ಇವೆ, ಇದರಲಲಿ ಅವರಿಗೆ ಇರುವುದು ಒಂದೇ ಒಂದು ರೋಡ್. ಅದಕ್ಕಾಗಿ ಅವರ ಮೊದಲನೇ ಸಲ ನಮ್ಮನ್ನೆಲ್ಲಾ ತಮ್ಮ ತೆಕ್ಕೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ, ದಯವಿಟ್ಟು ತಾವೆಲ್ಲರೂ ಕೂಡ ಸಹಕರಿಸಬೇಕು. ಮತ್ತೆ ಉದಾಸಿಯವರು ಹೇಳಿದಂತೆ ನಡೆಯಬೇಕೆಂದು ನಾನು ಸ್ಪಷ್ಟವಾಗಿ ಇವತ್ತು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ, ದಯವಿಟ್ಟು ತಾವು ಈ ಮಾತನ್ನು ಹೇಳಬೇಕು.

ಶ್ರೀ ಅರವಿಂದ ಲಿಂಬಾವಳಿ[ಉನ್ನತ ಶಿಕ್ಷಣ ಸಚಿವರು]: ಮಾನ್ಯ ಖರ್ಗೆಯವರು ಮುಖ್ಯಮಂತ್ರಿಗಳ ಬಗ್ಗೆ ಹೇಳಿದರು, ಖರ್ಗೆ ಸಾಹೇಬರೆ, ಬಹಳ ದಿವಸ ದೆಹಲಿಗೆ ಹೋಗುವುದಕ್ಕೆ ಹೋಗಬೇಡಿ, ಆಮೇಲೆ ನಿಮ್ಮನ್ನು ಗುರುತು ಹಿಡಿಯುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಬದಲಾವಣೆ ಮಾಡಿರುವ ರಸ್ತೆಗಳೆಲ್ಲಾ ಅ ಭಾಗದ ವಿರೋಧ ಪಕ್ಷದ ಶಾಸಕರಿಗೆ ಸೇರಿದ ರಸ್ತೆಗಳನ್ನು ಬದಲಾವಣೆ ಮಾಡಿದ್ದಾರೆ, ಆಡಳಿತ ಪಕ್ಷಕ್ಕೆ ಸೇರಿದ ಒಂದೂ ರಸ್ತೆಗಳನ್ನು ಕೂಡ ಬದಲಾವಣೆ ಮಾಡಿಲ್ಲ. ಅದರ ಉದ್ದೇಶವನ್ನು ಕೇಳಿದರೆ, ಅಲ್ಲಿ

ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಎಂದು ಹೇಳುತ್ತಾರೆ. ನಿಜವಾಗಲೂ ಕೂಡ ಲ್ಯಾಂಡ್ ಅಕ್ವಿಸಿಷನ್ ಪ್ರಾಬ್ಲಂ ಇದ್ದರೆ ಅದಕ್ಕೆ ನಾವು ತಲೆಬಾಗಿ ವಾಪಸ್ ಬರುತ್ತೇವೆ, ಅದನ್ನು ಉದಾಸಿಯವರು ಹೇಳಬೇಕು. ಇದು ವಿಶ್ವಬ್ಯಾಂಕಿನಿಂದ ಮಂಜೂರಾಗಿರುವ ಯೋಜನೆ, ಅದನ್ನು ಕ್ಯಾಬಿನೆಟ್ ನಲ್ಲಿ ತಂದು ಬದಲಾವಣೆ ಮಾಡಬೇಕು, ಅದನ್ನು ಕೂಡ ಮಾಡಿಲ್ಲ. ನಮ್ಮ ಮೇಲೆ ದ್ವೇಷದ ರಾಜಕಾರಣ ಮಾಡುವುದನ್ನು ಸನ್ಮಾನ್ಯ ಸಚಿವರು ಬಿಡಬೇಕೆಂದು, ಹೇಳಿ ಇದನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.[ಜೆಡಿಎಸ್ ಸದಸ್ಯರು ಸಭಾತ್ಯಾಗ ಮಾಡಿದರು]

ಪ್ರಕಟಣೆ

ವಿಷಯ: ವಿಧಾನ ಪರಿಷತ್ತು, 2009ನೇ ಸಾಲಿನ ವಿಧೇಯಕಗಳನ್ನು ದಿ:27–02–2009 ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಸಹಮತಿ ನೀಡಿರುವ ಬಗ್ಗೆ.

ಉಪಾಧ್ಯಕ್ಷರು: ಈಗ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದ ಸಂದೇಶವಿದೆ. ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಮದಿರುವ ಸಂದೇಶದಲ್ಲಿ, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಈ ಕೆಳಕಂಡ ವಿಧೇಯಕಗಳನ್ನು ದಿನಾಂಕ: 27.2.2009ರಂದು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತಾರೆಂದು ತಿಳಿಸಿರುತ್ತಾರೆ.

1. ಕರ್ನಾಟಕ ಧನ ವಿನಿಯೋಗ ವಿಧೇಯಕ, 2009,
2. ಕರ್ನಾಟಕ ಮೌಲ್ಯವರ್ಧಿತ ತೆರಿಗೆ ತಿದ್ದುಪಡಿ ವಿಧೇಯಕ, 2009,
3. ಕರ್ನಾಟಕ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕ, 2009
4. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ತಿದ್ದುಪಡಿ ವಿಧೇಯಕ, 2009,
5. ಕರ್ನಾಟಕ ಆರ್ಥಿಕ ಹೊಣೆಗಾರಿಕೆ ತಿದ್ದುಪಡಿ ವಿಧೇಯಕ, 2009,
6. ಕರ್ನಾಟಕ ಸ್ಟ್ಯಾಂಪ್ ತಿದ್ದುಪಡಿ ವಿಧೇಯಕ, 2009 ಮತ್ತು
7. ಕರ್ನಾಟಕ ಧನವನಿಯೋಗ ಸಂಖ್ಯೆ:1 ವಿಧೇಯಕ 2009.

10. ಸಂಕ್ಷಿಪ್ತ ವರದಿ

ವಿಷಯ:– 13ನೇ ವಿಧಾನಸಭೆಯ ಎರಡನೇ ಅಧಿವೇಶನದ ಮುಂದುವರೆದ ಉಪವೇಶನಗಳ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ.

******

ಹದಿಮೂರನೇ ವಿಧಾನಸಭೆಯ ಎರಡನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ 19 ಫೆಬ್ರವರಿ, 2009 ರಿಂದ ದಿನಾಂಕ 27ನೇ ಫೆಬ್ರವರಿ,

2009ರವರೆಗೆ ಸಮಾವೇಶಗೊಂಡು ಒಟ್ಟು 6 ದಿನಗಳಲ್ಲಿ 49 ಗಂಟೆಗಳ ಕಾಲ ಸರ್ಕಾರಿ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಸದರಿ ಅಧಿವೇಶನದಲ್ಲಿ ಇತ್ತೀಚೆಗೆ ನಿಧನಹೊಂದಿದ ಸ್ವಾತಂತ್ರಯ ಹೋರಾಟಗಾರರು, ಭಾರತದ ಮಾಜಿ ರಾಷ್ಟ್ರಪತಿಗಳಾದ ಶ್ರೀ ರಾಮಸ್ವಾಮಿ ವೆಂಕಟರಾಮನ್, ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಬಿ.ಎನ್.ಕೆಂಗೇಗೌಡ, ಶ್ರೀ ಎಂ.ಜಿ.ಸತ್ಯನಾರಾಯಣ ಹಾಗೂ ಶ್ರಿ ವಿ.ಎಸ್.ಕರ್ಜಗಿ ಅವರುಗಳು ನಿಧನ ಹೊಂದಿರುವುದರ ಬಗ್ಗೆ ಸದನದಲ್ಲಿ ಸಂತಾಪ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಗಿದೆ.

ದಿನಾಂಕ 20.02.2009 ರಂದು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು 2009–10ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಿದ್ದು, ಈ ಬಗ್ಗೆ ಒಟ್ಟು ನಾಲ್ಕು ದಿನಗಳ ಚರ್ಚೆ ನಡೆಸಿ ದಿನಾಂಕ 27.02.2009ರಂದು ಮಾನ್ಯ ಮುಖ್ಯಮಂತ್ರಿಯವರ ಉತ್ತರದೊಂದಿಗೆ ಆಯವ್ಯಯದ ಮೇಲಿನ ಚರ್ಚೆಯನ್ನು ಮುಕ್ತಾಯಗೊಳಿಸಿ ಸದನವು ಅನುಮೋದನೆ ನೀಡಿರುತ್ತದೆ. ಅಲ್ಲದೆ ದಿನಾಂಕ 27.02.2009ರಮದು 2008–09ನೇ ಸಾಲಿನ ಪೂರಕ ಅಂದಾಜು (ಎರಡನೇ ಕಂತು)ಗಳನ್ನು ಸದನದಲ್ಲಿ ಮಂಡಿಸಲ್ಪಟ್ಟು ದಿನಾಂಕ 27.02.2009ರಂದು ಅಂಗೀಕರಿಸಲ್ಪಟ್ಟಿರುತ್ತದೆ.

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ದಿನಾಂಕ:31.3.2008ರ ಅಂತ್ಯದವರೆಗಿನ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳು, ಸಿವಿಲ್, ವಾಣಿಜ್ಯ ಹಾಗೂ ರಾಜಸ್ವ ಸ್ವೀಕೃತಿ ವರದಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

ದಿನಾಂಕ:27.2.2009ರಂದು ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಮೂವರು ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಧ್ಯಕ್ಷರಿಗೆ ಸದನವು ಅಧಿಕಾರ ನೀಡಿದೆ.

ದಿನಾಂಕ: 24.2.2009 ಮಾನ್ಯ ವಿರೋಧಪಕ್ಷದ ನಾಯಕರು ಶೂನ್ಯವೇಳೆಯಲ್ಲಿ ಶ್ರೀ ವೈ. ಸಂಪಂಗಿ, ಕೆ.ಜಿ.ಎಫ್ ವಿಧಾನಸಭಾ ಕ್ಷೇತ್ರ ಇವರ ವಿರುದ್ಧ ದಾಖಲಾದ ಲಂಚಪ್ರಕರಣ ಕುರಿತು ಪ್ರಸ್ತಾಪಿಸಿರುತ್ತಾರೆ. ಈ ವಿಷಯದ ಬಗ್ಗೆ ಮಾನ್ಯ ಸಭಾಧ್ಯಕ್ಷರು, ತಮ್ಮ ನಿರ್ಣಯವನ್ನು ಹೇಳಲಾಗುವುದೆಂದು ತಿಳಿಸಿದ ಮೇರೆಗೆ ದಿನಾಂಕ:27.7.2009 ರಂದು ಮಾನ್ಯ ಸಭಾಧ್ಯಕ್ಷರು ತಮ್ಮ ತೀರ್ಪನ್ನು ನೀಡಿ, ಸದರಿ ಪ್ರಕರಣದ ಬಗೆ ವಿಚಾರಣೆಯನ್ನು ನಡೆಸಿ ಮೂವತ್ತು ದಿವಸಗಳೊಳಗೆ ವರದಿಯನ್ನು ಸಲ್ಲಿಸಲು ಮಾನ್ಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ವಿಶೇಷ ಸದನ ಸಮಿತಿಯನ್ನು ರಚಿಸಿದ್ದಾರೆ.

ಈ ಅಧಿವೇಶನದಲ್ಲಿ ನಿಯಮ 60ರ ಮೇರೆಗೆ, ಮೂರು ಸೂಚನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ ಎರಡು ಸೂಚನೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಿದ

ನಂತರ ಅವುಗಳನ್ನು ನಿಯಮ 69ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಅಲ್ಪಕಾಲಾವಧಿ ಚರ್ಚೆಗೆ ಅವಕಾಶ ಮಾಡಿ ಚರ್ಚಿಸಲಾಗಿರುತ್ತದೆ ಹಾಗೂ ನಿಯಮ 69ರಡಿ ಮೂರು ಅಲ್ಪಕಲಾವಧಿ ಸೂಚನೆಗಳನ್ನು ಅಂಗೀಕರಿಸಲಾಗಿದೆ.

ಈ ಅವಧಿಯಲ್ಲಿ ಒಟ್ಟು 523 ಪ್ರಶ್ನೆಗಳನ್ನು ಸ್ವೀಕರಿಸಿ 415 ಪ್ರಶ್ನೆಗಳನ್ನು ಅಂಗೀಕರಿಸಿದ್ದು, 381 ಪ್ರಶ್ನೆಗಳಿಗೆ ಉತ್ತರಿಸಲಾಗಿದೆ. ಒಂದು ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ಅಂಗೀಕರಿಸಿದ್ದು, ಚರ್ಚೆಯಾಗಿರುವುದಿಲ್ಲ. 137 ಗಮನ ಸೆಳೆಯುವ ಸೂಚನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 128 ಅಂಗೀಕರಿಸಿ 44 ಸೂಚನೆಗಳಿಗೆ ಸರ್ಕಾರದಿಂದ ಉತ್ತರ ಪಡೆದಿದ್ದು, ಆ ಪೈಕಿ 15 ಸೂಚನೆಗಳು ಸದನದಲ್ಲಿ ಚರ್ಚೆಯಾಗಿರುತ್ತವೆ ಹಾಗೂ 7 ಸೂಚನೆಗಳು ತಿರಸ್ಕೃತವಾಗಿರುತ್ತವೆ.

ಸದರಿ ಅವಧಿಯಲ್ಲಿ 49 ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ. ನಿಯಮ 351ರಡಿಯಲ್ಲಿ 53 ಸೂಚನೆಗಳನ್ನು ಸ್ವೀಕರಿಸಿ, ಆ ಪೈಕಿ 47 ಸೂಚನೆಗಳನ್ನು ಅಂಗೀಕರಿಸಲಾಗಿದೆ.

ಕರ್ನಾಟಕ ವಿಧಾನಮಂಡಲದ 2008–09ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಒಂದು ಮತ್ತು ಎರಡನೇ ವರದಿ, ಖಾಸಗಿ ಸದಸ್ಯರುಗಳ ವಿಧೇಯಕ ಮತ್ತು ನಿರ್ಣಯಗಳ ಸಮಿತಿಯ ಮೊದಲನೇ ವರದಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಹತ್ತೊಂಭತ್ತನೇ ವರದಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು ಏಳು ವಿಧೇಯಕಗಳನ್ನು ಮಂಡಿಸಿ ಅಂಗಿಕರಿಸಲಾಗಿರುತ್ತದೆ.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸಹಕರಿಸಿದ ಸಭಾನಾಯಕರಾದ ಸನ್ಮಾನ್ಯ ಮುಖ್ಯಮಂತ್ರಿಯವರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರಿಗೆ, ಮಾನ್ಯ ಉಪ ಸಭಾಧ್ಯಕ್ಷರಿಗೆ, ಜನತಾದಳ(ಎಸ್) ಶಾಸಕಾಂಗ ಪಕ್ಷದ ನಾಯಕರಿಗೆ, ಎಲ್ಲಾ ಮಾನ್ಯ ಸದಸ್ಯರಿಗೆ, ಸದನದ ಕಾರ್ಯಕಲಾಪಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಲು ಹಾಗೂ ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ, ನೌಕರ ವರ್ಗದವರಿಗೆ, ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ(ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ, 2009–10ನೇ ಸಾಲಿನ ಆಯವ್ಯಯದ ಮಂಡನೆ ಮಾಡಿದಾಗಿನಿಂದ ಇವತ್ತಿನವರೆಗೆ ಅನೇಕ ಉಪಯುಕ್ತ ಸಲಹೆಗಳನ್ನು ಪ್ರತಿಪಕ್ಷದ ನಾಯಕರು ಹಾಗೂ ಸದಸ್ಯರುಗಳು ಸಲಹೆಗಳನ್ನು ಕೊಟ್ಟು, ಈ ಆಯವ್ಯಯವನ್ನು ಸುಸೂತ್ರವಾಗಿ ಇಲ್ಲಿ

ಮಂಡನೆ ಮಾಡುವುದಕ್ಕೆ ಮತ್ತು ಅನುಮೋದನೆ ಮಾಡುವುದಕ್ಕೆ ಸಹಕರಿಸಿದಂತಹ ಈ ಮನೆಯ ಎಲ್ಲಾ ಸದಸ್ಯರಿಗೆ ಮಾಧ್ಯಮದ ಸ್ನೇಹಿತರಿಗೆ, ಸನ್ಮಾನ್ಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರಿಗೆ, ಎಲ್ಲಾ ಅಧಿಕಾರಿ ಮಿತ್ರರಿಗೆ, ಸರ್ಕಾರದ ಪರವಾಗಿ ಅಭಿನಂದನೆ ಸಲ್ಲಿಸಿ ಇದೇ ರೀತಿ ಮುಂದೆ ಬರುವಂತಹ ದಿನಗಳಲ್ಲಿ ಸಹ ಸೌಹಾರ್ದಯುತವಾಗಿ ರಾಜ್ಯದ ಅಭಿವೃದ್ಧಿ ಸಲುವಾಗಿ ಒಟ್ಟಾಗಿ ಕೆಲಸ ಮಾಡೋಣ. ಅದಕ್ಕೆ ನಿಮ್ಮೆಲ್ಲರ ಸಹಕಾರವನ್ನು ಬಯಸಿ, ಮತ್ತೊಮ್ಮೆ ತಮಗೆಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಬಹುಶ: ಈ ಬಜೆಟ್ ಅಧಿವೇಶನ ಅತ್ಯಂತ ಕಡಿಮೆ ಅವಧಿಯಲ್ಲಿ ನಡೆದರು ಕೂಡ ಈ ಸಾರಿ ಬಜೆಟ್ ಮೇಲೆ ಸಾಕಷ್ಟು ಚರ್ಚೆ ಆಗತಕ್ಕಂಥದ್ದು ಮತ್ತು ಗಮನಸೆಳೆಯುವ ಸೂಚನೆಗಳು, ಪ್ರಶ್ನಾವಳಿಗಳು ಅದಕ್ಕೆ ಉತ್ತರ, ನಿಯಮ 69ರ ಮೇಲೆ ಚರ್ಚೆ ಮಾಡತಕ್ಕಂಥದ್ದು, ಅನೇಕ ವಿಷಯಗಳು ಚರ್ಚೆ ಆಗಿವೆ. ಆದರೆ ಇನ್ನೂ ಹೆಚ್ಚಿನ ಕಾಲಾವಕಾಶ ಸಿಕ್ಕಿದ್ದರೆ ಖಂಡಿತವಾಗಿ ಹೊಸ ಸದಸ್ಯರಿಗೆ ಮತ್ತು ಹೊಸದಾಗಿ ಮೊದಲನೇ ಸಲ ಆರಿಸಿ ಬಂದಂತಹ ಸದಸ್ಯರಿಗೆ ಮಾತನಾಡತಕ್ಕಂತಹ ಅವಕಾಶ ಸಿಗುತ್ತಿತ್ತು. ಆದರೆ ಕಾರಣಾಂತರಗಳಿಂದ ಬಹಳ short notice ನಲ್ಲಿ ಮತ್ತು ಅಲ್ಪ ಕಾಲದಲ್ಲಿ ಈ ಅಧಿವೇಶನ ಮುಗಿಯುತ್ತಿರುವ ಕಾರಣದಿಂದ ಬಹಳಷ್ಟು ಜನರಿಗೆ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಆಗಲಿಲ್ಲ. ಆದರೂ ಕೂಡ ಅದಷ್ಟೇ ದಿನದಲ್ಲಿ ಉಪಯುಕ್ತವಾದ ಚರ್ಚೆ ಮತ್ತು ಅದಕ್ಕೆ ತಮ್ಮ ಸಹಕಾರ, ಮಾನ್ಯ ಸಭಾಧ್ಯಕ್ಷರು ಹಾಗೂ ಮಾನ್ಯ ಉಪಾಧ್ಯಕ್ಷರು, ಮಾಧ್ಯಮದ ಮಿತ್ರರು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಅನೇಕ ಈ ಸದನದ ಸದಸ್ಯರು ವಿಶೇಷವಾಗಿ ಈ ಕಡೆ ಇರತಕ್ಕಂತಹ ನಮ್ಮ ಉಪನಾಯಕರಾದ ಮಾನ್ಯ ಜಯಚಂದ್ರರವರು ನಾವು ಇಲ್ಲದೇ ಇದ್ದರೂ ಕೂಡ ಸಹಕರಿಸಿ ಕಲಾಪವನ್ನು ನಡೆಸುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕೆ ತಾವು ಕೂಡ ಸ್ಪಂದಿಸಿ ಒಳ್ಳೆಯ ರೀತಿಯಿಂದ ಯಾವುದೇ ಧರಣಿ ವಾಕ್ ಔಟ್ ಇಲ್ಲದೆ ಈ ಅಧಿವೇಶನ ನಡೆದಿದೆ. ಸದನ ಇದೇ ರೀತಿಯಾಗಿ smooth ಆಗಿ ನಡೆಯಬೇಕೆಂಬುದೇ ನಮ್ಮೆಲ್ಲರ ಇಚ್ಛೆ. ಅದೇ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಮುಂದೆ ನಡೆದುಕೊಂಡು ಹೋಗುತ್ತಾರೆ ಎನ್ನತಕ್ಕಂಥದ್ದು ನಮ್ಮ ಅಪೇಕ್ಷೆ. ಅದಕ್ಕಾಗಿ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತಾ, ಮುಂದೆ ಸದನ ಸುಲಲಿತವಾಗಿ ನಡೆಯಲಿ ಎನ್ನತಕ್ಕಂತಹ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

(ಸದನವನ್ನು ದಿನಾಂಕ 27ನೇ ಫೆಬ್ರವರಿ 2009 ರಂದು ರಾತ್ರಿ 9 ಗಂಟೆ 40 ನಿಮಿಷಕ್ಕೆ ಅನಿರ್ಧಿಷ್ಟ ಕಾಲಾವಧಿವರೆಗೆ ಮುಂದೂಡಲಾಯಿತು)

ಅನುಬಂಧ–1

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)
ಕರ್ನಾಟಕ ಧನವಿನಿಯೋಗ ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ. 19)

2009–2010ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

2009–2010ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಮದ ಮತ್ತು ಆ ಪೈಕಿಯಿಂದ ಕೆಲವು ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮವಾಗಲಿ.

1. **ಸಂಕ್ಷಿಪ್ತ ಹೆಸರು:** – ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

2. **ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 2009–2010ನೇ ಹಣಕಾಸು ವರ್ಷಕ್ಕಾಗಿ 21,25,913.72 ಲಕ್ಷ ರೂಪಾಯಿಗಳ ನೀಡಿಕೆ:** – ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟ ಪಡಿಸಲಾದ ಸೇವೆಗಳ ಸಂಬಂಧದಲ್ಲಿ 2009–2010ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಹಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿರುವ ಇಪ್ಪತ್ತೊಂದು ಸಾವಿರದ ಇನ್ನೂರ ಐವತ್ತೊಂಬತ್ತು ಕೋಟಿ ಹದಿಮೂರು ಲಕ್ಷದ ಎಪ್ಪತ್ತೆರಡು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. **ಧನವಿನಿಯೋಗ:** – ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

(ರೂ. ಲಕ್ಷಗಳಲ್ಲಿ)

ಭೇಡಿಕೆ ಸಂಖ್ಯೆ	ಸೇವೆಗಳು ಮತ್ತು ಉದ್ದೇಶಗಳು		ವಿಧಾನಸಭೆಯಿಂದ ಪುರಸ್ಕೃತ ವಾದುದನ್ನು	ಸಂಚಿತನಿಧಿಯಿಂದ ಪ್ರಭೃತ ವಾದುದನ್ನು	ಒಟ್ಟು
1	2		3	4	5
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	56,109.47	7.82	56,117.29
		ಬಂಡವಾಳ	825.00	–	825.00
02	ಪಶು ಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	22,684.05	7.84	22.691.89
		ಬಂಡವಾಳ	2,421.71	–	2,421.71
03	ಆರ್ಥಿಕ	ರಾಜಸ್ವ	1,84,186.68	10.97	1,84,197.65
		ಬಂಡವಾಳ	342.21	–	342.21
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	12,329.07	2944.13	15,273.40
		ಬಂಡವಾಳ	–	–	–
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	73.375.44	–	73,375.44
		ಬಂಡವಾಳ	11.627.77	–	11.627.77
06	ಮೂಲಭೂತ ಸೌಕರ್ಯ	ರಾಜಸ್ವ	349.24	–	349.24
		ಬಂಡವಾಳ	13,705.89	–	13,705.89
07	ಗ್ರಾಮೀಣಾಭಿವೃದ್ಧಿಮತ್ತು ಪಂಚಾಯತಿ ರಾಜ್	ರಾಜಸ್ವ	51,717.81	–	51,717.81
		ಬಂಡವಾಳ	51,641.70	–	51,641.70
08	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	16,328.82	367.46	16,696.28
		ಬಂಡವಾಳ	103.16	–	103.16
09	ಸಹಕಾರ	ರಾಜಸ್ವ	10,867.71	–	10,867.71
		ಬಂಡವಾಳ	439.07	–	439.07

10	ಸಮಾಜ ಕಲ್ಯಾಣ	ರಾಜಸ್ವ	64,450.90	–	65,450.90
		ಬಂಡವಾಳ	8,077.52	–	8077.52
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	52,330.13	–	52,330.13
		ಬಂಡವಾಳ	2,379.30	–	2,379.30
12	ವಾರ್ತಾ ಪ್ರವಾಸೋದ್ಯವ ಮತ್ತು ಯುವಜನ ಸೇವೆಗಳು	ರಾಜಸ್ವ	6,846.13	–	6,846.13
		ಬಂಡವಾಳ	3,663.00	–	3,663.00
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	26,695.96	0.89	26,696.85
		ಬಂಡವಾಳ	594.00	–	594.00
14	ಕಂದಾಯ	ರಾಜಸ್ವ	70,495.62	36.41	70,532.03
		ಬಂಡವಾಳ	3,306.60	–	3,306.60
15	ಮಾಹಿತಿ ತಂತ್ರಜ್ಞಾನ	ರಾಜಸ್ವ	1,124.54	–	1,124.54
		ಬಂಡವಾಳ	547.80	–	547.80
16	ವಸತಿ	ರಾಜಸ್ವ	24,358.51	–	24,358.51
		ಬಂಡವಾಳ	8,289.35	–	8,289.35
17	ಶಿಕ್ಷಣ	ರಾಜಸ್ವ	2,87,161.97	–	2,87,161.97
		ಬಂಡವಾಳ	8,610.74	–	8,610.74
18	ವಾಣಿಜ್ಯ ಮತ್ತು ಕೈಗಾರಿಕೆ	ರಾಜಸ್ವ	44,479.78	0.09	44,479.87
		ಬಂಡವಾಳ	3,511.86	–	3,511.86
19	ನಗರಾಭಿವೃದ್ಧಿ	ರಾಜಸ್ವ	1,44,131.27	–	1,44,131.27
		ಬಂಡವಾಳ	42,459,78	–	42,459.78
20	ಲೋಕೋಪಯೆ ೂೀಗಿ	ರಾಜಸ್ವ	43,107.95	–	43,107.95
		ಬಂಡವಾಳ	79,058.76	–	79,058.76
21	ಜಲ ಸಂಪನ್ಮೂಲ	ರಾಜಸ್ವ	11,184.01	–	11,184.01
		ಬಂಡವಾಳ	1,48,658.06	–	1,48,658.06
22	ಆರೋಗ್ಯ ಮತ್ತು ಕುಟುಂಬ	ರಾಜಸ್ವ	64,234.04	–	64,234.04
		ಬಂಡವಾಳ	11,779.68	–	11,779.68

	ಕಲ್ಯಾಣ ಸೇವೆಗಳು				
23	ಕಾರ್ಮಿಕ	ರಾಜಸ್ವ	11,970.03	–	11,970.03
		ಬಂಡವಾಳ	99.00	–	99.00
24	ಇಂಧನ	ರಾಜಸ್ವ	80,500.42	62.70	80,563.12
		ಬಂಡವಾಳ	25,146.00	–	25,146.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	6,425.22	–	6,425.22
		ಬಂಡವಾಳ	389.94	–	389.94
26	ಯೋಜನೆ, ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	14,017.48	–	14,017.48
		ಬಂಡವಾಳ	–	–	–
27	ಕಾನೂನು	ರಾಜಸ್ವ	8,558.15	–	8,558.15
		ಬಂಡವಾಳ	–	–	–
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	2,364.58	46.19	2,410.77
		ಬಂಡವಾಳ	–	–	–
29	ಋಣ ಮೇಲುಸ್ತುವಾರಿ	ರಾಜಸ್ವ	–	1,84,074.00	1,84,074.00
		ಬಂಡವಾಳ	–	1,17,292.17	1,17,292.17
ಒಟ್ಟು			18,21,063.05	3,04,850.67	21,25,913.72

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

2009–2010ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ಫಲವಾರು ಖರ್ಚುಗಳನ್ನು ವಹಿಸುವುದಕ್ಕಾಗಿ ರಾಜ್ಯದ ಸಂಚಿತ ನಿಧಿಯೊಳಗಿನಿಂದ ವಿನಿಯೋಗಿಸಲು ಭಾರತ ಸಂವಿಧಾನದ 204ನೇ ಅನುಚ್ಛೇದದ ಉಪಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಬಿ.ಎಸ್.ಯಡಿಯೂರಪ್ಪ
ಮುಖ್ಯಮಂತ್ರಿಗಳು ಹಾಗೂ
ಹಣಕಾಸು ಸಚಿವರು

ಎಸ್.ಬಿ.ಪಾಟೀಲ್
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

ಅನುಬಂಧ–2

ಕರ್ನಾಟಕ ವಿಧಾನ ಸಭೆ
ಹದಿಮೂರನೇ ವಿಧಾನಸಭೆ
ಎರಡನೇ ಅಧಿವೇಶನ
(ಮುಂದುವರೆದ ಉಪವೇಶನಗಳು)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2009
(2009ರ ವಿಧಾನಸಭೆಯ ವಿಧೇಯಕ ಸಂಖ್ಯೆ 20)

ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು (2004ರ ಕರ್ನಾಟಕ ಅಧಿನಿಯಮ 32) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:– (1) ಈ ಅಧಿನಿಯಮವನ್ನು ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ಅಧಿನಿಯಮ, 2009 ಎಂದು ಕರೆಯತಕ್ಕದ್ದು.

(2) ಇದು 2009ರ ಏಪ್ರಿಲ್ ತಿಂಗಳ ಒಂದನೇ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ:– ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ರ (2004ರ ಕರ್ನಾಟಕ ಅಧಿನಿಯಮ 32)(ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದ (13)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(13–ಎ)"ವಿದ್ಯುನ್ಮಾನ ತೆರಿಗೆ ರಿಜಿಸ್ಟರ್" ಎಂದರೆ, ತೆರಿಗೆ ಬೆಲೆಪಟ್ಟಿಯ ನೀಡಿಕೆ ಅಥವಾ ಅಂಥ ಮಾರಾಟದ ಬಿಲ್ಲುಗಳನ್ನು ನೀಡಲು ಮತ್ತು ಅಂಥ ಮಾರಾಟದ ವಿವರಗಳನ್ನು ದಾಖಲಿಸುವ ಉದ್ದೇಶಕ್ಕಾಗಿ ಬಳಸಲಾದ ಒಂದು

ಸುಭದ್ರ ಹಣಕಾಸು ವಿದ್ಯುನ್ಮಾನ ಸಾಧನ ಮತ್ತು ಇದು ಒಂದು ಮುದ್ರಣಯಂತ್ರ ಹಾಗೂ ವ್ಯಾಪಾರಿಯ ಅಥವಾ ಅವನ ಏಜಂಟನ ಸಹಿಯನ್ನು ಹಾಕಲು ಬಳಸುವ ಒಂದು ಯಂತ್ರ ಸಾಧನವನ್ನೂ ಒಳಗೊಳ್ಳುತ್ತದೆ.

3. 11ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ "ಮೇಲೆ ಕಡಿತವನ್ನು" ಎಂಬ ಪದಗಳಿಗೆ "ಸಂಬಂಧದಲ್ಲಿ ಕಡಿತ ಮಾಡಲಾಗಿದೆಯೆಂದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. 19ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 19ನೇ ಪ್ರಕರಣದಲ್ಲಿ,–

(1) ಶೀರ್ಷಿಕೆಯಲ್ಲಿ "ಬಳಕೆಯಲ್ಲಿಯ" ಎಂಬ ಪದದ ತರುವಾಯ "ಅಥವಾ ತೆರಿಗೆ ಸಂದಾಯದ ಯೋಜನೆಯ" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ಯಾವೊಬ್ಬ ನೋಂದಾಯಿತ ವ್ಯಾಪಾರಿಯು ತನ್ನ ವ್ಯಾಪರ ಕ್ರಮದಲ್ಲಿ ಬಳಸಿಕೊಂಡ ಯಾವುದೇ ಸರಕುಗಳ ಮೇಲೆ ಹೂಡುವಳಿ ತೆರಿಗೆಯನ್ನು ಕಳೆದ ತರುವಾಯ 15ನೇ ಪ್ರಕರಣದ ಅಡಿಯಲ್ಲಿ ತೆರಿಗೆಯ ಬಗ್ಗೆ ರಾಜಿಯನ್ನು ಆಯ್ಕೆ ಮಾಡಿಕೊಂಡಲ್ಲಿ ವ್ಯಾಪಾರಿಯು ಹಾಗೆ ಆಯ್ಕೆ ಮಾಡಿಕೊಂಡ ದಿನಾಂಕದಂದು ಆತನ ದಾಸ್ತಾನಿನಲ್ಲಿ ಹೊಂದಿರುವ ಸರಕುಗಳ ಮೇಲೆ ಹಾಗೆ ಕಳೆದ ಹೂಡುವಳಿ ತೆರಿಗೆಯು ಅಂಥ ದಿನಾಂಕದ ನಂತರದ ತೆರಿಗೆಯ ಅವಧಿಯಲ್ಲಿ ಮರು ಸಂದಾಯ ವಾಗಬಹುದಾಗಿರತಕ್ಕದ್ದು ಮತ್ತು ಹಾಗೆ ಮರು ಸಂದಾಯ ಮಾಡಬೇಕಾದ ಹೂಡವಳಿ ತೆರಿಗೆಯನ್ನು ಅಂಥ ದಿನಾಂಕದಂದು ಅಂಥ ಸರಕುಗಳ ಮಾರುಕಟ್ಟೆ ಬೆಲೆಯ ಮೇಲೆ ಲೆಕ್ಕಹಾಕತಕ್ಕದ್ದು."

5. 23ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 23ನೇ ಪ್ರಕರಣದಲ್ಲಿ "ಆರ್ಜಿಯನ್ನು ಸಲ್ಲಿಸಬಹುದು" ಎಂಬ ಪದಗಳ ತರುವಾಯ "ಮತ್ತು ಅಂಥ ವ್ಯಾಪಾರಿಯು 22ನೇ ಪ್ರಕರಣದ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಲು ಹೊಣೆಗಾರನಾದ ಮೇಲೆ ಹಾಗೆ ಅವನು ಹೊಣೆಗಾರನಾದ ದಿನಾಂಕದಂದು 13ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳಿಗೆ ಒಳಪಟ್ಟು 11ನೇ ಪ್ರಕರಣದ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಹೂಡುವಳಿ ತೆರಿಗೆಯನ್ನು ಕಳೆಯುವುದಕ್ಕೆ ಅರ್ಹನಾಗಿರತಕ್ಕದ್ದು" ಎಂಬ ಪದಗಳನ್ನು ಮತ್ತು ಅಂಕಿಗಳನ್ನು ಸೇರಿಸತಕ್ಕದ್ದು.

6. 27ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 27ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು ತೀರಿಹೋಗಿರುವ ವ್ಯಕ್ತಿಯ ಸಂದರ್ಭದಲ್ಲಿ ಆತನ ಕಾನೂನುಬದ್ಧ ವಾರಸುದಾರರು ನೋಂದಣಿಯ ವರ್ಗಾವಣೆಗಾಗಿ ಅರ್ಜಿಯನ್ನು ಹಾಕಿಕೊಂಡ ಮೇಲೆ ಮತ್ತು ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ನಿಯಮಿಸಲಾದ ಪ್ರಾಧಿಕಾರವು ಅದನ್ನು ರದ್ದುಗೊಳಿಸುವ ಬದಲು ಆ ಕಾನೂನುಬದ್ಧ ವಾರಸುದಾರರಿಗೆ ನೋಂದಣಿ ಪ್ರಮಾಣಪತ್ರವನ್ನು ವರ್ಗಾಯಿಸಲು ಅನುಮತಿ ನೀಡಬಹುದು".

7. 31ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 31ನೇ ಪ್ರಕರಣದಲ್ಲಿ,–

(1) (2)ನೆ ಪ್ರಕರಣದ ತರುವಾಯೀ ಮುಂದಿನ ಉಪ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

"(2–ಎ) ಆಯುಕ್ತನು, ತಾನು ಅಧಿಸೂಚಿಸಬಹುದಾದ ವ್ಯಾಪಾರಿ ವರ್ಗಗಳಿಗೆ ಸೇರಿದ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು, ಅಂಥ ವ್ಯಾಪಾರಿಯ ತೆರಿಗೆ ಹೊಣೆಗಾರಿಕೆ ಮೇಲೆ ಪರಿಣಾಮ ಬೀರಬಹುದಾದ ಯಾವುದೇ ವಿಷಯ ಅಥವಾ ವ್ಯವಹಾರಗಳ ಸಂಬಂಧದಲ್ಲಿ ಮಾಹಿತಿಯನ್ನು ಪಡೆದುಕೊಳ್ಳುವುದನ್ನು ಸಾಧ್ಯವಾಗಿಸುವ ಉದ್ದೇಶದಿಂದ ನಿಯಮಿಸಬಹುದಾದಂಥ ವಿಧದ ಮತ್ತು ವಿವರಣೆಯ ಮತ್ತು ನಿಯಮಿಸಬಹುದಾದಂತೆ ಭದ್ರಗೊಳಿಸಬಹುದಾದಂಥ ಒಂದು ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಸ್ಥಾಪಿಸಬೇಕೆಂದು ಮತ್ತು ಬಳಸಬೇಕೆಂದು ಅಗತ್ಯಪಡಿಸಬಹುದು.

(2–ಬಿ) 29ನೇ ಪ್ರಕರಣದ (1) ರಿಂದ (3)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, (2–ಎ) ಉಪಪ್ರಕರಣದ ಅಡಿಯಲ್ಲಿ ಬರುವ ಪ್ರತಿಯೊಬ್ಬ ನೋಂದಾಯಿತ ವ್ಯಾಪಾರಿಯು ಮಾರಾಟ ಮಾಡಿದ ಸರಕುಗಳ ಮೌಲ್ಯವು ಏನೇ ಇದ್ದರೂ ತೆರಿಗೆ ದರ ಪಟ್ಟಿಯನ್ನು ಅಥವಾ ಮಾರಾಟ ಬಿಲ್ಲುಗಳನ್ನು ವಿದ್ಯುನ್ಮಾನ ತೆರಿಗೆ ರಿಜಿಸ್ಟರ್ ಮೂಲಕ ನೀಡತಕ್ಕದ್ದು ಮತ್ತು ಅಂಥ ವ್ಯಾಪಾರಿಯು ವಿದ್ಯುನ್ಮಾನ ತೆರಿಗೆ ರಿಜಿಸ್ಟರಿನ ವೆಚ್ಚವನ್ನು ನಿಯಮಿಸಬಹುದಾದ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ವಸೂಲಿ ಮಾಡಿಕೊಳ್ಳಲು ಅನುಮತಿಸತಕ್ಕದ್ದು".

(2) (4)ನೇ ಉಪ ಪ್ರಕರಣದಲ್ಲಿ "ಯಾರ ತೆರಿಗೆ ಸಂದಾಯ ಮಾಡಬೇಕಾದ ವಹಿವಾಟು" ಎಂಬ ಪದಗಳಿಗೆ "ಯಾರ ಒಟ್ಟು ವಹಿವಾಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

8. 35ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 35ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ಇಪ್ಪತ್ತು ದಿನಗಳೊಳಗೆ" ಎಂಬ ಪದಗಳ ತರುವಾಯ "ಅಥವಾ ಹದಿನೈದು ದಿನಗಳೊಳಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

9. 52ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 52ನೇ ಪ್ರಕರಣದಲ್ಲಿ,–

(1) (1)ನೇ ಉಪ ಪ್ರಕರಣದಲ್ಲಿ,

(ಎ) (ಬಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಬಿ–1) ಅಂಥ ವ್ಯಾಪಾರಿಯು ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಪರಿಶೀಲನೆಗಾಗಿ ಹಾಜರುಪಡಿಸಲು ನಿರ್ದೇಶಿಸುವುದು;";

(ಬಿ) (ಇ) ಖಂಡದಲ್ಲಿ,

(i) "ರಿಜಿಸ್ಟರುಗಳು" ಎಂಬ ಪದದ ಮೊದಲು "ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು,

(ii) "ದಾಖಲೆಗಳು" ಎಂಬ ಪದಗಳಿಗೆ ಮೊದಲು "ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಒಳಗೊಂಡಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು,

(2) (1)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(1–ಎ) ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಪ್ರಾಧಿಕರಿಸಿದ ಲೆಕ್ಕಪರಿಶೋಧನಾ ಸಿಬ್ಬಂದಿ ತಂಡವು ಯಾವೊಬ್ಬ ನೋಂದಾಯಿತ ವ್ಯಾಪಾರಿಗೆ ತಾನು ನಿರ್ದಿಷ್ಟಪಡಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಆತನ ವ್ಯವಹಾರದ ಚಟುವಟಿಕೆಗಳಿಗೆ ಸಂಬಂಧಪಟ್ಟ ಲೆಕ್ಕಪತ್ರಗಳು, ರಿಜಿಸ್ಟರುಗಳು, ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಹಾಜರುಪಡಿಸಲು ನಿರ್ದೇಶನ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು."

(3) (2)ನೇ ಉಪ ಪ್ರಕರಣದಲ್ಲಿ "(1)ನೇ ಉಪ ಪ್ರಕರಣದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು" ಎಂಬ ಅವರಣ ಚಿಹ್ನೆಗಳು, ಅಂಕೆ ಹಾಗೂ ಪದಗಳಿಗೆ "(1)ನೇ ಅಥವಾ (1–ಎ) ಉಪ ಪ್ರಕರಣಗಳ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿ ಅಥವಾ ಲೆಕ್ಕಪರಿಶೋಧನಾ ಸಿಬ್ಬಂದಿ ತಂಡವು" ಎಂಬ ಅವರಣ ಚಿಹ್ನೆಗಳು, ಅಂಕಿಗಳು ಹಾಗೂ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. 53ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 53 ಪ್ರಕರಣದಲ್ಲಿ, (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ "ನಿಯಮಿಸಬಹುದಾದಂತೆ" ಎಂಬ ಪದದ ತರುವಾಯ "ಅಥವಾ ಆಯುಕ್ತರು ಅಧಿಸೂಚಿಸಬಹುದಾದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

11. 62ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 62ನೇ ಪ್ರಕರಣದಲ್ಲಿ, (6–ಎ) ಉಪಪ್ರಕರಣದ (ii) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ii) ಅಪೀಲು ಪ್ರಾಧಿಕಾರವು ಪ್ರಕರಣದ ಸುನಾವಣೆಯು ಮುಕ್ತಾಯವಾದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ ಅಪೀಲಿನ ವಿಲೆಯ ಆದೇಶವನ್ನು ಹೊರಡಿಸತಕ್ಕದ್ದು."

12. 64ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 64ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕದ್ದು, ಎಂದರೆ:–

"ಪರಂತು, 62ನೇ ಪ್ರಕರಣದ ಅಡಿಯಲ್ಲಿ ಅಪೀಲು ಪ್ರಾಧಿಕಾರವು ಕೋರಿದ ಅಪೀಲನ್ನು ಪೂರ್ಣವಾಗಿ ಅನುಮತಿಸಿದ ಆದೇಶವನ್ನು ಹೊರಡಿಸಿದ ಸಂದರ್ಭದಲ್ಲಿ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳು ಅನ್ವಯವಾಗತಕ್ಕದ್ದಲ್ಲ."

13. 74ನೇ ಪ್ರಕರಣದ ತಿದ್ದುಪಡಿ:– ಮೂಲ ನಿಯಮದ 74ನೇ ಪ್ರಕರಣದ (4)ನೇ ಉಪ ಪ್ರಕರಣದಲ್ಲಿ "ದಂಡ ನೀಡಲು ತಪ್ಪುವುದು" ಎಂಬ ಪದಗಳಿಗೆ "ಪರಿಶೋಧಿತ ಲೆಕ್ಕ ಪತ್ರಗಳ ವಿವರ ಪತ್ರವನ್ನು ಸಲ್ಲಿಸುವ ವಿಫಲತೆಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು ಮತ್ತು ಯಾವಾಗಲೂ ಹಾಗೆ ಪ್ರತಿಯೋಜಿಸಲಾಗಿದೆಯೆಂದು ಭಾವಿಸತಕ್ಕದ್ದು.

14. 77ನೇ ಪ್ರಕರಣದ ತಿದ್ದುಪಡಿ:– ಮೂಲ ಅಧಿನಿಯಮದ 77ನೇ ಪ್ರಕರಣದಲ್ಲಿ,

(1) ಶೀರ್ಷಿಕೆಯಲ್ಲಿ "ಮೊಹರುಗಳಿಗೆ" ಎಂಬ ಪದದ ತರುವಾಯ "ವಿದ್ಯುನ್ಮಾನ ತೆರಿಗೆ ರಿಜಿಸ್ಟರುಗಳಿಗೆ" ಎಂಬ ಅಲ್ಪವಿರಾಮ ಮತ್ತು ಪದಗಳನ್ನು ಸೇರಿಸತಕ್ಕದ್ದು.

(2) (1)ನೇ ಉಪಪ್ರಕರಣದ ತರುವಾಯ ಈ ಮುಂದಿನ ಉಪ ಪ್ರಕರಣವನ್ನೂ ಸೇರಿಸತಕ್ಕದ್ದು, ಎಂದರೆ:–

"(1–ಎ) 31ನೇ ಪ್ರಕರಣದ (2–ಎ) ಉಪ ಪ್ರಕರಣದ ಅಡಿಯಲ್ಲಿ ಬರುವ ಯಾವೊಬ್ಬ ನೋಂದಾಯಿತ ವ್ಯಾಪಾರಿಯು:–

(ಎ) ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ಸ್ಥಾಪಿಸಲು ನಿರಾಕರಿಸಿದಲ್ಲಿ; ಅಥವಾ

(ಬಿ) ಸ್ಥಾಪಿತ ವಿದ್ಯುನ್ಮಾನ ರಿಜಿಸ್ಟರನ್ನು ಬಳಸಲು ನಿರಾಕರಿಸಿದರೆ ಅಥವಾ ವಿಫಲನಾದರೆ; ಅಥವಾ

(ಸಿ) ಸ್ಥಾಪಿತವಾದ ಯಾವುದೇ ವಿದ್ಯುನ್ಮಾನ ತೆರಿಗೆ ರಿಜಿಸ್ಟರಿನ ಭದ್ರತೆಗೆ ಬಳಸಲಾದ ಮೊಹರನ್ನು ತೆಗೆದುಹಾಕಿದರೆ ಅಥವಾ ಯಾವುದೇ ರೀತಿಯಲ್ಲಿ

ಹಸ್ತಕ್ಷೇಪ ಮಾಡಿದರೆ ಅಥವಾ ಸ್ಥಾಪಿತವಾದ ಯಾವುದೇ ವಿದ್ಯುನ್ಮಾನ ತೆರಿಗೆ ರಿಜಿಸ್ಟರನ್ನು ನಾಶಗೊಳಿಸಿದರೆ ಅಥವಾ ನಾಶಗೊಳಿಸಲು ಪ್ರಯತ್ನಿಸಿದರೆ,

–ಅಂಥ ವ್ಯಾಪಾರಿಯು, ಮೊದಲನೆ ದರ್ಜೆಯ ಮ್ಯಾಜಿಸ್ಟ್ರೇಟ್‌ರ ದರ್ಜೆಯ ನ್ಯಾಯಾಲಯಕ್ಕಿಂತ ಕಡಿಮೆಯಲ್ಲದ ದರ್ಜೆಯ ನ್ಯಾಯಾಲಯದಿಂದ ಅಪರಾಧ ನಿರ್ಣಯಕ್ಕೆ ಒಳಗಾದರೆ ಐದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದ ಜುಲ್ಮಾನೆಗೆ ಮತ್ತು ಒಂದು ವರ್ಷಕ್ಕೆ ಮೀರದ ಅವಧಿಯ ಕಾರಾವಾಸಕ್ಕೆ ಒಳಗಾಗಲು ಬದ್ಧನಾಗಿರತಕ್ಕದ್ದು".

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗೆ ಉಪಬಂಧಗಳನ್ನು ಕಲ್ಪಿಸುವುದಕ್ಕಾಗಿ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ, 2003ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

(i) ಕೆಲವು ವರ್ಗದ ವ್ಯಾಪಾರಿಗಳು ತಮ್ಮ ಎಲ್ಲಾ ಮಾರಾಟಗಳ ಲೆಕ್ಕಗಳನ್ನು ಇಟ್ಟುಕೊಂಡು ಬರುವಂತೆ ಮತ್ತು ತೆರಿಗೆಯನ್ನು ಸರಿಯಾಗಿ ಸಂದಾಯ ಮಾಡುವಂತೆ ನೋಡಿಕೊಳ್ಳುವುದಕ್ಕಾಗಿ ಅವರುಗಳು ಹಸ್ತಕ್ಷೇಪ ಮಾಡಲಾಗದ (ಟ್ಯಾಂಪರ್ ಪ್ರೂಫ್) ವಿದ್ಯುನ್ಮಾನ ಬಿಲ್ಲು ನೀಡಿಕೆ ಯಂತ್ರಗಳನ್ನು ಉಪಯೋಗಿಸುವಂತೆ ಕಡ್ಡಾಯಗೊಳಿಸುವುದು;

19	ಒ.ಸಿ.ಸಿ.ಎಸ್. ಹಂದನಕೆರೆ	103	660	335	1098
20	ವಿ.ಎಸ್.ಎಸ್.ಎನ್., ಮತ್ತಿಘಟ್ಟ	312	1164	909	2385
21	ವಿ.ಎಸ್.ಎಸ್.ಎನ್. ಬರಗೂರು	85	460	392	937

22	ವಿ.ಎಸ್.ಎಸ್.ಎನ್. ದೊಡ್ಡ ಎಣ್ಣೆಗೆರೆ	86	589	402	1077
23	ವೈ.ಎಫ್.ಸಿ.ಬರಗೀಹಳ್ಳಿ	54	157	112	323
24	ವೈ.ಎಫ್.ಸಿ.ದಾಸೀಹಳ್ಳಿ	15	98	58	171
25	ಶಾಂತಲಾ ಮಹಿಳಾ ಸಮಾಜ ಬೇವಿನಹಳ್ಳಿ	75	319	148	542
26	ಎಫ್.ಪಿ.ಡಿ. ಬೆಳಗುಲಿ	107	440	188	735
27	ಎಫ್.ಪಿ.ಡಿ. ತಾಂಡ್ಯ	66	347	136	549
28	ಎಫ್.ಪಿ.ಡಿ. ಹಾಲಪ್ಪ ನಡುವನಹಳ್ಳಿ	24	211	95	330
29	ಎಫ್.ಪಿ.ಡಿ. ತೋಂಟಾರಾಧ್ಯ, ನಡುವನಹಳ್ಳಿ	19	215	95	329
30	ಎಫ್.ಪಿ.ಡಿ. ಬೊಮ್ಮೇನಹಳ್ಳಿ	13	207	140	360
31	ವಿ.ಎಸ್.ಎಸ್.ಎನ್., ಹುಳಿಯೂರು	47	304	185	536
32	ಹೆಚ್.ಎನ್. ಬಸವರಾಜು ಹುಳಿಯೂರು	41	247	323	611
33	ಬಿ.ಎ.ಶಂಕರ್ ಹುಳಿಯೂರು	8	231	136	375
34	ರಹ್ಮತ್ ಉಲ್ಲಾ ಹುಳಿಯೂರು	33	285	218	536
35	ಬಿ.ಎ.ವಿ.ಶೆಟ್ಟಿ ಹುಳಿಯೂರು	31	294	75	400
36	ಒ.ಸಿ.ಸಿ.ಎಸ್. ಹುಳಿಯೂರು	32	247	154	433
37	ಶಶಿಕಲಾ ಹುಳಿಯೂರು	12	278	164	454
38	ಎಲ್.ಎಸ್.ಸಿ.ಎಸ್. ಬೆಳ್ಳಾರ	68	466	235	769
39	ಎಫ್.ಪಿ.ಡಿ. ಹೊಯ್ಕಳಕಟ್ಟೆ	61	345	177	583
40	ಎಸ್.ಸಿ.ಎಸ್. ಕೆಂಕೆರೆ	46	385	262	693
41	ಎಸ್.ಸಿ.ಎಸ್.ಗಾಣದಾಳ್	102	867	277	1246
42	ಎಸ್.ಸಿ.ಎಸ್.ಶಿಡ್ಲಕಟ್ಟೆ	80	458	102	640
43	ವಿ.ಎಸ್.ಎಸ್.ಎನ್., ಯಳನಾಡು	69	432	299	800
44	ಚಿಕ್ಕಣ್ಣ ಯಳನಾಡು	56	297	144	497
45	ವಿ.ಎಸ್.ಎಸ್.ಎನ್., ದಸೂಡಿ	68	742	312	1122
46	ಎಫ್.ಪಿ.ಡಿ.ಚಿಕ್ಕಬಿದರೆ	39	319	128	486

47	ವೈ.ಎಫ್.ಸಿ. ಕೋಡಿಹಳ್ಳಿ	32	187	68	287
48	ವೈ.ಎಫ್.ಸಿ. ದೊಡ್ಡಬಿದರೆ	27	238	65	330
49	ವೈ.ಎಫ್.ಸಿ.ವೈ.ಎನ್.ಪಾಳ್ಯ	15	287	136	438
50	ಎಫ್.ಪಿ.ಡಿ. ಹೊನಹಳ್ಳಿ ಪಾಳ್ಯ	94	368	345	807
51	ಎಫ್.ಪಿ.ಡಿ. ತಮ್ಮಡಿಹಳ್ಳಿ	73	246	202	521
52	ಎಫ್.ಪಿ.ಡಿ. ಕೋರಗೆರೆ	66	174	122	362
53	ಎಫ್.ಪಿ.ಡಿ. ಮೇಲನಹಳ್ಳಿ	42	345	138	525
54	ಎಫ್.ಪಿ.ಡಿ. ದಬ್ಬಗುಂಟೆ	69	611	216	896
55	ಎಫ್.ಪಿ.ಡಿ. ಗೌಡಗೆರೆ	44	351	141	536
56	ಎಫ್.ಪಿ.ಡಿ. ಪೋಚಕಟ್ಟೆ	28	343	135	516
57	ಎಫ್.ಪಿ.ಡಿ. ತಿಮ್ಲಾಪುರ	100	386	234	720
58	ಎಫ್.ಪಿ.ಡಿ. ಕೆಂಕೆರೆ	25	289	238	552
59	ಎಫ್.ಪಿ.ಡಿ. ಹಂದಿಗವಡು	29	294	90	413
60	ಎಫ್.ಪಿ.ಡಿ. ಮೋಟಹಳ್ಳಿ	21	182	121	324
61	ಲೇಖಾ ಚಿಕ್ಕಬಿದರೆ	23	224	100	347
62	ಎಫ್.ಪಿ.ಡಿ. ಕಲ್ಲೇನಹಳ್ಳಿ	30	456	168	654
	ಒಟ್ಟು	**4490**	**28195**	**15461**	**43146**
	ಪಟ್ಟಣ ಪ್ರದೇಶ				0
63	ಟಿಎಪಿಸಿಎಂಎಸ್ ಬಿ.ನಾ.ಹಳ್ಳಿ	41	475	413	929
64	ಮಹಿಳಾ ವಿವಿದೋದ್ದೇಶ ಸಹಕಾರ ಸಂಘ.,	19	503	415	937
65	ಶ್ರೀ.ರೇವಣಸಿದ್ದಯ್ಯನ ಕಂಬಳಿ ಸಹಕಾರ ಸಂಘ	51	492	432	975
66	ಟೌನ್ ಬಳಕೆದಾರರ ಸಹಕಾರ ಸಂಘ	45	405	459	909
67	ಬನಶಂಕರಿ ರೇಷ್ಮೆ ಕೈಮಗ್ಗ ಸಹಕಾರ ಸಂಘ	22	294	383	699
68	ಕನಕ ಮಹಿಳಾ ಸಹಕಾರ ಸಂಘ	47	449	350	846
	ಒಟ್ಟು	**225**	**2618**	**2452**	**5295**
	ಸಿರಾ ತಾಲ್ಲೂಕು ಬುಕ್ಕಾಪಟ್ಟಣ				
69	ವಿ.ಎಸ್.ಎಸ್.ಎನ್., ಕಸಬಾ	163	537	281	9810

70	ವಿ.ಎಸ್.ಎಸ್.ಎನ್., ಬುಕ್ಕಾಪಟ್ಟಣ ಬ್ರಾಂಚ್	7	68	70	145
71	ಸ.ನೌ.ಸಂ., ಬುಕ್ಕಾಪಟ್ಟಣ	0	0	70	70
72	ವಿ.ಎಸ್.ಎಸ್.ಎನ್., ದೊಡ್ಡ ಅಗ್ರಹಾರ	85	418	150	653
73	ವಿ.ಎಸ್.ಎಸ್.ಎನ್., ಗಾಣದಹುಣನೆ	52	273	144	469
74	ವೈ.ಆರ್.ಎಸ್.ಹೊನ್ನೇನಹಳ್ಳಿ	40	393		572
75	ಎಫ್.ಪಿ.ಡಿ. ಶಾಗದಡು	99	260	180	539
76	ಕಿತ್ತೂರು ಚೆನ್ನಮ್ಮ ಮಹಿಳಾ ಸಂಘ ಗೋಪಾಲದೇವರಹಳ್ಳಿ	120	675	104	899
77	ಎಫ್.ಪಿ.ಡಿ. ಹುಣಸೇಕಟ್ಟೆ	64	416	209	689
78	ಎಫ್.ಪಿ.ಡಿ. ನೇರಳೆಗುಟ್ಟ	16	275	169	460
79	ಎಫ್.ಪಿ.ಡಿ. ರಾಮಲಿಂಗಾಪುರ	50	256	132	438
80	ಎಫ್.ಪಿ.ಡಿ. ಮಾದೇನಹಳ್ಳಿ	52	350	195	597
81	ಎಫ್.ಪಿ.ಡಿ. ತುಪ್ಪದಕೋಣ	65	505	299	869
82	ಎಫ್.ಪಿ.ಡಿ. ವಡ್ಡನಹಳ್ಳಿ	105	465	149	719
83	ಎಫ್.ಪಿ.ಡಿ. ಕಿಲಾರದಹಳ್ಳಿ	63	390	186	641
84	ಎಫ್.ಪಿ.ಡಿ. ಯರಮಾದನಹಳ್ಳಿ	40	140	95	275
85	ಎಫ್.ಪಿ.ಡಿ. ಹೊನಹಳ್ಳಿ	65	437	113	615
86	ಎಫ್.ಪಿ.ಡಿ. ಚಿಕ್ಕಅಗ್ರಹಾರ	17	151	94	262
87	ಎಫ್.ಪಿ.ಡಿ. ಹುಯಿಲ್‌ದೂರೆ	41	312	206	559
	ಒಟ್ಟು	**1144**	**6321**	**2987**	**10452**

ಕರ್ನಾಟಕ ವಿಧಾನ ಸಭೆ

325 ಶ್ರೀ ಸುರೇಶ್ ಬಾಬು ಸಿ.ಬಿ.

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಬಿ.ಪಿ.ಎಲ್. ಕಾರ್ಡುಗಳು ಅಸಮರ್ಪಕ ವಿತರಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

ಆ) ಹಾಗಿದ್ದಲ್ಲಿ, ಇದುವರೆಗೆ ತುಮಕೂರು ಜಿಲ್ಲೆಯಲ್ಲಿ ನಡೆದಿರುವ ಜನಸ್ಪಂದನ ಕಾರ್ಯಕ್ರಮದಲ್ಲಿ ಬಿಪಿಎಲ್ ಕಾರ್ಡ್ ಕೋರಿ ಬಂದಿರುವ ಅರ್ಜಿಗಳೆಷ್ಟು;

ಜನಸ್ಪಂದನ ಕಾರ್ಯಕ್ರಮದಲ್ಲಿ 10,476 ಬಿಪಿಎಲ್ ಕಾರ್ಡು ಕೋರಿ ಅರ್ಜಿಗಳು ಬಂದಿರುತ್ತವೆ.

ಇ) ಆ ಪೈಕಿ ಎಷ್ಟು ಫಲಾನುಭವಿಗಳನ್ನು ಅರ್ಹರೆಂದು ಗುರುತಿಸಲಾಗಿದೆ;

ಈ ಪೈಕಿ 3,961 ಕುಟುಂಬಗಳನ್ನು ಬಿಪಿಎಲ್ ಎಂದು ಗುರುತಿಸಲಾಗಿದೆ.

ಈ) ಅರ್ಹ ಫಲಾನುಭವಿಗಳಿಗೆ ಬಿಪಿಎಲ್ ಕಾರ್ಡ್‌ಗಳನ್ನು ವಿತರಿಸಲು ಕೈಗೊಂಡಿರುವ ಕ್ರಮಗಳೇನು;

ಪಡಿತರ ಚೀಟಿ ಪಡೆಯದೆ ಇರುವಂತಹ ಕುಟುಂಬಗಳಿಗೆ ನೆಮ್ಮದಿ ಕೇಂದ್ರಗಳ ಮುಖಾಂತರ ಪಡಿತರ ಚೀಟಿಗಳನ್ನು ನೀಡಲು ಸರ್ಕಾರದ ಆದೇಶದನ್ವಯ ತುಮಕೂರು ಜಿಲ್ಲೆಯಲ್ಲಿ 55 ನೆಮ್ಮದಿ ಕೇಂದ್ರಗಳ ಮೂಲಕ 1,64,131 ಅರ್ಜಿಗಳನ್ನು ವಿತರಿಸಿ, ದಿ:19-02-2009 ರ ವರೆಗೆ 1,28,353 ತಾತ್ಕಾಲಿಕ ಪಡಿತರ ಕೂಪನ್ ವಿತರಿಸಿದ್ದು, ವಿತರಣೆ ಕಾರ್ಯವು ಪ್ರಗತಿಯಲ್ಲಿರುತ್ತದೆ.

ಉ) ಹಾಗಿದ್ದಲ್ಲಿ, ಇನ್ನೆಷ್ಟು ದಿನಗಳಲ್ಲಿ ಬಿಪಿಎಲ್ ಕಾರ್ಡ್‌ಗಳನ್ನು ಫಲಾನುಭವಿಗಳಿಗೆ ಮರು ಹಂಚಿಕೆ ಮಾಡಲಾಗುವುದು?

ನೆಮ್ಮದಿ ಕೇಂದ್ರಗಳ ಮೂಲಕ ವಿತರಿಸಲಾದ ಪಡಿತರ ಚೀಟಿ ಕೋರಿಕೆ ಅರ್ಜಿಗಳಿಗೆ, ತಾತ್ಕಾಲಿಕ ಪಡಿತರ ಚೀಟಿಗಳನ್ನು ವಿತರಿಸಲು ಫೆಬ್ರವರಿ 2009ರ ಅಂತ್ಯದವರೆಗೆ ಕಾಲಾವಕಾಶ ಕಲ್ಪಿಸಲಾಗಿದೆ.

ಆನಾಸ 39 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

327 ಶ್ರೀ ಗೋಪಾಲ ಭಂಡಾರಿ. ಹೆಚ್ (ಕಾರ್ಕಳ)
ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಅ) ರಾಜ್ಯದ ಯಾವ ಯಾವ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಛಾಯಚಿತ್ರವಿರುವ ಕಾರ್ಡುಗಳನ್ನು ವಿತರಿಸಲಾಗಿದೆ;

(i) ಮಂಗಳೂರು ಜಿಲ್ಲೆಯ ಸುಳ್ಯ, ಬೆಳ್ತಂಗಡಿ, ಪುತ್ತೂರು ಮತ್ತು ಬಂಟವಾಳ ತಾಲ್ಲೂಕುಗಳಲ್ಲಿ (ii) ಉಡುಪಿ ಜಿಲ್ಲೆಯ ಕಾರ್ಕಳ ಮತ್ತು ಕುಂದಾಪುರ ತಾಲ್ಲೂಕುಗಳಲ್ಲಿ (iii) ಮೈಸೂರು ಜಿಲ್ಲೆಯ ಮೈಸೂರು ಗ್ರಾಮಾಂತರ ತಾಲ್ಲೂಕಿನಲ್ಲಿ, ಮಡಿಕೇರಿ ಜಿಲ್ಲೆಯ ವಿರಾಜಪೇಟೆ ಮತ್ತು (iv) ಮಡಿಕೇರಿ ತಾಲ್ಲೂಕುಗಳಲ್ಲಿ, ಬಾಗಲಕೋಟೆ ಜಿಲ್ಲೆಯ ಬೀಳಗಿ ಮತ್ತು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಮತ್ತು ಶೃಂಗೇರಿ ತಾಲ್ಲೂಕುಗಳಲ್ಲಿ, ಛಾಯಾಚಿತ್ರವಿರುವ ಕಾರ್ಡುಗಳನ್ನು ವಿತರಿಸಲಾಗಿದೆ.

ಆ) ಬಿಪಿಎಲ್ ಮತ್ತು ಎಪಿಎಲ್ ಫಲಾನುಭವಿಗಳನ್ನು ಗುರುತಿಸುವಲ್ಲಿ ಆಗಿರುವ ಲೋಪದೋಷಗಳು, ಹೆಸರು ಮತ್ತು ಛಾಯಚಿತ್ರಗಳಲ್ಲಿರುವ ದೋಷಗಳು ಸರ್ಕಾರ ಗಮನಕ್ಕೆ ಬಂದಿದೆಯೇ;

ಹೌದು

ಇ) ಈ ಲೋಪದೋಷಗಳನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವೇನು;

ಅಹವಾಲು ಅರ್ಜಿಗಳನ್ನು ಸ್ವೀಕರಿಸಿ, ತಿದ್ದುಪಡಿ ಮಾಡಿಕೊಡಲಾಗಿದೆ. ಗಣಕಯಂತ್ರ ಮೂಲಕ ಹಾಗೂ ಪರಿಶೀಲನೆ ಮಾಡಿ ಅನರ್ಹ, ನಕಲಿ ಹಾಗೂ ಬೋಗಸ್ ಪಡಿತರ ಚೀಟಿಯನ್ನು ಕೈಬಿಡಲಾಗುತ್ತಿದೆ.

ಹಾಲಿ ನೆಮ್ಮದಿ ಕೇಂದ್ರಗಳಲ್ಲಿ ಸಹ ಪಡಿತರ ಚೀಟಿಗಳ ವರ್ಗ ಬಲದಾವಣೆಗೆ ಅವಕಾಶ ನೀಡಿದ್ದು, ಈ ಸೌಲಭ್ಯವನ್ನು ನೆಮ್ಮದಿ ಕೇಂದ್ರದಿಂದ ಪಡಿತರ ಚೀಟಿದಾರರು ಪಡೆಯುತ್ತಿದ್ದಾರೆ. ತಾಂತ್ರಿಕ ಲೋಪದೋಷಗಳನ್ನು ಸಹ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ನೆಮ್ಮದಿ ಕೇಂದ್ರದಿಂದ ಮನವಿ ಸ್ವೀಕಾರ ಮಾಡುವ ಮತ್ತು ಕಾರ್ಡುವಿತರಿಸುವ ಕ್ರಮದಿಂದಾಗಿ ಅನೇಕ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)

ಇಲ್ಲ

ಅನಾಸ. 40ಡಿಆರ್.ಎ 2009.

(ಹೆಚ್. ಹಾಲಪ್ಪ)
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು.

ಕರ್ನಾಟಕ ವಿಧಾನ ಸಭೆ

328 ಶ್ರೀ. ಗೋಪಾಲ ಭಂಡಾರಿ. ಹೆಚ್.

ಕೃಷಿ ಸಚಿವರು

ಅ) ರೈತರಿಗೆ ಒದಗಿಸಲಾಗುವ ಕೃಷಿ ಯಂತ್ರೋಪಕರಣಕ್ಕೆ ಸಿಗಲಿರುವ ಸಹಾಯ ಧನವನ್ನು ನೇರವಾಗಿ ಅವರ ಖಾತೆಗೆ ಕಳುಹಿಸದೇ ಇರಲು ಕಾರಣವೇನು;

ರೈತರು ಯಂತ್ರೋಪಕರಣಗಳನ್ನು ಪೂರ್ತಿ ಹಣ ನೀಡಿ ಖರೀದಿಸಿದಲ್ಲಿ ಸಹಾಯಧನವನ್ನು ರೈತರಿಗೆ ನೇರವಾಗಿ ಅವರ ಖಾತೆಗೆ ನೀಡಲಾಗುತ್ತಿದೆ.

ಆ) ಯಂತ್ರೋಪಕರಣಗಳ ವಿತರಕರಿಗೆ ಸಹಾಯ ಧನವನ್ನು ನೇರವಾಗಿ ಬಿಡುಗಡೆ ಮಾಡಲಾಗುತ್ತಿದಿಯೇ; ನೇರವಾಗಿ ವಿತರಣೆಗಾರರಿಗೆ ಬಿಡುಗಡೆ ಮಾಡುವುದರಿಂದ ಭ್ರಷ್ಟಾಚಾರಕ್ಕೆ ಅವಕಾಶವಾಗುತ್ತಿಲ್ಲವೆ;

ಯಂತ್ರೋಪಕರಣಗಳ ವಿತರಕರಿಗೆ ರೈತರು, ರೈತರ ವಂತಿಕೆಯನ್ನು ಮಾತ್ರ ನೀಡಿದ್ದಲ್ಲಿ ಸಹಾಯಧನವನ್ನು ಯಂತ್ರೋಪಕರಣ ವಿತರಕರಿಗೆ ಬಿಡುಗಡೆ ಮಾಡಲಾಗುತ್ತಿದೆ. ರೈತರು ಪೂರ್ಣ ಮೊತ್ತವನ್ನು ನೀಡಿ ಸವಲತ್ತನ್ನು ಖರೀದಿಸಿದಲ್ಲಿ ಸಹಾಯಧನವನ್ನು ರೈತರಿಗೆ ನೇರವಾಗಿ ನೀಡಲಾಗುತ್ತಿದೆ. ರೈತರು ಸವಲತ್ತನ್ನು ಖರೀದಿಸಿ, ತೃಪ್ತಿಕರ ಪ್ರಮಾಣ ಪತ್ರ ನೀಡಿದ ನಂತರವೇ ಅಗತ್ಯ ದಾಖಲಾತಿಗಳನ್ನು ರೈತರಿಂದ ಹಾಗೂ ಸರಬರಾಜುದಾರರಿಂದ ಪಡೆದು ಕ್ಷೇತ್ರಮಟ್ಟದಲ್ಲಿ ಸರಬರಾಜಾದ ಸವಲತ್ತನ್ನು ಪರಿಶೀಲಿಸಿದ ನಂತರ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಕರ್ನಾಟಕ ವಿಧಾನ ಸಭೆ

329 ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಮಾನ್ಯ ಕೃಷಿ ಸಚಿವರು

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ (1 ಸಹಾಯಕ ಕೃಷಿ ನಿರ್ದೇಶಕರು, 6 ಕೃಷಿ ಅಧಿಕಾರಿಗಳು, 2 ಹುದ್ದೆ ಸಹಾಯಕ ಕೃಷಿ ಅಧಿಕಾರಿ ಹಾಗೂ 9 ಹುದ್ದೆ ಕೃಷಿ ಸಹಾಯಕ) ಒಟ್ಟು 18 ಹುದ್ದೆಗಳು, ಖಾಲಿ ಇದ್ದು ರೈತರಿಗೆ ಕೃಷಿ ಇಲಾಖೆಯಿಂದ ಮಾಹಿತಿ ಪಡೆಯಲು ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು?

LH-VS+62

ಕೃಷಿ ಸಹಾಯಕರ ಹುದ್ದೆಗಳನ್ನು ಬಿಟ್ಟು ಖಾಲಿ ಇರುವ ಹುದ್ದೆಗಳನ್ನು ನೇರನೇಮಕಾತಿ, ವರ್ಗಾವಣೆ ಹಾಗೂ ಬಡ್ತಿ ಮೂಲಕ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂಖ್ಯೆ:ಕೃತೋಇ 67 ಕೃಪಸೇ 2009

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

330 ಶ್ರೀ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್

ಕೃಷಿ ಸಚಿವರು

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಊಡಗಿ, ಹಾಗನಹಳ್ಳಿ ಮತ್ತು ಹಾಬಾಳ (T) ಗ್ರಾಮಗಳಲ್ಲಿ ತೊಗರಿಬೆಳೆ ಸಂಪೂರ್ಣ ವಿಫಲವಾಗಿ ರೈತರು ಸಂಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು.

Yes.

ಆ) ಹಾಗಿದ್ದಲ್ಲಿ, ಪರಿಹಾರ ನೀಡಲು ಸರ್ಕಾರ ಕೈಗೊಂಡ ಕ್ರಮವೇನು?

ಸದರಿ ರೈತರು ಬೆಳೆ ವಿಮಾ ಯೋಜನೆ ಅಡಿಯಲ್ಲಿ ಪ್ರೀಮಿಯಮ್ ಪಾವತಿಸುವ ಮೂಲಕ ಭಾಗವಹಿಸಿದ್ದರೆ, ಸದರಿ ಯೋಜನೆ ಅಡಿಯಲ್ಲಿ ನಿಯಮಾನುಸಾರ ಪರಿಹಾರವನ್ನು ಪಡೆಯಬಹುದಾಗಿದೆ.

The farmers who have participated by paying necessary premium under crop Insurance Scheme, will get the compensation as per scheme.

ಕೃತೋಇ/46/ಕೃಉಇ/2009

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

331 ಶ್ರೀ ಹೆಚ್.ಕೆ.ಕುಮಾರಸ್ವಾಮಿ,

ಕೃಷಿ ಸಚಿವರು

ಅ) ಕೃಷಿ ಇಲಾಖೆಯಲ್ಲಿ ಕೃಷಿ ಸಹಾಯಕರ ಮಂಜೂರಾತಿ ಹುದ್ದೆಗಳ ಸಂಖ್ಯೆ ಎಷ್ಟು; ಹಾಲಿ ಕಾರ್ಯನಿರ್ವಹಿಸುತ್ತಿರುವ ಕೃಷಿ ಸಹಾಯಕರೆಷ್ಟು; ಹಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಮಂಜೂರಾತಿ ಹುದ್ದೆಗಳ ಸಂಖ್ಯೆ 2938

ಹಾಲಿ ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ : 1854
ಖಾಲಿ ಇರುವ ಹುದ್ದೆಗಳ ಸಂಖ್ಯೆ : 1084

ಆ) ಕಳೆದ 3 ವರ್ಷಗಳಿಂದ ಹೊಸದಾಗಿ ಮಂಜೂರಾತಿ ಮಾಡಿರುವ ಕೃಷಿ ಸಹಾಯಕರ ಹುದ್ದೆಗಳೆಷ್ಟು?

ಕಳೆದ 3 ವರ್ಷಗಳಲ್ಲಿ ಹೊಸದಾಗಿ ಯಾವುದೇ ಹುದ್ದೆಗಳನ್ನು ಮಂಜೂರು ಮಾಡಿರುವುದಿಲ್ಲ.

ಇ) ಕೃಷಿ ಸಹಾಯಕರಿಲ್ಲದೆ ಹೆಚ್ಚಿನ ಕ್ಷೇತ್ರಗಳಲ್ಲಿ ರೈತರಿಗೆ ತೊಂದರೆಯಾಗಿರುವುದು ನಿಜವೇ; ಹಾಗಿದ್ದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಕೃಷಿ ಸಹಾಯಕರ ಖಾಲಿ ಹುದ್ದೆಗಳನ್ನು ರದ್ದು ಗೊಳಿಸಲಾಗಿರುವುದರಿಂದ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸಾಧ್ಯವಿಲ್ಲ. ರೈತರ ಸಮಸ್ಯೆಗಳನ್ನು ಇತರೆ ಅಧಿಕಾರಿಗಳು ಪರಿಹರಿಸುತ್ತಿದ್ದಾರೆ. ಆದ್ದರಿಂದ ರೈತರಿಗೆ ತೊಂದರೆಯಾಗುವುದಿಲ್ಲ.

(ಕೃತೋಇ 28 ಕೃವಸೆ 2009)

ಕೃಷಿ ಸಚಿವರು.

ಕರ್ನಾಟಕ ವಿಧಾನ ಸಭೆ

334 ಡಾ॥ ಬಗಲಿ ಸರ್ವಭೌಮ ಸಶಗೌಡ

ಅ) ಪ್ರಸಕ್ತ ಸಾಲಿನಲ್ಲಿ ಬಿ.ಡಿ.ಸಿ.ಸಿ. ಬ್ಯಾಂಕ್, ಬಿಜಾಪುರ ಇವರು ಇಂಡಿ ಮತಕ್ಷೇತ್ರದಲ್ಲಿರುವ ವ್ಯವಸಾಯ ಸೇವಾ ಸಹಕಾರಿ ಸಂಘಗಳಿಗೆ ಕಡಿಮೆ ಪ್ರಮಾಣದ ಸಾಲ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇಲ್ಲ.

ಆ) ಇಂಡಿ ಮತಕ್ಷೇತ್ರದಲ್ಲಿರುವ ವ್ಯವಸಾಯ ಸೇವಾ ಸಹಕಾರ ಸಂಘಗಳು ಎಷ್ಟು? ಕಳೆದ ಮೂರು ವರ್ಷಗಳಲ್ಲಿ ಆ ಸಂಘಗಳಿಗೆ ನೀಡಿದ ಸಾಲದ ಮೊತ್ತವೆಷ್ಟು? ಪ್ರತಿ ಸಹಕಾರ ಸಂಘದ ಮಾಹಿತಿಯ ಗ್ರಾಮವಾರು ಪ್ರತ್ಯೇಕ ವಿವರ ನೀಡುವುದು.

ಇಂಡಿ ಮತಕ್ಷೇತ್ರದಲ್ಲಿ ಒಟ್ಟು 38 ವ್ಯವಸಾಯ ಸೇವಾ ಸಹಕಾರಿ ಸಂಘಗಳು ಇರುತ್ತವೆ.

ಕಳೆದ ಮೂರು ವರ್ಷಗಳಲ್ಲಿ ಈ ಸಂಘಗಳಿಗೆ ನೀಡಿದ ಸಾಲದ ವಿವರ

ಕ್ರ.ಸಂ.	ವರ್ಷ	ಸಂಖ್ಯೆ	ಮೊತ್ತ (ರೂ.ಲಕ್ಷಗಳಲ್ಲಿ)
1	2006–07	15397	3618.75
2	2007–08	18366	4311.99
3	2008–09	20136	5223.60

ಇ) ಇಂಡಿ ಮತಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಿದ ಸಾಲದ ಮೊತ್ತವನ್ನು ಐಟಂವೈಸ್ 1) ಬೆಳೆಸಾಲ 2) ಪ್ರತಿ ಹೊಸದಾಗಿ ಸದಸ್ಯರಾದವರಿಗೆ

ನೀಡಿದ ಸಾಲ 3) ಕೃಷಿ ಉಪಕರಣಗಳಿಗೆ ನೀಡಿದ ಸಾಲ ಮತ್ತು ಇತರೆ ಮೊತ್ತವೆಷ್ಟು?

.ಇಂಡಿ ಮತಕ್ಷೇತ್ರದಲ್ಲಿ ಕಳೆದ 3 ವರ್ಷಗಳಲ್ಲಿ ನೀಡಿದ ಸಾಲದ ಐಟಂವಾರು ಈ ಕೆಳಕಂಡಂತೆ ಇರುತ್ತದೆ.

ಸಂ.	ಸಾಲದ ವಿವರ	2006–07		2007–08		2008–09	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
1	ಬೆಳೆ ಸಾಲ	13787	3353.98	16210	4005.15	19023	5066.55
2	ಹೊಸ ಸದಸ್ಯರಿಗೆ ಸಾಲ	1381	166.83	1913	224.94	834	81.77
3	ಕೃಷಿ ಉಪಕರಣಕ್ಕೆ	46	65.65	31	44.27	80	
4	ಇತರೆ	183	32.29	212	37.63	199	33
	ಒಟ್ಟು	15397	3618.75	18366	4311.99	20136	522

ಈ) ಸಹಕಾರಿ ಬ್ಯಾಂಕುಗಳಿಗೆ, ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಸಾಲ ನೀಡಲು ಅವಕಾಶವಿದೆಯೇ? ಹಾಗಿದ್ದಲ್ಲಿ ಇಂತಹ ಸಾಲಗಳ ಪ್ರಮಾಣವೆಷ್ಟು? ವಿವರ ನೀಡುವುದು.

ಬ್ಯಾಂಕಿನ ಬೈಲಾ ಪ್ರಕಾರ ಮಧ್ಯಮ ಪ್ರಮಾಣದ ಕೈಗಾರಿಕೆಗಳಿಗೆ ಅವಕಾಶವಿರುತ್ತದೆ. ಇಂಡಿ ತಾಲ್ಲೂಕಿನಲ್ಲಿನ ಜ್ಞಾನಯೋಗಿ ಶಿವಕುಮಾರ ಸಕ್ಕರೆ ಕಾರ್ಖಾನೆಗೆ ರೂ.803.75 ಲಕ್ಷ ಸಾಲ ನೀಡಲಾಗಿದೆ.

ಸಂಖ್ಯೆ: ಸಿಒ 36 ಸಿಸಿಬಿ 2009

ಸಹಿ/–

ಲಕ್ಷ್ಮಣ ಸ. ಸವದಿ)

ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)

ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

337 ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು

ಅ) ರಾಜ್ಯದಲ್ಲಿರುವ ಮಕ್ಕಳ ಸಂಖ್ಯೆ ಮತ್ತು ಅವರ ಅಭಿವೃದ್ಧಿಗಾಗಿ ರೂಪಿಸಿದ ಯೋಜನೆಗಳಾವುವು; ಆ ಯೋಜನೆಗಳಿಗೆ ಮೀಸಲಿಟ್ಟ ಅನುದಾನದ ಮೊತ್ತ ಎಷ್ಟು;

ರಾಜ್ಯದಲ್ಲಿರುವ ಮಕ್ಕಳ ಸಂಖ್ಯೆ: 68,26,168 ಮಕ್ಕಳ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳು ಮೀಸಲಿಟ್ಟ ಅನುದಾನ ಹಾಗೂ ಸೌಲಭ್ಯ ಪಡೆದ ಮಕ್ಕಳ ಸಂಖ್ಯೆಯ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಆ) ಮಕ್ಕಳ ಸಂಖ್ಯೆಗನುಗುಣವಾಗಿ ಅನುದಾನವನ್ನು ಹೆಚ್ಚಿಸುವ ಮತ್ತು ಬಡ ಹಾಗೂ ಜೀತಮುಕ್ತ ಮಕ್ಕಳಿಗೆ ಶಿಕ್ಷಣ – ಉದ್ಯೋಗ ನೀಡುವ ಸರ್ಕಾರದ ಯೋಜನೆಗಳು ಅಷ್ಟು ಪರಿಣಾಮಕಾರಿಯಾಗಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳು ಯಾವುವು;

ಮಕ್ಕಳ ಕಾರ್ಯಕ್ರಮಕ್ಕಾಗಿ ಪ್ರತಿವರ್ಷ ಅನುದಾನವನ್ನು ಹೆಚ್ಚಿಸಲಾಗುತ್ತಿದೆ. ಆದರೆ ಬಡ ಮತ್ತು ಜೀತ ಮುಕ್ತ ಮಕ್ಕಳಿಗೆ ಉದ್ಯೋಗ ನೀಡಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪ್ರತ್ಯೇಕವಾಗಿ ಯಾವುದೇ ಯೋಜನೆ ಇರುವುದಿಲ್ಲ.

ಇ) ಪ್ರಸಕ್ತ ಸಾಲಿನಲ್ಲಿ ವಿವಿಧ ಯೋಜನಾ ಸೌಲಭ್ಯಗಳನ್ನು ಎಷ್ಟು ಮಕ್ಕಳಿಗೆ ವಿಸ್ತರಿಸಿದೆ; (ವಿವರ ನೀಡುವುದು)?

ಅನುಬಂಧದಲ್ಲಿ ಒದಗಿಸಿದೆ.

ಸಂಖ್ಯೆ: ಮಮಇ:39:ಮಭಾಬ2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು.

ಅನುಬಂಧ

ಮಕ್ಕಳ ಅಭಿವೃದ್ಧಿಗೆ ರೂಪಿಸಿದ ಯೋಜನೆಗಳು

ಕ್ರ. ಸಂ.	ಯೋಜನೆಯ ವಿವರ	ಒದಗಿಸಿದ ಅನುದಾನ (ರೂ. ಲಕ್ಷಗಳಲ್ಲಿ)		ಸೌಲಭ್ಯ ಪಡೆದ ಮಕ್ಕಳ ಸಂಖ್ಯೆ
1	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಕೇಂದ್ರ ಪುರಸ್ಕೃತ)	ಅ) ಆಡಳಿತ ವೆಚ್ಚ	22405.15	34 ಲಕ್ಷಗಳು
		ಆ) ಪೂರಕ ಪೌಷ್ಟಿಕ ಆಹಾರ (ಕೇಂದ್ರ ಮತ್ತು	25646.81	37000

		ರಾಜ್ಯ)		
		2) ಕಿಶೋರಿ ಶಕ್ತಿ ಯೋಜನೆ (ಕೇಂದ್ರ)	203.50	99822
		3) ರಾಷ್ಟ್ರೀಯ ಪ್ರಾಯಪೂರ್ವ ಬಾಲಕಿಯರ ಕಾರ್ಯಕ್ರಮ(ಕೇಂದ	10.31	8656
		4) ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ	70.00	
2	ಭಾಗ್ಯಲಕ್ಷ್ಮಿ		ರೂ.26665.00	238870
3	ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಪ್ರಶಸ್ತಿ		ರೂ.25.00	243
4	ಬಾಲಭವನ ಶೌರ್ಯ ಪ್ರಶಸ್ತಿ ಹಾಗೂ ಮಕ್ಕಳ ದಿನಾಚರಣೆ		ರೂ.08.00	13
5	ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯ ವೇತನ		ರೂ.82.75	12280
6	ಬಾಲಕಿಯರ ವಸತಿ ನಿಲಯ		ರೂ.200.00	2000
7	ಅನಾಥ ಮತ್ತು ನಿರ್ಗತಿಕ ಮಕ್ಕಳ ಪಾಲನೆ ಪೋಷಣೆ ಯೋಜನೆ ಯೋಜನೇತರ		ರೂ.60.00 ರೂ.330.00	8250

ಕರ್ನಾಟಕ ವಿಧಾನ ಸಭೆ

338 ಶ್ರೀ ಹ್ಯಾರಿಸ್ ಎನ್.ಎ

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಅ) ರಾಜ್ಯದಲ್ಲಿ ಪಡಿತರ ಕಾರ್ಡ್‌ಗಳ ಹಂಚಿಕೆಯಲ್ಲಿ ಸರ್ಕಾರ ಕೈಗೊಂಡ ಯೋಜನಾ ಅನುಷ್ಠಾನದ ವಿವರಗಳೇನು;

ರಾಜ್ಯದಲ್ಲಿ ಎಲ್ಲಾ ವರ್ಗಗಳಿಗೆ ಪಡಿತರ ಚೀಟಿಗಳನ್ನು ವಿತರಿಸಲು ಮನೆ ಮನೆ ಸಮೀಕ್ಷೆ ಕೈಗೊಂಡು ಅರ್ಹ ಫಲಾನುಭವಿಗಳನ್ನು ಗುರುತಿಸಿ ವರ್ಗವಾರು ಪಡಿತರ ಚೀಟಿಗಳನ್ನು ನೀಡಲಾಗಿದೆ.

ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಯನ್ನು ನೀಡಲಾಗಿದೆ.

ಪಡಿತರ ಚೀಟಿ ಪಡೆಯದೆ ಇರುವಂತಹ ಕುಟುಂಬಗಳಿಗೆ ಹೋಬಳಿ ಮಟ್ಟದಲ್ಲಿ ನೆಮ್ಮದಿ ಕೇಂದ್ರಗಳ ಮುಖಾಂತರ ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ.

ರಾಜ್ಯದಲ್ಲಿ ಭಾವಚಿತ್ರ ಮತ್ತು ಜೀವಮಾಪಕಗಳನ್ನು ಸೆರೆಹಿಡಿಯುವ ಸರ್ಕಾರದ ವಿಶೇಷ ಯೋಜನೆ ಅನುಷ್ಠಾನದಲ್ಲಿ ಇರುತ್ತದೆ.

ಆ) ನೆಮ್ಮದಿ ಕೇಂದ್ರಗಳ ಮೂಲಕ ಇದುವರೆವಿಗೂ ವಿತರಿಸಲಾಗಿರುವ ಬಿಪಿಎಲ್ ಕಾರ್ಡ್‌ಗಳ ಸಂಖ್ಯೆ ಎಷ್ಟು;

ಅವುಗಳಿಗೆ ಪಡಿತರ ಸಾಮಗ್ರಿಗಳನ್ನು ವಿತರಿಸಲು ಪ್ರಾರಂಭಿಸಲಾಗಿದೆಯೇ (ವಿವರ ನೀಡುವುದು);

ನೆಮ್ಮದಿ ಕೇಂದ್ರಗಳ ಮುಖಾಂತರ ದಿನಾಂಕ: 22.2.2009 ರವರೆಗೆ 23,19,025 ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ.

ಇಲ್ಲ.

ಇ) ಬಿಪಿಎಲ್ ಕಾರ್ಡ್ ಫಲಾನುಭವಿಗಳಿಗೆ ವಿಧಿಸಲಾದ ಅರ್ಹತಾ ನಿಯಮಗಳೇನು;

ಅವುಗಳು ಇಂದಿನ ಆರ್ಥಿಕ ಸ್ಥಿತಿಗತಿಗಳಿಗೆ ಅನುಗುಣವಾಗಿವೆಯೇ;

<u>ಬಿಪಿಎಲ್ (ಅಕ್ಷಯ) ಪಡಿತರ ಚೀಟಿ ಫಲಾನುಭವಿಗಳಿಗೆ ಮಾನದಂಡಗಳು ಈ ಕೆಳಕಂಡಂತಿರುತ್ತದೆ :-</u>

ಗ್ರಾಮಾಂತರ ಪ್ರದೇಶದಲ್ಲಿ 12,000/- ರೂ.ಗಳವರೆಗಿನ ವಾರ್ಷಿಕ ವರಮಾನ, ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳವರೆಗಿನ ವಾರ್ಷಿಕ ವರಮಾನವುಳ್ಳ ಕುಟುಂಬಗಳು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರು.

ಕೆಳಕಂಡ ಮಾನದಂಡಗಳಿಗೆ ಒಳಪಟ್ಟ ಕುಟುಂಬಗಳು ಅಕ್ಷಯ ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ.

(1) 3 ಹೆಕ್ಟೇರ್ ಒಣ ಭೂಮಿ ಅಥವಾ ತತ್ಸಮಾನವಾದ ನೀರಾವರಿ ಭೂಮಿ ಹೊಂದಿರುವವರು.

(2) ಸ್ಥಿರ ದೂರವಾಣಿ ಹೊಂದಿರುವವರು.

(3) ಸ್ವಂತವಾಗಿ ಡೀಸಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ ಟಿವಿಎಸ್ ಹೊಂದಿರುವವರನ್ನು ಹೊರತುಪಡಿಸಿ)

(4) ಬ್ಯಾಂಕ್/ಸಹಕಾರಿ ಸಂಘಗಳಲ್ಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;

(5) ಒಂದು ಬೋರ್ ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು

(6) ತಿಂಗಳಿಗೆ ರೂ.1,000/– ಕ್ಕಿಂತ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ ಸರ್ಕಾರೇತರ/ ಖಾಸಗಿ ಸಿಬ್ಬಂದಿಗಳು

(7) ಆದಾಯ ತೆರಿಗೆ ಪಾವತಿಸುವವರು

(8) ನೊಂದಾಯಿತ ಗುತ್ತಿಗೆದಾರರು, ಎಪಿಎಂಸಿ ವಿತರಕರು/ಕಮೀಷನ್ ಏಜೆಂಟ್ಸ್/ಬೀಜ/ ರಸಾಯನಿಕ ಗೊಬ್ಬರ ಇತ್ಯಾದಿಗಳ ಮಾರಾಟಗಾರರು.

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು

ಕೂಡ ಸಮೀಕ್ಷೆ ಮಾಡಿ ನಿರ್ಣಯಿಸಲಾಗುವುದು.

<u>ನಗರ ಪ್ರದೇಶದಲ್ಲಿ ಮೇಲ್ಕಂಡ ಮಾನದಂಡಗಳ ಜೊತೆಗೆ ಈ ಕೆಳಕಂಡ ಮಾನದಂಡಗಳು ಒಳಗೊಂಡಿರುತ್ತವೆ:–</u>

(1) 20' * 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

(2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.

(3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಹೌದು.

ಹೌದು.

ಈ) ಅರ್ಹತಾ ಮಾನದಂಡಗಳನ್ನು ಬಡ ಮಧ್ಯಮ ವರ್ಗದ ಜನರು ಪಡೆಯುವಂತೆ ಸರಗ, ಸಮಂಜಸ ಹಾಗೂ ಸಾಮಾಜಿಕ ನ್ಯಾಯದ ವ್ಯಾಪ್ತಿಯಲ್ಲಿ ರೂಪಿಸಿ ಜಾರಿಗೊಳಿಸಲು ಸರ್ಕಾರ ಮುಂದಾಗುವುದೇ?

ಇದರಂತೆ ಮಾನದಂಡಗಳನ್ನು ನಿಗದಿಪಡಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಆನಾಸ 41 ಡಿಆರ್ಎ 2009

(ಹೆಚ್. ಹಾಲಪ್ಪ)
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

339 ಶ್ರೀ ಎನ್.ಎ.ಹ್ಯಾರಿಸ್(ಶಾಂತಿನಗರ)

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು

ಅ) ರಾಜ್ಯದ ನಗರ ಹಾಗೂ ಗ್ರಾಮಾಂತರ ಪ್ರದೇಶದ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ ನೂತನ ಸರ್ಕಾರ ರೂಪಿಸಿರುವ ಯೋಜನೆಗಳಾವುವು (ವಿವರ ನೀಡುವುದು);

ರಾಜ್ಯದ ನಗರ ಹಾಗೂ ಗ್ರಾಮಾಂತರ ಪ್ರದೇಶದ ಮಹಿಳೆಯರಿಗೆ ಸ್ತ್ರೀಶಕ್ತಿ ಯೋಜನೆಯಡಿಯಲ್ಲಿ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರು ಬ್ಯಾಂಕುಗಳ ಮೂಲಕ ಪಡೆದ ಸಾಲಕ್ಕೆ ಶೇ.6 ರ ಬಡ್ಡಿ ಸಹಾಯ ಧನ ಒದಗಿಸುವ ಯೋಜನೆ.

ಅ) ಮಹಿಳಾ ಫಲಾನುಭವಿಗಳು ಯೋಜನೆಯ ಪ್ರಯೋಜನವನ್ನು ಪಡೆಯಲು ನಿಗದಿ ಪಡಿಸಿರುವ ಆರ್ಥಿಕ ಇತಿಮಿತಿಗಳೇನು; ಆರ್ಥಿಕ ಮಿತಿಯನ್ನು ಹೆಚ್ಚಳ ಮಾಡಿ ಜನಸಾಮಾನ್ಯ ಮಹಿಳೆಯರು ಸೌಲಭ್ಯಗಳನ್ನು ಪಡೆಯಲು ಸರ್ಕಾರ ಅನುಕೂಲ ಮಾಡಿಕೊಡುವುದೇ;

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಹಕಾರ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ರಚನೆಯಾಗಿರುವ ಮಹಿಳಾ ಸ್ವಸಹಾಯ ಗುಂಪುಗಳು ದಿನಾಂಕ: 01.04.2008 ರಿಂದ ಬ್ಯಾಂಕುಗಳ ಮೂಲಕ ಕನಿಷ್ಠ ರೂ.25,000/– ರಿಂದ ರೂ.1.00 ಲಕ್ಷ ಪಡೆದ ಸಾಲಕ್ಕೆ ಶೇ.6 ರ ಬಡ್ಡಿ ಸಹಾಯಧನ ಒದಗಿಸುವ ಅವಕಾಶ ಕಲ್ಪಿಸಲಾಗಿದೆ.

ಇ) ರಾಜ್ಯದಲ್ಲಿ–ಪ್ರಸಕ್ತ ಸಾಲಿನಲ್ಲಿ ವಿಧವಾ ಮತ್ತು ವೃದ್ಧಾಪ್ಯ ವೇತನಗಳನ್ನು ಮಂಜೂರು ಮಾಡಿರುವ ಮಹಿಳೆಯರ ಸಂಖ್ಯೆ ಎಷ್ಟು (ವಿವರ ನೀಡುವುದು)?

ವಿಧವೆಯರಿಗೆ ವಿಧವಾ ವೇತನ ನೀಡುವ ಕಾರ್ಯಕ್ರಮವನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯವು ಅನುಷ್ಠಾನ ಗೊಳಿಸುತ್ತಿದ್ದು, ಪ್ರಸ್ತುತ ಸಾಲಿನಲ್ಲಿ 8,77,440 ವಿಧವೆಯರು ಪ್ರಯೋಜನ ಪಡೆಯುತ್ತಿದ್ದಾರೆ. ಈ ಸೌಲಭ್ಯ ಪಡೆಯಲು ವಿಧವೆಯ ವಯೋಮಿತಿ 18 ವರ್ಷ ಮೇಲ್ಪಟ್ಟಿದ್ದು, ವಾರ್ಷಿಕ ಆದಾಯ ರೂ.6,000/–ಗಳಿಗೆ ಮೀರದಂತಿರಬೇಕು. ಹಾಲಿ ಮಾಸಿಕ ವಿಧವಾ ವೇತನ ರೂ.400/–ರಂತೆ ನೀಡಲಾಗುತ್ತಿದೆ. ವೃದ್ಧಾಪ್ಯ ವೇತನವನ್ನು ಪಡೆಯುತ್ತಿರುವ ಮಹಿಳೆಯರ ಸಂಖ್ಯೆಗೆ ಸಂಬಂಧಿಸಿದಂತೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದ್ದು, ಮಾನ್ಯ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.

ಸಂಖ್ಯೆ: ಮಮಇ:50:ಮಮಅ:2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

340 ಶ್ರೀ ಹ್ಯಾರಿಸ್ ಎನ್. (ಶಾಂತಿನಗರ)
ಮಾನ್ಯ ಕಾರ್ಮಿಕ ಸಚಿವರು

*****

ಅ) ಶಿಕ್ಷಣ ಪಡೆಯದ ಮಹಿಳೆಯರು ಮತ್ತು ಪ್ರಾಪ್ತ ವಯಸ್ಸಿನ ಮಕ್ಕಳಿಗೆ ಅವರಲ್ಲಿರುವ ಕೌಶಲ್ಯ ಅರ್ಹತೆಗಳನ್ನು ಗುರುತಿಸಿ ವಿಶೇಷ ತರಬೇತಿ ಮತ್ತು ಸರ್ಟಿಫಿಕೇಟ್ ನೀಡುವ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ರಾಜ್ಯದಲ್ಲಿ ಮಹಿಳೆಯರಿಗಾಗಿ ಒಟ್ಟು 23 ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗಳು ಅಸ್ತಿತ್ವದಲ್ಲಿವೆ. ಅಲ್ಲದೇ, ಎಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಗಳ ವೃತ್ತಿ /

ಘಟಕಗಳಲ್ಲಿನ ಸೀಟುಗಳಲ್ಲಿ 1/3 ಭಾಗದಷ್ಟು ಸೀಟುಗಳನ್ನು ಮಹಿಳೆಯರಿಗಾಗಿಯೇ ಮೀಸಲಿರಿಸಲಾಗಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ವಿವಿಧ ತಾಂತ್ರಿಕ ಮತ್ತು ತಾಂತ್ರಿಕೇತರ ವೃತ್ತಿಗಳಲ್ಲಿ ತರಬೇತಿ ನೀಡಲಾಗುತ್ತಿದ್ದು, ಈ ತರಬೇತಿ ಪಡೆಯಲು ಕನಿಷ್ಟ 10ನೇ ತರಗತಿ ಉತ್ತೀರ್ಣರಾಗಿರಬೇಕು. ಕೇಂದ್ರ ಸರ್ಕಾರದ ನೆರವಿನೊಂದಿಗೆ ಅನುಷ್ಠಾನಗೊಳಿಸುತ್ತಿರುವ ಮಾಡ್ಯುಲಾರ್ ಎಂಪ್ಲಾಯಬಲ್ ಸ್ಕಿಲ್ ಕಾರ್ಯಕ್ರಮದಡಿಯಲ್ಲಿ ಮಹಿಳೆಯರಿಗೆ ಹೊಂದುವಂತಹ ಅನೇಕ ವೃತ್ತಿಗಳನ್ನು ಗುರುತಿಸಲಾಗಿದೆ. ಆದರೆ ಸದರಿ ವೃತ್ತಿಗಳಲ್ಲಿ ತರಬೇತಿ ಪಡೆಯಲು ಕನಿಷ್ಟ 5ನೇ ತರಗತಿ ಉತ್ತೀರ್ಣರಾಗಿರುವುದು ಕಡ್ಡಾಯವಾಗಿರುತ್ತದೆ. ಶಿಕ್ಷಣ ಪಡೆಯದ ಮಹಿಳೆಯರು ಮತ್ತು ಪ್ರಾಪ್ತ ವಯಸ್ಸಿನ ಮಕ್ಕಳಿಗೆ ಉದ್ಯೋಗ ಮತ್ತು ತರಬೇತಿ ಇಲಾಖೆಯು ಯಾವುದೇ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ.

ಆದರೆ, ಒಂದು ವೇಳೆ ಈ ರೀತಿಯ ಬೇಡಿಕೆ ಬಂದಲ್ಲಿ ಹದಿನೆಂಟು ವರ್ಷ ಪೂರ್ಣಗೊಳಿಸಿದ ಮಹಿಳೆಯರಿಗೆ ಅವರು ಹೊಂದಿರುವ ಕೌಶಲ್ಯ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ವೃತ್ತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮದಡಿ ವಿಶೇಷ ತರಬೇತಿ ಮತ್ತು ಸರ್ಟಿಫಿಕೇಟ್ ನೀಡುವ ಕಾರ್ಯಕ್ರಮದ ಬಗ್ಗೆ ಪರಿಶೀಲಿಸಲಾಗುವುದು.

ಆ) ಕೇಂದ್ರ ಸರ್ಕಾರದ ಅತ್ಯಂತ ಪರಿಣಾಮಕಾರಿ ಯೋಜನೆಯನ್ನು ಮಹಿಳೆಯರು ಪಡೆದುಕೊಳ್ಳುವಂತೆ ಅನುಕೂಲವಾಗಲು ರಾಜ್ಯ ಸರ್ಕಾರ ಆಸಕ್ತಿವಹಿಸಿ ಕ್ರಿಯಾ ಯೋಜನೆ ರೂಪಿಸಲು ಮುಂದಾಗುವುದೇ?

ಕೇಂದ್ರ ಸರ್ಕಾರದ ಯೋಜನೆಯ ಪ್ರಯೋಜನವನ್ನು ಮಹಿಳೆಯರು ಪಡೆದುಕೊಳ್ಳಲು ಅನುಕೂಲವಾಗುವಂತೆ ಕ್ರಿಯಾಯೋಜನೆಯನ್ನು ರೂಪಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಹಾಗಿದ್ದಲ್ಲಿ, ಕೇಂದ್ರದ ಯೋಜನೆಯನ್ನು ಮಹಿಳೆಯರು ಪರಿಣಾಮಕಾರಿಯಾಗಿ ಪಡೆಯಲು ಅನುಕೂಲವಾಗುವಂತೆ ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)

ಮೇಲ್ಕಂಡ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕಾಇ 13 ಇಟಿಎ 2009

(ಬಿ.ಎನ್.ಬಚ್ಚೇಗೌಡ)
ಕಾರ್ಮಿಕ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

341 ಶ್ರೀ ವಿಶ್ವನಾಥ್.ಎಸ್.ಆರ್ (ಯಲಹಂಕ)

ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

1) ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ಖಾಲಿ ಇರುವ ಸಿ ದರ್ಜೆ ಹುದ್ದೆಗಳೆಷ್ಟು (ದ್ವಿತೀಯ ದರ್ಜೆ ಸಹಾಯಕ ಮತ್ತು ತತ್ಸಮಾನ ಹುದ್ದೆಗಳು); ವಿವರ ನೀಡುವುದು?

ಕೃಷಿ ಮಾರಾಟ ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ಖಾಲಿ ಇರುವ ಸಿ ದರ್ಜೆ ಹುದ್ದೆಗಳು (ದ್ವಿತೀಯ ದರ್ಜೆ ಸಹಾಯಕ ಮತ್ತು ತತ್ಸಮಾನ ಹುದ್ದೆಗಳು) ಒಟ್ಟು 19 ಇರುತ್ತವೆ. ವಿವರ ಈ ಕೆಳಕಂಡಂತಿದೆ;

ಕ್ರ ಸಂ.	ಪದವ್ಯಂದ	ಖಾಲಿ ಹುದ್ದೆಗಳ ಸಂಖ್ಯೆ	ಒಟ್ಟು
	ಕೇಂದ್ರ ಕಛೇರಿ, ಬೆಂಗಳೂರು		
1.	ದ್ವಿತೀಯ ದರ್ಜೆ ಸಹಾಯಕರು	07	
2.	ಮಾರಾಟ ಸಹಾಯಕ(ಗ್ರೇಡರ್)	02	09
	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು		
1.	ದ್ವಿತೀಯ ದರ್ಜೆ ಸಹಾಯಕರು	07	
2.	ಮಾರಾಟ ಸಹಾಯಕ(ಗ್ರೇಡರ್)	02	09
	ಸಹಾಯಕ ನಿರ್ದೇಶಕರ ಕಛೇರಿ, ಬೆಂಗಳೂರು		
1.	ದ್ವಿತೀಯ ದರ್ಜೆ ಸಹಾಯಕ	01	01
	ಒಟ್ಟು		**19**

ಸಂಖ್ಯೆ: ಸಇ 51 ಮಾಇಹೇ 2009

ಸಹಿ/-

(ಶಿವರಾಜ್ ಎಸ್.ತಂಗಡಗಿ)

ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು

(ಪಿ.ಕೆ.ವಾಸುದೇವ ಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ

ಸಹಕಾರ ಇಲಾಖೆ

109 ನೇ ಅಧಿವೇಶನ

342 ಶ್ರೀ ವಿಶ್ವನಾಥ.ಎಸ್.ಆರ್. (ಯಲಹಂಕ)

ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ 'ಸಿ' ದರ್ಜೆಯ ಹುದ್ದೆಗಳೆಷ್ಟು? (ದ್ವಿತೀಯ ದರ್ಜೆ ಸಹಾಯಕ/ತತ್ಸಮಾನ ಹುದ್ದೆಗಳ ವಿವರ ನೀಡುವುದು)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ 'ಸಿ' ದರ್ಜೆಯ ಹುದ್ದೆಗಳ ಸಂಖ್ಯೆ 18. ಇದರಲ್ಲಿ ದ್ವಿತೀಯ ದರ್ಜೆ ಸಹಾಯಕರ ಖಾಲಿ ಹುದ್ದೆಗಳ ಸಂಖ್ಯೆ 04. ತತ್ಸಮಾನ ಹುದ್ದೆಗಳು ಯಾವುದೂ ಖಾಲಿ ಇರುವುದಿಲ್ಲ.

ಸಂಖ್ಯೆ:ಮಮಇ 94 ಎಸ್‌ಜೆಡಿ 2009

(ಪಿ.ಎಂ.ನರೇಂದ್ರಸ್ವಾಮಿ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ಕರ್ನಾಟಕ ವಿಧಾನ ಸಭೆ

343 ಶ್ರೀ ಎಸ್.ಆರ್.ವಿಶ್ವನಾಥ್ (ಯಲಹಂಕ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಗ್ರಾಹಕ ವ್ಯವಹಾರಗಳ ಸಚಿವರು

1) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ಖಾಲಿ ಇರುವ 'ಸಿ' ದರ್ಜೆ ಹುದ್ದೆಗಳೆಷ್ಟು? (ದ್ವಿತೀಯ ದರ್ಜೆ/ ತತ್ಸಮಾನ ಹುದ್ದೆಗಳು) ವಿವರ ನೀಡುವುದು.

1) ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ:

ಬೆಂಗಳೂರು ನಗರ ಜಿಲ್ಲೆಯಲ್ಲಿ ಸಿ ದರ್ಜೆಯ ಖಾಲಿ ಹುದ್ದೆಗಳು ಈ ಕೆಳಕಂಡಂತೆ ಇರುತ್ತದೆ:

1) ಮಂಜೂರಾದ ವ್ಯವಸ್ಥಾಪಕರು/ತಿರಸ್ತೇದಾರರ ಹುದ್ದೆಗಳು–6, 5 ಹುದ್ದೆ ಭರ್ತಿಯಾಗಿದು, 1 ಹುದ್ದೆ ಖಾಲಿ ಇರುತ್ತದೆ.
2) ಮಂಜೂರಾದ ಲೆಕ್ಕಾಧೀಕ್ಷಕರು ಹುದ್ದೆ–1, ಹುದ್ದೆ ಖಾಲಿ ಇರುವುದಿಲ್ಲ.
3) ಮಂಜೂರಾದ ಪ್ರಥಮ ದರ್ಜೆ ಸಹಾಯಕರು/ಆಹಾರ ನಿರೀಕ್ಷಕರ ಹುದ್ದೆಗಳು–13, 11 ಹುದ್ದೆ ಭರ್ತಿಯಾಗಿದ್ದು, 2 ಹುದ್ದೆ ಖಾಲಿ ಇರುತ್ತವೆ.
4) ಮಂಜೂರಾದ ದ್ವಿತೀಯ ದರ್ಜೆ ಸಹಾಯಕರು–6, ಹುದ್ದೆ ಖಾಲಿ ಇರುವುದಿಲ್ಲ.

5) ಮಂಜೂರಾದ ಬೆರಳಚ್ಚುಗಾರರ ಹುದ್ದೆಗಳು–1, ಹುದ್ದೆ ಖಾಲಿ ಇರುವುದಿಲ್ಲ

6) ಮಂಜೂರಾದ ವಾಹನ ಚಾಲಕರ ಹುದ್ದೆ–1, ಹುದ್ದೆ ಖಾಲಿ ಇರುವುದಿಲ್ಲ.

2) ಕಾನೂನು ಮಾಪನಶಾಸ್ತ್ರ ಇಲಾಖೆ:

ಕಾನೂನು ಮಾಪನಶಾಸ್ತ್ರ ಇಲಾಖೆಯಲ್ಲಿ (ಬೆಂಗಳೂರು ನಗರ ಜಿಲ್ಲೆ) ವ್ಯಾಪ್ತಿಯಲ್ಲಿ ಯಾವುದೇ ಸಿ ದರ್ಜೆ ಹುದ್ದೆಗಳು (ದ್ವಿತೀಯ ದರ್ಜೆ ಸಹಾಯಕರ/ತತ್ಸಮಾನ ಹುದ್ದೆಗಳು) ಖಾಲಿ ಇರುವುದಿಲ್ಲ.

ಸಂಖ್ಯೆ: ಆನಾಸ 39 ಆಇಸೇ 2009

(ಹೆಚ್.ಹಾಲಪ್ಪ)
ಆಹಾರ, ನಾಗರೀಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು.

ಕರ್ನಾಟಕ ವಿಧಾನ ಸಭೆ

345 ಶ್ರೀ ಶಿವಶಂಕರ ರೆಡ್ಡಿ, ಎನ್.ಹೆಚ್

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಬಿ.ಪಿ.ಎಲ್.,ಎ.ಪಿ.ಎಲ್.ಅಂತ್ಯೋದಯ ಪಡಿತರ ಚೀಟಿಗಳನ್ನು ಹಂಚಿಕೆ ಮಾಡುವಲ್ಲಿ ವಿಳಂಬ ನೀತಿಯನ್ನು ಅನುಸರಿಸಲಾಗುತ್ತಿರುವುದು ನಿಜವೇ;

ಇದರಿಂದಾಗಿ ಬಡವರಿಗೆ ತುಂಬಾ ಅನಾನುಕೂಲವಾಗಿದ್ದು, ತೀವ್ರ ರೀತಿಯ ಕಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇಲ್ಲ

ಇಲ್ಲ

ಆ) ಹಾಗಿದ್ದಲ್ಲಿ, ಬಿ.ಪಿ.ಎಲ್., ಎ.ಪಿ.ಎಲ್., ಅಂತ್ಯೋದಯ ಪಡಿತರ ಚೀಟಿಯನ್ನು ಯಾವ ಯಾವ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ;

ವಿತರಣೆ ಮಾಡಲಾದ ಸಂಖ್ಯೆ ಎಷ್ಟು; ಬಾಕಿ ಇರುವ ಕಾರ್ಡುಗಳನ್ನು ಯಾವಾಗ ವಿತರಣೆ ಮಾಡಲಾಗುವುದು (ವಿವರ ನೀಡುವುದು)

ಗ್ರಾಮಾಂತರ ಪ್ರದೇಶದಲ್ಲಿ 12,000/–ರೂ. ಹಾಗೂ ಪಟ್ಟಣ ಪ್ರದೇಶದಲ್ಲಿ 17,000/–ರೂ. ಕ್ಕಿಂತ ವಾರ್ಷಿಕ ವರಮಾನ ಕಡಿಮೆ ಆದಾಯವಿರುವ ಅರ್ಹ ಫಲಾನುಭವಿಗಳಿಗೆ ಬಿಪಿಎಲ್/ಅಂತ್ಯೋದಯ ಹಾಗೂ ಬಿಪಿಎಲ್ ಆದಾಯ ಮಿತಿಗಿಂತ ಹೆಚ್ಚಿರುವ ಫಲಾನುಭವಿಗಳಿಗೆ ಎಪಿಎಲ್ ಪಡಿತರ ಚೀಟಿ ವಿತರಣೆ ಮಾಡಲಾಗಿದೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ವಿತರಣೆ ಮಾಡಲಾದ ಅಂತ್ಯೋದಯ ಅನ್ನ ಪಡಿತರ ಚೀಟಿಗಳು 8,215, ಅಕ್ಷಯ (ಬಿಪಿಎಲ್) 43,879, ಎಪಿಎಲ್

18696 ನೆಮ್ಮದಿ ಕೇಂದ್ರಗಳಲ್ಲಿ ದಿ:18–02–2009 ರವರೆಗೆ ಸ್ವೀಕೃತವಾಗಿರುವ 11,608 ಅರ್ಜಿಗಳಲ್ಲಿ ಇದುವರೆಗೆ 9,280 ತಾತ್ಕಾಲಿಕ ಪಡಿತರ ಚೀಟಿ ವಿತರಿಸಲಾಗಿವೆ. ಉಳಿದ 2,328 ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಆನಾಸ 42 ಡಿಆರ್‌ಎ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

<u>ಕರ್ನಾಟಕ ವಿಧಾನ ಸಭೆ</u>

347 ಶ್ರೀ ಕುಮಾರಸ್ವಾಮಿ ಕೆ.ಜಿ.

ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ಶಿವಮೊಗ್ಗ ನಗರದ ಹೃದಯ ಭಾಗದಲ್ಲಿರುವ ಬಂಧಿಖಾನೆಯನ್ನು ನಗರದ ಹೊರವಲಯದ ಅಗಸಹಳ್ಳಿ ಗ್ರಾಮದಲ್ಲಿ ಲಭ್ಯವಿರುವ ಸುಮಾರು 600 ಎಕರೆ (ಸರ್ವೆ ನಂ.107) ಸರ್ಕಾರಿ ಜಮೀನಿಗೆ ಸ್ಥಳಾಂತರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಹಾಲಿ ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಕಾರಾಗೃಹವನ್ನು ನಗರದ ಹೊರವಲಯದ ಅನುಪಿನಕಟ್ಟೆ ಗ್ರಾಮದ ಸರ್ವೆ ನಂ.126ರಲ್ಲಿನ 80 ಎಕರೆ ಜಮೀನಿನಲ್ಲಿ ನೂತನ ಜಿಲ್ಲಾ ಕಾರಾಗೃಹವನ್ನು ನಿರ್ಮಾಣ ಮಾಡಿ. ಅಲ್ಲಿಗೆ ಸ್ಥಳಾಂತರಿಸಲು ಸರ್ಕಾರವು ತೀರ್ಮಾನಿಸಿದೆ.

ಆ) ಹಾಗಿದ್ದಲ್ಲಿ, ಬಂಧಿಖಾನೆ ನಿರ್ಮಾಣಕ್ಕೆ ಕಾಯ್ದಿರಿಸಿರುವ ಅಂದಾಜು ವೆಚ್ಚವೆಷ್ಟು?

ಕಾರಾಗೃಹ ಹಾಗೂ ವಸತಿ ಗೃಹಗಳ ನಿರ್ಮಾಣದ ಸಲುವಾಗಿ ರೂ.20.00 ಕೋಟಿಗಳ ರೇಖಾ ಅಂದಾಜನ್ನು ತಾತ್ವಿಕವಾಗಿ ಅನುಮೋದಿಸಿದ್ದು, ಸವಿವರ ನಕ್ಷೆ ಹಾಗೂ ಅಂದಾಜುಗಳನ್ನು ಒಪ್ಪಿಸಲು ಲೋಕೋಪಯೋಗಿ ಇಲಾಖೆಯನ್ನು ಕೋರಿದ್ದು, ಅಂದಾಜನ್ನು ನಿರೀಕ್ಷಿಸಲಾಗಿದೆ. ಅಂದಾಜನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಈ ರೀತಿ ಸ್ಥಳಾಂತರದಿಂದ ಲಭ್ಯವಾಗುವ ಸುಮಾರು 55 ಎಕರೆ ಜಮೀನನ್ನು ಸಾರ್ವಜನಿಕ ಉದ್ದೇಶಗಳಿಗೆ ಬಳಸಲಾಗುವುದೇ (ವಿವರ ನೀಡುವುದು);

ಇಂತಹ ಯಾವುದೇ ತೀರ್ಮಾನವನ್ನು ಸದ್ಯಕ್ಕೆ ತೆಗೆದುಕೊಂಡಿರುವುದಿಲ್ಲ.

ಈ) ಈ ಜಾಗದಲ್ಲಿ ಸಾರ್ವಜನಿಕರಿಗಾಗಿ ಒಂದು ಬೃಹತ್ ಕ್ರೀಡಾಂಗಣವನ್ನು ಮತ್ತು ಬಹುಮಹಡಿ ಕಟ್ಟಡ ಮಾದರಿಯಲ್ಲಿ ಕಛೇರಿ ಸಂಕೀರ್ಣವನ್ನು ಕಟ್ಟಿ ಹಾಲಿ

ನಗರದಲ್ಲಿ ಬಾಡಿಗೆ ಕಟ್ಟಡದಲ್ಲಿರುವ ಎಲ್ಲಾ ಸರ್ಕಾರಿ ಕಛೇರಿಗಳನ್ನು ಒಂದೇ ಕಡೆ ತರುವ ಆಲೋಚನೆ ಸರ್ಕಾರದ ಮುಂದಿದೆಯೇ;

ಇಂತಹ ಯಾವುದೇ ತೀರ್ಮಾನವನ್ನು ಸದ್ಯಕ್ಕೆ ತೆಗೆದುಕೊಂಡಿರುವುದಿಲ್ಲ.

ಊ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಆರಂಭಿಸಲಾಗುವುದು (ವಿವರ ನೀಡುವುದು)

ಸಂಖ್ಯೆ:ಹೆಚ್‌ಡಿ 58 ಪಿಆರ್‌ಎ 2009

ಸಹಿ/-

(ಉಮೇಶ್ ವಿ. ಕತ್ತಿ)

ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ. ಕೃಷ್ಣಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕರ್ನಾಟಕ ವಿಧಾನ ಸಭೆ

349 ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ

ಕೃಷಿ ಸಚಿವರು

ಅ) ರಾಜ್ಯದಲ್ಲಿ ವಿದರ್ಭ ಪ್ಯಾಕೇಜ್ ಲಾಭವನ್ನು ಪಡೆಯುತ್ತಿರುವ ಜಿಲ್ಲೆಗಳು/ಪ್ರದೇಶಗಳು ಯಾವುವು? ವಿಧರ್ಭ ಪ್ಯಾಕೇಜ್‌ನ ಉದ್ದೇಶಗಳೇನು?

ರಾಜ್ಯದಲ್ಲಿ ಮಾನ್ಯ ಪ್ರಧಾನ ಮಂತ್ರಿಗಳ ಪುನರ್ವಸತಿ ಪ್ಯಾಕೇಜದಲ್ಲಿ ಇರುವ ಜಿಲ್ಲೆಗಳು ಬೆಳಗಾಂ, ಶಿವಮೊಗ್ಗ ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಮಾನ್ಯ ಪ್ರಧಾನ ಮಂತ್ರಿಗಳ ಪುನರ್ವಸತಿ ಪ್ಯಾಕೇಜನ್ನು (ವಿದರ್ಭ ಪ್ಯಾಕೇಜ್) ಸಂಕಷ್ಟದಲ್ಲಿರುವ ರೈತರಿಗೆ ವಿವಿಧ ಯೋಜನೆಯಡಿಯಲ್ಲಿ ಸಹಾಯಧನ ನೀಡುವುದು ಮತ್ತು ರೈತರ ಅಭಿವೃದ್ಧಿಗೆ ಸಾಧ್ಯವಾಗುವ ಸುಸ್ಥಿರ ಬೇಸಾಯ ಪದ್ಧತಿಗಳನ್ನು ಅಳವಡಿಸುವುದು ಮುಖ್ಯ ಉದ್ದೇಶ.

ಆ) ಹೊಸದಾಗಿ ಯಾವ ಯಾವ ಜಿಲ್ಲೆಗಳನ್ನು ಈ ಯೋಜನೆಯಡಿ ಸೇರಿಸಲು ಸರ್ಕಾರ ಕ್ರಮ ಕೈಗೊಂಡಿದೆ?

ಈ ಕಾರ್ಯಕ್ರಮಕ್ಕೆ ಹೆಚ್ಚಿನ ಜಿಲ್ಲೆಗಳನ್ನು ಸೇರಿಸಲು ಅವಕಾಶವಿರುವುದಿಲ್ಲ.

ಇ) ವಿಜಾಪುರ ಜಿಲ್ಲೆಯ ರೈತರು ಕಳೆದ 5-6 (ಐದಾರು)ವರ್ಷಗಳಿಂದ ಮಳೆ ಇಲ್ಲದೆ ಬರಗಾಲಕ್ಕೆ ತುತ್ತಾಗಿ ಆತ್ಮಹತ್ಯೆಗೆ ಶರಣಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಈ) ವಿದರ್ಭ ಪ್ಯಾಕೇಜ್ ಮಾದರಿಯಂತೆಯೇ, ವಿಜಾಪುರ ಜಿಲ್ಲೆಗೆ ವಿಶೇಷ ಪ್ಯಾಕೇಜ್ ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಇಲ್ಲ.

ಉ) ಹಾಗಿದ್ದಲ್ಲಿ ರೈತರ ಅನುಕೂಲಕ್ಕಾಗಿ ಸರ್ಕಾರವು ಯಾವ ಯಾವ ಕ್ರಮಗಳನ್ನು/ಯೋಜನೆಗಳನ್ನು ಕೈಗೊಂಡಿದೆ(ವಿವರ ನೀಡುವುದು)

ರೈತರ ಅನುಕೂಲಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಸಂಖ್ಯೆ: ಕೃತೋಇ/47/ಕೃಉಇ/2009

ಕೃಷಿ ಸಚಿವರು.

ಅನುಬಂಧ

ರೈತರ ಅನುಕೂಲಕ್ಕಾಗಿ ಸರ್ಕಾರವು ಕೈಗೊಂಡಿರುವ ಕ್ರಮಗಳು:

1. ಶೇಕಡಾ 3ರ ಬಡ್ಡಿ ದರದಲ್ಲಿ ಸಹಕಾರಿ ಸಂಸ್ಥೆಗಳ ಮೂಲಕ ರೈತರಿಗೆ ಸಾಲ ನೀಡುವುದು.
2. ರಿಯಾಯಿತಿ ದರದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜ ಹಾಗೂ ಇತರೆ ಪರಿಕರಗಳನ್ನು ವಿತರಿಸುವುದು.
3. ಬೆಂಬಲ ಬೆಲೆಗಿಂತ ಮಾರುಕಟ್ಟೆಯಲ್ಲಿ ಕೃಷಿ ಉತ್ಪನ್ನಗಳ ದರವು ಕುಸಿದಲ್ಲಿ ಮಾರುಕಟ್ಟೆ ಮಧ್ಯೆ ಪ್ರವೇಶದ ಮೂಲಕ ರೈತರ ಕೃಷಿ ಉತ್ಪನ್ನಗಳ ಖರೀದಿ.
4. ಟ್ರಾಕ್ಟರ್, ಪವರ್ ಟಿಲ್ಲರ್ ಮತ್ತು ಹೈಟೆಕ್ ಕೃಷಿ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ವಿತರಣೆ.
5. ಕೃಷಿ ತಾಂತ್ರಿಕತೆಯ ಬಗ್ಗೆ ರೈತರಿಗೆ ತರಬೇತಿ.
6. ರಿಯಾಯಿತಿಯಲ್ಲಿ ಹನಿ ನೀರಾವರಿಗೆ ಮತ್ತು ತುಂತುರು ನೀರಾವರಿ ಉಪಕರಣಗಳ ವಿತರಣೆ.
7. ಸಾಗುವಳಿ ವೆಚ್ಚ ಕಡಿಮೆ ಮಾಡಲು ಸಾವಯವ ಕೃಷಿ ಹಾಗೂ ಜೀವಾಣು ಗೊಬ್ಬರ ಪ್ರೋತ್ಸಾಹಿಸಲಾಗುತ್ತಿದೆ.
8. ಮಣ್ಣು ಪರೀಕ್ಷೆ ಆಧಾರದ ಮೇಲೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
9. ಕೀಟನಾಶಕ, ರೋನಾಶಕಗಳು ಹಾಗೂ ಸಿಂಪರಣಾ ಯಂತ್ರಗಳನ್ನು ಸೂಕ್ತ ಸಮಯದಲ್ಲಿ ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿದೆ.

LCV:F64

10. ಎಣ್ಣೆಕಾಳು, ದ್ವಿದಳ ಧಾನ್ಯ, ಹತ್ತಿ ಬೆಳೆಗಳಿಗೂ ಸಹ ರಿಯಾಯಿತಿ ದರದಲ್ಲಿ ವಿವಿಧ ಸವಲತ್ತುಗಳನ್ನು ಒದಗಿಸಲಾಗುತ್ತಿದೆ.
11. 2008–09ನೇ ಸಾಲಿನಲ್ಲಿ ಒಣ ಬೇಸಾಯದಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರೂ.1000/– ಸಹಾಯಧನ ನೀಡಲಾಗುತ್ತಿದೆ.
12. ರಸಗೊಬ್ಬರ ಮತ್ತು ವಿದ್ಯುಚ್ಛಕ್ತಿಯನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.
13. ಅಲ್ಲದೆ ಕೃಷಿಗೆ ಸಂಬಂಧಪಟ್ಟ ಇತರೆ ವಿಷಯಗಳನ್ನು ಜಾರಿಗೆ ತರಲಾಗಿದೆ.

<u>ಕರ್ನಾಟಕ ವಿಧಾನ ಸಭೆ</u>

351 ಶ್ರೀ ಸಂಪಂಗಿ ಎನ್ (ಬಾಗೇಪಲ್ಲಿ)

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1999 ರಿಂದ 2004 ರವರೆಗೂ ಎಷ್ಟು ಬಿಪಿಎಲ್ ಮತ್ತು ಎಪಿಎಲ್ ಕಾರ್ಡುಗಳು, ಅಂತ್ಯೋದಯ ಕಾರ್ಡುಗಳು ವಿತರಣೆಯಾಗಿವೆ (ತಾಲ್ಲೂಕುವಾರು ಕಾರ್ಡುಗಳ ವಿವರಣೆ ಒದಗಿಸುವುದು);

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1999 ರಿಂದ 2004ರವರೆಗೂ ವಿತರಿಸಿರುವ ಬಿಪಿಎಲ್ ಮತ್ತು ಎಪಿಎಲ್ ಕಾರ್ಡುಗಳು, ಅಂತ್ಯೋದಯ ಕಾರ್ಡುಗಳ ವಿವರ ಕೆಳಕಂಡಂತಿದೆ:

ಕ್ರ ಸಂ.	ತಾಲ್ಲೂಕು	ಅಂತ್ಯೋದಯ	ಬಿಪಿಎಲ್	ಎಪಿಎಲ್
1	ಚಿಕ್ಕಬಳ್ಳಾಪುರ	2918	26523	15550
2	ಚಿಂತಾಮಣಿ	3390	41531	15723
3	ಶಿಡ್ಲಘಟ್ಟ	2956	29382	8424
4	ಗೌರಿಬಿದನೂರು	4796	43435	8121
5	ಬಾಗೇಪಲ್ಲಿ	4398	30856	5046
6	ಗುಡಿಬಂಡೆ	787	10694	1272
	ಒಟ್ಟು	19245	182421	54136

ಆ) 2004 ರಿಂದ ಈವರೆಗೂ ಅಂದರೆ 2008ನೇ ಸಾಲಿನವರೆಗೂ ವಿತರಣೆಯಾಗಿರುವ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡುಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಕಾರ್ಡುತಗಳ ವಿವರಣೆ ಒದಗಿಸುವುದು);

2004 ರಿಂದ ಈವರೆಗೂ ಅಂದರೆ 2008ನೇ ಸಾಲಿನವರೆಗೂ ವಿತರಣೆಯಾಗಿರುವ ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡುಗಳ ಸಂಖ್ಯೆ ವಿವರ ಕೆಳಕಂಡಂತಿದೆ:–

ಕ್ರ ಸಂ.	ತಾಲ್ಲೂಕು	ಅಂತ್ಯೋದಯ	ಬಿಪಿಎಲ್
1	ಚಿಕ್ಕಬಳ್ಳಾಪುರ	4909	27806
2	ಚಿಂತಾಮಣಿ	6878	41257
3	ಶಿಡ್ಲಘಟ್ಟ	4837	23527
4	ಗೌರಿಬಿದನೂರು	8215	43876
5	ಬಾಗೇಪಲ್ಲಿ	6231	30301
6	ಗುಡಿಬಂಡೆ	1719	7470
	ಒಟ್ಟು	32789	174240

ಇ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿರುವ ಹಳ್ಳಿಗಳು ನಂಜುಂಡಪ್ಪ ವರದಿ ಪ್ರಕಾರ ಅತೀ ಹಿಂದುಳಿದ ಪ್ರದೇಶಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಆಹಾರ ವಿತರಣಾ ಘಟಕಗಳಿವೆ (ತಾಲ್ಲೂಕುವಾರು ವಿವರ ನೀಡುವುದು);

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 563 ನ್ಯಾಯಬೆಲೆ ಅಂಗಡಿಗಳು ಮತ್ತು 6 ಸಗಟು ಮಳಿಗೆಗಳು ಇರುತ್ತವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

ಕ್ರ ಸಂ.	ತಾಲ್ಲೂಕು	ನ್ಯಾಯಬೆಲೆ ಅಂಗಡಿಗಳು	ಸಗಟು ಮಳಿಗೆಗಳು
1	ಚಿಕ್ಕಬಳ್ಳಾಪುರ	106	1.TAPCMS
2	ಚಿಂತಾಮಣಿ	130	1. KFCSC
3	ಶಿಡ್ಲಘಟ್ಟ	85	1. KFCSC
4	ಗೌರಿಬಿದನೂರು	115	1. KFCSC
5	ಬಾಗೇಪಲ್ಲಿ	101	1. KFCSC
6	ಗುಡಿಬಂಡೆ	26	1.TAPCMS
	ಒಟ್ಟು	563	6

ಉ) ಈ ಘಟಕಗಳ ಮೂಲಕ ಪೂರೈಕೆಯಾದ ಆಹಾರಧಾನ್ಯಗಳು ಎಷ್ಟೆಷ್ಟು?

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಪ್ರತಿ ಮಾಹೆಗೆ ವಿತರಿಸಲಾಗುತ್ತಿರುವ ಆಹಾರಧಾನ್ಯಗಳ ತಾಲ್ಲೂಕುವಾರು ವಿವರ:– (ಕ್ವಿಂಟಾಲ್‌ಗಳಲ್ಲಿ)

ಕ್ರ ಸಂ.	ತಾಲ್ಲೂಕು	ಅಂತ್ಯೋದಯ		ಬಿಪಿಎಲ್	
		ಅಕ್ಕಿ	ಗೋಧಿ	ಅಕ್ಕಿ	ಗೋಧಿ

1	ಚಿಕ್ಕಬಳ್ಳಾಪುರ	1423.61	294.54	4367.44	655.33
2	ಚಿಂತಾಮಣಿ	1994.62	412.62	6595.40	988.43
3	ಶಿಡ್ಲಘಟ್ಟ	1402.73	290.22	3687.00	597.67
4	ಗೌರಿಬಿದನೂರು	2382.35	492.90	6684.52	1002.32
5	ಬಾಗೇಪಲ್ಲಿ	1806.99	373.86	4808.64	819.02
6	ಗುಡಿಬಂಡೆ	498.51	103.14	1214.40	179.53
	ಒಟ್ಟು	9508.81	1967.28	27357.40	4242.30

ಆನಾಸ 43 ಡಿಆರ್‌ಪಿ 2009

(ಹೆಚ್.ಹಾಲಪ್ಪ)
ಆಹಾರ ಮತ್ತು ನಾಗರಿಕ ಸರಬರಾಜು
ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

384 ಮಾನ್ಯ ಶ್ರೀ ಖಾದರ್ ಯು.ಟಿ.
ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ಮಂಗಳೂರು ಬಂದಿಖಾನೆಯನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದೇ: ಹಾಗಿದ್ದಲ್ಲಿ ಇದನ್ನು ಯಾವಾಗ ಸ್ಥಳಾಂತರಿಸಲಾಗುವುದು;

ಮಂಗಳೂರಿನಲ್ಲಿ ಸದ್ಯಕ್ಕೆ ಹೊಸ ಬಂದಿಖಾನೆಯು ನಿರ್ಮಾಣವಾಗುತ್ತಿಲ್ಲ. ಹೀಗಾಗಿ, ಸ್ಥಳಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಹಾಗಿದ್ದಲ್ಲಿ, ಇದಕ್ಕಾಗಿ ಮೀಸಲಿಟ್ಟ ಹಣ ಎಷ್ಟು?

ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಹೆಚ್‌ಡಿ 57 ಪಿಆರ್‌ಎ 2009

ಸಹಿ/-
(ಉಮೇಶ್ ವಿ. ಕತ್ತಿ)
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕರ್ನಾಟಕ ವಿಧಾನ ಸಭೆ

385 ಮಾನ್ಯ ಶ್ರೀ ಖಾದರ್ ಯು.ಟಿ.

ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ಮಂಗಳೂರು ಬಂಧೀಖಾನೆಯಲ್ಲಿ ಆಗಾಗ್ಗೆ ಖೈದಿ ಖೈದಿಗಳ ನಡುವೆ ಹಾಗೂ ಖೈದಿ–ಬಂಧೀಖಾನೆ ಸಿಬ್ಬಂದಿಗಳ ನಡುವೆ ಕಾದಾಟ – ಹೊಡೆದಾಟ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

– ಹೌದು –

ಆ) ಹಾಗಿದ್ದಲ್ಲಿ, ಈ ರೀತಿಯ ಜಟಾಪಟಿಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳಲಾಗಿದೆ; (ವಿವರ ನೀಡುವುದು)?

ಮಂಗಳೂರು ಜಿಲ್ಲಾ ಕಾರಾಗೃಹದಲ್ಲಿ ದಿನಾಂಕ:30.10.2008 ರಂದು ಸಂಜೆ ಬಂಧಿಗಳ ಬೀಗ ಮುದ್ರೆ ಮಾಡುವ ಸಮಯದಲ್ಲಿ ಕರ್ತವ್ಯದಲ್ಲಿದ್ದ ವಾರ್ಡರ್ ಶ್ರೀ ಸಂಜೀವ ಶೆಟ್ಟಿರವರ ಕೈಯಲ್ಲಿದ್ದ ಬೀಗದ ಕೈಗಳನ್ನು ಇದೇ ಸಂಸ್ಥೆಯ ನ್ಯಾಯಾಂಗ ಬಂಧನದಲ್ಲಿದ್ದ ವಿಚಾರಣಾ ಬಂಧಿ 8457 ಸಂದೀಪ್ ಶೆಟ್ಟಿ ಮತ್ತಿತರೆ 5 ವಿಚಾರಣಾ ಬಂಧಿಗಳು ಕಸಿದುಕೊಂಡು ಸದರಿಯವರನ್ನು ದೂಡಿ, ಬೀಳಿಸಿ, ನಾಲ್ಕನೇ ನಂಬರಿನ ಸೆಲ್‌ನ ಬೀಗ ತೆಗೆದು, ಈ ಸೆಲ್‌ನಲ್ಲಿದ್ದ ವಿಚಾರಣಾ ಬಂದಿ 9221 ಮೊಹಮದ್ ರಫೀಕ್ ತಂದೆ ಅಬ್ಬಾಸ್ ಬ್ಯಾರಿ ಮತ್ತು 9222 ಫಕೀರ ಅಹಮದ್ ತಂದೆ ಇಸ್ಮಾಯಿಲ್ ರವರ ಮೇಲೆ ದಾಳಿ ಮಾಡಿ ತಲೆಗೆ ಗಾಯ ಮಾಡಿರುತ್ತಾರೆ. ತತ್ಸಂಬಂಧ ಸದರಿ ವಿಚಾರಣಾ ಬಂಧಿಗಳನ್ನು ಕಾರಾಗೃಹದ ಭದ್ರತೆಯ ದೃಷ್ಟಿಯಿಂದ ಬೇರೆ ಬೇರೆ ಕಾರಾಗೃಹಗಳಿಗೆ ವರ್ಗಾಯಿಸಲಾಗಿದೆ ಹಾಗೂ ಈ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸದರಿ ಕಾರಾಗೃಹದ ಪ್ರಭಾರ ಅಧೀಕ್ಷಕರಾದ ಶ್ರೀ ಈಶ್ವರ್ ನಾಯಕ್, ಚೀಫ್ ಜೈಲರ್ ರವರನ್ನು ಕರ್ತವ್ಯ ಲೋಪದ ಮೇರೆಗೆ ದಿನಾಂಕ:05.11.2008 ರಂದು ನಿಲಂಬನದಲ್ಲಿಟ್ಟಿದ್ದು, ಅವರ ಸ್ಥಾನಕ್ಕೆ ಮಡಿಕೇರಿ ಜಿಲ್ಲಾ ಕಾರಾಗೃಹದಿಂದ ಓ.ಓ.ಡಿ. ಆಧಾರದ ಮೇಲೆ ಶ್ರೀ ವಿ.ಶೇಷಮೂರ್ತಿ. ಸಹಾಯಕ ಅಧೀಕ್ಷಕ, ಇವರನ್ನು ನಿಯೋಜಿಸಲಾಗಿದೆ.

ಇನ್ನು ಮುಂದೆ ಇಂತಹ ಘಟನೆಗಳು ಜರುಗದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಹೆಚ್ಚಿನ ಭದ್ರತೆ ವ್ಯವಸ್ಥೆಯನ್ನು ಮಾಡಲಾಗಿದೆ.
ಸಂಖ್ಯೆ:ಹೆಚ್‌ಡಿ 59 ಪಿಎಆರ್‌ಎ 2009

ಸಹಿ/–
(ಉಮೇಶ್ ವಿ. ಕತ್ತಿ)
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ.ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕರ್ನಾಟಕ ವಿಧಾನ ಸಭೆ

386 ಶ್ರೀ ಖಾದರ್ ಯು.ಟಿ. (ಮಂಗಳೂರು)

ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

ಅ) ಕಳೆದ ಆಯವ್ಯಯದಲ್ಲಿ ಕರಾವಳಿ ಪ್ರದೇಶವಾದ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕಾ ರಸ್ತೆಗಳಿಗೆ ಮೀಸಲಿಟ್ಟ ಹಣ ಎಷ್ಟು; ಆ ಪೈಕಿ ಬಿಡುಗಡೆಯಾದ ಹಣ ಎಷ್ಟು;

2007–08ನೇ ಸಾಲಿನ ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಸದರಿ ಯೋಜನೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ರೂ.5.00ಲಕ್ಷಗಳ ಅನುದಾನವನ್ನು ಒದಗಿಸಲಾಗಿತ್ತು. ಈ ರೂ.5.00 ಲಕ್ಷಗಳ ಅನುದಾನವು ಪೂರ್ಣವಾಗಿ ಬಿಡುಗಡೆಯಾಗಿರುತ್ತದೆ.

ಆ) ಈ ಕಾಮಗಾರಿಗಳು ಯಾವ ಹಂತದಲ್ಲಿದೆ; ಇವುಗಳಿಗೆ ವೆಚ್ಚ ಮಾಡಿರುವ ಹಣ ಎಷ್ಟು; (ತಾಲ್ಲೂಕುವಾರು ಆರ್ಥಿಕ ಮತ್ತು ಭೌತಿಕ ಪ್ರಗತಿ ವಿವರ ನೀಡುವುದು)?

ಸದರಿ ಅನುದಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಮೂರು ರಸ್ತೆಗಳನ್ನು ದುರಸ್ತಿಪಡಿಸಲಾಗಿದೆ. ಅವುಗಳ ಭೌತಿಕ ಮತ್ತು ಆರ್ಥಿಕ ಪ್ರಗತಿ ವಿವರಗಳು ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಪ್ರಗತಿ	
		ಆರ್ಥಿಕ (ರೂ.ಲಕ್ಷಗಳಲ್ಲಿ)	ಭೌತಿಕ (ಕಿ.ಮೀ)
1)	ಮಂಗಳೂರು ತಾಲ್ಲೂಕಿನ ಉಳ್ಳಾಲ ರೈಲ್ವೇ ನಿಲ್ದಾಣದ ಪಕ್ಕದಲ್ಲಿ ಹೊಸ ರಸ್ತೆಯನ್ನು ನಿರ್ಮಿಸಿ ಕರಾವಳಿ ರಸ್ತೆಯನ್ನು ಸಂಪರ್ಕಿಸುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು	2.00	0.20
2)	ಮಂಗಳೂರು ತಾಲ್ಲೂಕಿನ ಮುಲ್ಕಿ–ಮೂಡಬಿದ್ರೆ ಕ್ಷೇತ್ರದ ಪಡು . ಪಣಂಬೂರು ಮತ್ತು ಚಿತ್ರಾಪು ಸಂಪರ್ಕಿಸುವ ರಸ್ತೆಯ ಅಭಿವೃದ್ಧಿ	2.00	0.40
3)	ಮಂಗಳೂರು ತಾಲ್ಲೂಕಿನ ಮುಕ್ಕೆ ಸಸಿಹಿತ್ಲು ಮೀನುಗಾರಿಕಾ ರಸ್ತೆಯ ಆಯ್ದ ಭಾಗಗಳ ದುರಸ್ತಿ	1.00	0.20

	ಕಾಮಗಾರಿ		
	ಒಟ್ಟು	5.00	

ಸಂಖ್ಯೆ:ಪಸಂಮೀ 39 ಮೀಇಯೋ 2009

ಸಹಿ/–
(ಆನಂದ ವಸಂತ ಅಸ್ನೋಟಿಕರ)
ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

(ಡಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಕರ್ನಾಟಕ ವಿಧಾನ ಸಭೆ

387 ಶ್ರೀ ಖಾದರ್ ಯು.ಟಿ.

ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸಚಿವರು

ಅ) ರಾಷ್ಟ್ರೀಯ ತೋಟಗಾರಿಕಾ ಮಿಷನ್ ಕಾರ್ಯಕ್ರಮಕ್ಕೆ ದಕ್ಷಿಣ ಕನ್ನಡ ಜಿಲ್ಲೆ ಒಳಪಟ್ಟಿದೆಯೆ; ಈ ಪೈಕಿ ಯಾವ ಯಾವ ತಾಲ್ಲೂಕಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಅನುಷ್ಠಾನಗೊಳಿಸಲಾಗಿರುವ ಕಾರ್ಯಕ್ರಮಗಳಾವುವು; (ವಿವರ ಒದಗಿಸುವುದು);

ಹೌದು

ಈ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಕಾರ್ಯಕ್ರಮಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಈ ಕಾರ್ಯಕ್ರಮಕ್ಕಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಮೀಸಲಿಟ್ಟ ಮೊಬಲಗು ಎಷ್ಟು; ಈ ಮೀಸಲಿಟ್ಟ ಹಣ ಸಂಪೂರ್ಣವಾಗಿ ಸದ್ವಿನಿಯೋಗವಾಗಿದೆಯೇ; (ಸಂಪೂರ್ಣ ವಿವರ ನೀಡುವುದು);

2005–06 ನೇ ಸಾಲಿನಿಂದ 2008–09ನೇ ಸಾಲಿನವರೆಗೆ ಈ ಕಾರ್ಯಕ್ರಮ ದಡಿ ದಕ್ಷಿಣ ಕನ್ನಡ ಜಿಲ್ಲೆಗೆ ಮೀಸಲಿಟ್ಟ ಮೊಬಲಗು ರೂ.13.74 ಕೋಟಿಗಳು ಹಾಗೂ ವಿನಿಯೋಗವಾಗಿರುವ ಹಣ ರೂ.12.74 ಕೋಟಿಗಳು. ವರ್ಷಾವಾರು ವಿವರಗಳನ್ನು ಈ ಕೆಳಗಿ ನೀಡಿದೆ.

(ರೂ.ಕೋಟಿಗಳಲ್ಲಿ)

ಕ್ರ ಸಂ.	ವರ್ಷ	ಮೀಸಲಿಟ್ಟ	ವಿನಿಯೋಗವಾಗಿರುವ ರೂ
1	2005–06	1.31	0.00

2	2006–07	4.08	4.05
3	2007–08	5.60	5.09
4	2008–09 (ಜನವರಿ 2009ರ ಅಂತ್ಯದವರೆಗೆ)	2.75	3.58
	ಒಟ್ಟು	**13.74**	**12.72**

ಇ) ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಬಿಡುಗಡೆಯಾದ ಹಣವೆಷ್ಟು; (ವರ್ಷಾವಾರು ನೀಡುವುದು)?

ಕೇಂದ್ರ ಸರ್ಕಾರದಿಂದ 2005–06 ಮತ್ತು 2006–07 ನೇ ಸಾಲಿಗೆ ಶೇಕಡಾ 100 ರಷ್ಟು ಮತ್ತು 2007–08 ರಿಂದ ಶೇಕಡಾ 85 ರಷ್ಟು ಪಾಲು ಬಿಡುಗಡೆ ಆಗಿದೆ. ವರ್ಷಾವಾರು ವಿವರಗಳನ್ನು ಕೆಳಗೆ ನೀಡಿದೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ.	ವರ್ಷ	ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಹಣ ರೂ.
1	2005–06	44.55
2	2006–07	84.48
3	2007–08	85.71
4	2008–09 (ಜನವರಿ 2009ರ ಅಂತ್ಯದವರೆಗೆ)	125.37
	ಒಟ್ಟು	**340.11**

ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

ಅನುಬಂಧ

ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಅಡಿಯಲ್ಲಿ 2005–06 ರಿಂದ 2008–09 (ಜನವರಿ 2009 ಅಂತ್ಯಕ್ಕೆ) ದಕ್ಷಿಣ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಪ್ರಗತಿ ವರದಿ

	ತಾಲ್ಲೂಕು	ಮಂಗಳೂರು	ಬಂಟ್ವಾಳ	ಪುತ್ತೂರು	ಸುಳ್ಯ	ಬೆಳ್ತಂಗಡಿ	ಒಟ್ಟು
ಕ್ರ. ಸಂ.	ಕಾರ್ಯಕ್ರಮಗಳು	ಸಾಧನೆ	ಸಾಧನೆ	ಸಾಧನೆ	ಸಾಧನೆ	ಸಾಧನೆ	

1	ಸಸ್ಯ ಸಾಮಗ್ರಿಗಳ ಉತ್ಪಾದನೆ	66.36	42.19	11.40	9.82	30.10	**159.87**
2	ಹೊಸ ತೋಟ ಸ್ಥಾಪನೆ	5.68	27.02	6.27	5.22	9.01	**53.20**
3	ಮೊದಲನೇ ಸಾಲಿನ ನಿರ್ವಹಣೆ	2.14	5.24	2.29		3.10	**12.77**
4	ಹೂವುಗಳು	8.59	8.59	8.59	9.20	9.45	**44.42**
5	ಸಾಂಬಾರು ಬೆಳೆಗಳು	14.46	19.27	22.43	18.67	32.89	**107.72**
6	ಔಷಧಿ ಹಾಗೂ ಸುಗಂಧಿ ಬೆಳೆಗಳು	3.39	5.12	4.75	3.59	4.29	**21.14**
7	ಪ್ಲೇಂಟೇಷನ್ ಬೆಳೆಗಳು	39.32	88.60	63.43	49.96	68.83	**310.14**
8	ರಕ್ಷಿತಬೇಸಾಯ ೨	2.14					**2.14**
9	ಪುನಶ್ಚೇತನ	0.22	0.82			0.08	**1.12**
10	ನೀರಿನ ಮೂಲಗಳ ನಿರ್ಮಾಣ	0.43		0.25		0.30	**0.98**
11	ಸಮಗ್ರ ಕೀಟ ಮತ್ತು ರೋಗ ನಿಯಂತ್ರಣ	20.36	121.54	124.78	108.29	95.18	**470.15**
12	ಸಾವಯವ ಬೇಸಾಯ	6.66	18.50	15.47	8.83	1.87	**51.33**
13	ಪ್ರಾತ್ಯಕ್ಷತೆ ಮೂಲಕ ತಂತ್ರಜ್ಞಾನ ಪ್ರಸರಣ	2.50	3.08	2.90	2.23	2.72	**13.43**
14	ಮಾನವ ಸಂಪನ್ಮೂಲ ಅಭಿವೃದ್ಧಿ	7.93	0.89	0.94	0.77	1.76	**12.30**

LA VS. F. 65

15	ಜೇನು ಸಾಕಾಣಿಕೆ ಮೂಲಕ	0.50	0.58	0.69	5.13	0.14	**7.04**
16	ಪ್ಲಾಸ್ಟಿಕ್ ಕ್ವೇಟ್ ವಿತರಣೆ	0.40					**0.40**
17	ಮಿಷನ್ ಮ್ಯಾನೇಜ್ ಮೆಂಟ್	4.57	0.18	1.66		1.50	**7.91**
	ಒಟ್ಟು	**185.65**	**341.63**	**263.12**	**220.72**	**261.22**	**1272.33**

<u>ಕರ್ನಾಟಕ ವಿಧಾನ ಸಭೆ</u>

388 ಶ್ರೀ ಖಾದರ್ ಯು.ಟಿ.

ಕೃಷಿ ಸಚಿವರು

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಒದಗಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಯೇ; ಹೌದು.

ಆ) ಹಾಗಿದ್ದಲ್ಲಿ, ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ವಿತರಣೆ ಮಾಡಿದ ಬಿತ್ತನೆ ಬೀಜಗಳು ಯಾವುವು (ಕ್ವಿಂಟಾಲ್ ಗಳಲ್ಲಿ ತಿಳಿಸುವುದು); ಇದಕ್ಕಾಗಿ ವೆಚ್ಚ ಮಾಡಿದ ಮೊಬಲಗು ಎಷ್ಟು;

ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ವಿತರಣೆ ಮಾಡಿದ ಬಿತ್ತನೆ ಬೀಜದ ವಿವರಗಳು:

ಹಂಗಾಮು	ಬೆಳೆ	(ಪ್ರಮಾಣ–ಕ್ವಿಂಗಳಲ್ಲಿ)	ರಿಯಾಯಿತಿ ಮೊತ್ತ (ರೂ.ಗಳಲ್ಲಿ)
ಮುಂಗಾರು	ಭತ್ತ	227.89	153825.75
ಹಿಂಗಾರು	ಭತ್ತ	92.70	46350.00
	ಒಟ್ಟು	**320.59**	**200175.75**

Details of Seeds distributed during Kharif and Rabi Seasons:

Season	Crop	Qty/in Qtls	Subsidy Value in Rs.
Kharif	Paddy	227.89	153825.75
Rabi	Paddy	92.70	46350.00
	Total	**320.59**	**200175.75**

ಇ) ಈ ಯೋಜನೆಯ ಲಾಭಪಡೆದ ರೈತರ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಈ ಯೋಜನೆಯ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಕೆಳಕಂಡಂತಿದೆ:

No. of Beneficiaries are furnished below:

ಕ್ರ.ಸ.	ತಾಲ್ಲೂಕು	ಫಲಾನುಭವಿಗಳ ಸಂಖ್ಯೆ
1	ಮಂಗಳೂರು	368
2	ಬಂಟ್ವಾಳ	245
3	ಬೆಳ್ತಂಗಡಿ	55
4	ಪುತ್ತೂರು	57
5	ಸುಳ್ಯ	74
	ಒಟ್ಟು	799

ಕೃತೋಇ/50/ಕೃಉಇ/2009

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

389 ಶ್ರೀ ದೃವನಾರಾಯಣ.ಆರ್.(ಕೊಳ್ಳೆಗಾಲ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು

ಅ) ಮೇ, 2008 ರಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಅತ್ಯುತ್ತಮ ಸೋನಾ ಮಸೂರಿ ಅಕ್ಕಿಗೆ ಒಂದು ಕಿಲೋಗೆ ಇದ್ದ ಗರಿಷ್ಟ ಬೆಲೆ ಎಷ್ಟು?

ಮೇ, 2008 ರಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಅತ್ಯುತ್ತಮ ಸೋನಾ ಮಸೂರಿ ಅಕ್ಕಿ ಒಂದು ಕಿಲೋಗೆ ಗರಿಷ್ಟ ಚಿಲ್ಲರೆ ಬೆಲೆ ರೂ.25/- ಆಗಿತ್ತು.

ಆ) ಜನವರಿ 2009ರಲ್ಲಿ ಅದೇ ಅತ್ಯುತ್ತಮ ಸೋನಾ ಮಸೂರಿ ಅಕ್ಕಿಗೆ ಒಂದು ಕಿಲೋಗೆ ಇದ್ದ ಗರಿಷ್ಟ ಬೆಲೆ ಎಷ್ಟು?

ಜನವರಿ 2009ರಲ್ಲಿ ಅದೇ ಅತ್ಯುತ್ತಮ ಸೋನಾ ಮಸೂರಿ ಅಕ್ಕಿಗೆ ಕಿಲೋಗೆ ಗರಿಷ್ಟ ಚಿಲ್ಲರೆ ಬೆಲೆ ರೂ.41/- ಆಗಿರುತ್ತದೆ.

ಇ) ಮೇ 2008 ಮತ್ತು ಜನವರಿ 2009 ರ ನಡುವೆ ಈ ಅಕ್ಕಿಯ ಜಿಲ್ಲೆಯಲ್ಲಾದ ವ್ಯತ್ಯಾಸ ಎಷ್ಟು? ಈ ವ್ಯತ್ಯಾಸದ ಶೇಕಡಾ ಪ್ರಮಾಣ ಎಷ್ಟು?

ಮೇ 2008 ಮತ್ತು ಜನವರಿ 2009 ರ ನಡುವೆ ಈ ಅಕ್ಕಿಯ ಬೆಲೆಯಲ್ಲಾದ ವ್ಯತ್ಯಾಸ ರೂ.16/- ಈ ವ್ಯತ್ಯಾಸದ ಪ್ರಮಾಣ ಶೇಕಡಾ 64ರಷ್ಟು.

ಈ) ಅಕ್ಕಿ ಬೆಲೆಯನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

2005–06 ರಿಂದ 2008–09 ರವರೆಗೆ ಕರ್ನಾಟಕ ರಾಜ್ಯದಲ್ಲಿ ಅಕ್ಕಿಯ ಉತ್ಪಾದನೆ ವಿವರಗಳು ಈ ಕೆಳಕಂಡಂತಿರುತ್ತವೆ. (ಕೃಷಿ ಇಲಾಖೆಯ ವರದಿಯಂತೆ).

ಕ್ರಮ ಸಂಖ್ಯೆ	ವರ್ಷ	ವಿಸ್ತೀರ್ಣ (ಲಕ್ಷ ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಲಕ್ಷ ಟನ್‌ಗಳಲ್ಲಿ)	ಇಳುವರಿ (ಒಂದು ಹೆಕ್ಟೇರ್‌ಗೆ ಕೆ.ಜಿ.ಯಂತೆ)
1	2005–06	14.85	39.99	2834
2	2006–07	13.95	34.46	2600

4) ರಾಜ್ಯಾದ್ಯಂತ ಲೆವಿ ಅಕ್ಕಿಯನ್ನು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸಾಮಾನ್ಯ ಶ್ರೇಣಿಯ ಭತ್ತ ಪ್ರತಿ ಕ್ವಿಂಟಾಲ್‌ಗೆ ರೂ.900/– ರಂತೆ ಹಾಗೂ ಎ ಶ್ರೇಣಿಯ ಭತ್ತಕ್ಕೆ ರೂ.930/– ರಂತೆ ಸಂಗ್ರಹಿಸಲು ಸಂಗ್ರಹಣಾ ಕೇಂದ್ರಗಳನ್ನು ತೆರೆಯಲಾಗಿದ್ದು ದಿನಾಂಕ:20–2–2009 ರವರೆಗೆ 85000 ಮೆ.ಟನ್.ಗಳ ಅಕ್ಕಿಯನ್ನು ಲೆವಿ ರೂಪದಲ್ಲಿ ಸಂಗ್ರಹಿಸಲಾಗಿದೆ.

5) ಅಕ್ಕಿಯ ಅಂತರ್‌ರಾಜ್ಯ ಸಾಗಾಣಿಕೆಯನ್ನು ನಿರ್ಬಂಧಿಸಲಾಗಿದೆ.

<u>ಅಕ್ಕಿಯ ಬೆಲೆಯ ಹೆಚ್ಚಳಕ್ಕೆ ಪ್ರಮುಖ ಕಾರಣಗಳು:–</u>

(I) ಅಕ್ಕಿ ಉತ್ಪಾದನೆಯಲ್ಲಿ ಇಳಿಮುಖ.

(II) ಆರ್ಥಿಕ ಹಿಂಜರಿತ.

ಆನಾಸ. 44 ಡಿಆರ್.ಎ 2009.

(ಹೆಚ್. ಹಾಲಪ್ಪ)
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಸಚಿವರು.

<u>ಕರ್ನಾಟಕ ವಿಧಾನ ಸಭೆ</u>

390 ಶ್ರೀ ಆರ್.ಧ್ರುವನಾರಾಯಣ

ಅ) ಸಹಕಾರ ಇಲಾಖೆಯ ನಿಬಂಧನೆಗಳಿಗೊಳಪಟ್ಟು ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘಗಳ ಸಂಖ್ಯೆ ಎಷ್ಟು?

ರಾಜ್ಯದಲ್ಲಿ 28,645 ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

ಆ) ಈ ಸಹಕಾರ ಸಂಘಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗಗಳು ಹಾಗೂ ಮಹಿಳೆಯರಿಗೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆಯೇ?

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಎ(3) ಪ್ರಕಾರ ಆಡಳಿತ ಮಂಡಳಿಯಲ್ಲಿ ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಕ್ಕೆ

ಒಂದು ಸ್ಥಾನವನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಆದರೆ ಆಡಳಿತ ಮಂಡಳಿಯಲ್ಲಿ ಅಧ್ಯಕ್ಷರ ಸ್ಥಾನಕ್ಕೆ ಅಥವಾ ಉಪಾಧ್ಯಕ್ಷರ ಸ್ಥಾನಕ್ಕೆ ಮೀಸಲಾತಿ ಇರುವುದಿಲ್ಲ

ಇ) ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ಸದರಿ ವರ್ಗಗಳಿಗೆ ಮೀಸಲಾತಿ ಕಲ್ಪಿಸಿ ಅವರನ್ನು ಸಬಲೀಕರಣಗೊಳಿಸಿರುವಂತೆ ಸಹಕಾರ ಸಂಘಗಳಲ್ಲೂ ಸದರಿ ವರ್ಗಗಳಿಗೆ ಮೀಸಲಾತಿ ಕಲ್ಪಿಸಿಕೊಡುವಲ್ಲಿ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಈ ಅಂಶದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ಕ್ಕೆ ಸೂಕ್ತವೆಂದು ಕಂಡುಬಂದ ತಿದ್ದುಪಡಿಗಳನ್ನು ಸಲಹೆ ಮಾಡಲು ಶ್ರೀ ವಿಶ್ವನಾಥನ್ ಅವರ ಅಧ್ಯಕ್ಷತೆಯಲ್ಲಿ ದಿನಾಂಕ: 27.05.2005ರಲ್ಲಿ ತ್ರಿಸದಸ್ಯ ಸಮಿತಿಯನ್ನು ರಚಿಸಿತ್ತು. ಸದರಿ ಸಮಿತಿಯು ಈ ಬಗ್ಗೆ ಈಗಾಗಲೇ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು ವರದಿಯಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿಗಳಲ್ಲಿ ಇರುವಂತೆ ಸಹಕಾರ ಕ್ಷೇತ್ರದಲ್ಲಿ ಮೀಸಲಾತಿಯನ್ನು ನೀಡುವ ಅಗತ್ಯ ಕಂಡುಬರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತದೆ.

ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆಯ ಟಿಪ್ಪಣಿ ಸಂಖ್ಯೆ:ಡಿಪಿಎಎಲ್ 329 ಡಿ 1.2003 ದಿನಾಂಕ 07.06.2003ರಡಿ ಸಂವಿಧಾನದ ಪರಿಚ್ಛೇದ 12ರನ್ವಯ ಒಂದು ಸಹಕಾರ ಸಂಘವನ್ನು " **state** " ಎಂದು ಪರಿಗಣಿಸಲು ಬರುವುದಿಲ್ಲವೆಂದು, ಪರಂತು ಪಟ್ಟಣ ಪ್ರದೇಶದ ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್‌ಗಳು ಸಂವಿಧಾನದ ಪರಿಚ್ಛೇದ 12ರನ್ವಯ **"state"** ಎಂದು ಪರಿಗಣಿಸಲ್ಪಡುತ್ತವೆಂದು ತಿಳಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆಗಳು ಸ್ಥಳೀಯ ಸ್ವಯಂ ಸರ್ಕಾರ(local self government) ಆಗಿದ್ದು ರಾಜ್ಯ ಸರ್ಕಾರದಿಂದಲೇ ಪೂರ್ಣ ಧನಸಹಾಯ ಪಡೆಯುತ್ತವೆ. ಆದರೆ ಸಹಕಾರ ಸಂಸ್ಥೆಗಳು ಷೇರುಧನ ಪಾವತಿಸಿ ಸದಸ್ಯತ್ವ ಪಡೆಯುವ ಸದಸ್ಯರಿಗೆ ಮಾತ್ರ ಸೀಮಿತವಾಗಿದ್ದು ಅವುಗಳು ತಮ್ಮ ಬಂಡವಾಳವನ್ನು ರೂಢಿಸಿಕೊಳ್ಳುತ್ತವೆ. ಆದ್ದರಿಂದ, ಸಹಕಾರ ಸಂಸ್ಥೆಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹೋಲಿಸುವುದು ಸಮಂಜಸವಲ್ಲ, ಆದರೆ ಇದರ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಸಿಒ 38 ಸಿಎಲ್‌ಎಂ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

391 ಶ್ರೀ ಧ್ರುವನಾರಾಯಣ್ ಆರ್.

ಕೃಷಿ ಸಚಿವರು

ಅ) ರಾಜ್ಯದಲ್ಲಿ ರಸಗೊಬ್ಬರ ಬಿತ್ತನೆ ಬೀಜ ಹಾಗೂ ಸಸ್ಯ ಸಂರಕ್ಷಣೆ ರಾಸಾಯನಿಕಗಳ ಗುಣಮಟ್ಟ ನಿಯಂತ್ರಣಕ್ಕಾಗಿ ಯಾವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ರಾಜ್ಯದಲ್ಲಿ ರಸಗೊಬ್ಬರ, ಬಿತ್ತನೆ ಬೀಜ, ಹಾಗೂ ಸಸ್ಯ ಸಂರಕ್ಷಣಾ ರಸಾಯನಿಕಗಳ ಗುಣಮಟ್ಟವನ್ನು ನಿಯಂತ್ರಿಸಲು ಕೇಂದ್ರ ಸರ್ಕಾರ ರೂಪಿಸಿರುವ ರಸಗೊಬ್ಬರ, ಬೀಜ ಮತ್ತು ಸಸ್ಯ ಸಂರಕ್ಷಣಾ ಕಾಯ್ದೆಗಳ ಅನ್ವಯ ಇಲಾಖೆಯ ಅಧಿಕಾರಿಗಳನ್ನು ಪರಿವೀಕ್ಷಕರುಗಳಾಗಿ ಪ್ರಕಟಿಸಿದ್ದು ಇವರುಗಳು ಮಾರಾಟ ಕೇಂದ್ರಗಳಿಂದ ಮಾದರಿಗಳನ್ನು ಸಂಗ್ರಹಿಸಿ ಪ್ರಕಟಿತ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ.

ಆ) ಇವುಗಳ ಗುಣಮಟ್ಟ ನಿಯಂತ್ರಣಕ್ಕಾಗಿ ವಾರ್ಷಿಕ ಸರಾಸರಿ ಎಷ್ಟು ಮಾದರಿ ಸ್ಯಾಂಪಲ್‌ಗಳನ್ನು ಸರ್ಕಾರ ಪರೀಕ್ಷೆಗೆ ಒಳಪಡಿಸುತ್ತದೆ.

ವಾರ್ಷಿಕ ಸರಾಸರಿ 4842 ರಸಗೊಬ್ಬರ, 7400 ಬೀಜ, 4500 ಕೀಟನಾಶಕಗಳ ಮಾದರಿಗಳನ್ನು ವಿಶ್ಲೇಷಣೆಗೆ ಸರ್ಕಾರ ಒಳಪಡಿಸುತ್ತದೆ.

ಇ) ಕಳೆದ ಮೂರು ವರ್ಷಗಳಲ್ಲಿ ಕಳಪೆ ರಸಗೊಬ್ಬರ, ಬಿತ್ತನೆ ಬೀಜ ಹಾಗೂ ಸಸ್ಯ ಸಂರಕ್ಷಣೆ ರಾಸಾಯನಿಕಗಳನ್ನು ಪೂರೈಸಿದ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಕಂಡುಬಂದ ಕಳಪೆ / ಮೊಳಕೆ ಪ್ರಮಾಣ ಕಡಿಮೆ ಇರುವ ಮಾದರಿಗಳ ವಿವರಗಳು ಈ ಕೆಳಕಂಡಂತಿವೆ.

The details of samples found non/sub standard during the last three years are as follows

ವರ್ಷ	ರಸಗೊಬ್ಬರ	ಬೀಜ	ಸಸ್ಯ ಸಂರಕ್ಷಣೆ ಔಷಧಿ
2005–06	212	106	60
2006–07	. 264	108	63
2007–08	331	58	59

ಈ) ಪತ್ತೆ ಹಚ್ಚಿದ್ದಲ್ಲಿ ಅವುಗಳ ಉತ್ಪಾದಕರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ. (ವಿವರ ನೀಡುವುದು)

ಕಳಪೆ ಮಾದರಿಗಳಿಗೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ವಿವರಗಳು ಈ ಕೆಳಕಂಡಂತಿವೆ:

ಪರಿಕರ	ಕಾನೂನು ಕ್ರಮ & ಆಡಳಿತಾತ್ಮಕ ಕ್ರಮ
ರಸಗೊಬ್ಬರ	807
ಬೀಜಗಳು	272
ಸಸಂ ಔಷಧಿಗಳು	182

ಸಂಖ್ಯೆ: ಕೃತೋಇ/49/ಕೃಉಇ/2009

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

392 ಶ್ರೀ ಧ್ರುವನಾರಾಯಣ್ ಆರ್.

ಕೃಷಿ ಸಚಿವರು

ಅ) 2008–09ನೇ ಸಾಲಿನಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಅನುದಾನ ಎಷ್ಟು?

ರೂ.314.145 ಕೋಟಿ

ಆ) ಈ ಯೋಜನೆಯಲ್ಲಿ ನಿರ್ದೇಶಿಸಿರುವಂತೆ ಚಾಮರಾಜನಗರ ಜಿಲ್ಲೆಗೆ ಅನ್ವಯವಾಗುವಂತೆ "ಜಿಲ್ಲಾ ಕೃಷಿ ಯೋಜನೆ" (District Agriculture Plan) ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆಯೇ?

ಹೌದು "ಜಿಲ್ಲಾ ಕೃಷಿ ಕರಡು ಯೋಜನೆ"ಯ ರೂಪುರೇಷೆಗಳನ್ನು ಸಿದ್ಧಪಡಿಸಲಾಗಿದೆ.

ಇ) ಹಾಗಿದ್ದಲ್ಲಿ ಅದರ ಮುಖ್ಯಾಂಶಗಳೇನು?

ಜಿಲ್ಲಾ ಕೃಷಿ ಯೋಜನೆಯ ಪ್ರಮುಖ ಅಂಶ ಕೃಷಿ ಬೆಳವಣಿಗೆಯನ್ನು ಶೇ.4.5ರಷ್ಟು ಹೆಚ್ಚಿಸುವುದು, ಕೃಷಿಯಲ್ಲಿ ಪ್ರಮಾಣಿತ ಬೀಜ ಬಳಕೆ ಹಾಗೂ ಕೃಷಿ ಯಾಂತ್ರೀಕರಣವನ್ನು ಅಳವಡಿಸುವ ಮೂಲಕ ಕೃಷಿ ಉತ್ಪನ್ನಗಳ ಗುಣಮಟ್ಟ ಹಾಗೂ ಉತ್ಪಾದನೆಯನ್ನು ಹೆಚ್ಚಿಸುವುದು.

ಈ) 2008–09ರಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಸದರಿ ಯೋಜನೆಯಲ್ಲಿ ಕಾರ್ಯಗತಗೊಳಿಸಲಾದ ಬಹು ಮುಖ್ಯವಾದ ಕೃಷಿ ಚಟುವಟಿಕೆಗಳ ವಿವರಗಳೇನು?

RKVYಯೋಜನೆಯಡಿಲ್ಲಿ–

1) 2008–09ನೇ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮುಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಿದ ಪ್ರಮಾಣಿತ ಬಿತ್ತನೆ ಬೀಜಕ್ಕೆ ಸಹಾಯಧನ ನೀಡಲಾಗಿದೆ.
2) ಬೇಸಿಗೆ ಹಂಗಾಮಿನಲ್ಲಿ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಣೆಗೆ ಸಹಾಯಧನ

3) ಕೃಷಿ ಯಾಂತ್ರೀಕರಣ ಕಾರ್ಯಕ್ರಮಕ್ಕೆ ಸಹಾಯಧನ.

4) ರೈತರಿಗೆ ಆಧುನಿಕ ಕೃಷಿ ತಂತ್ರಜ್ಞಾನ ಕುರಿತು ತರಬೇತಿ

ಉ) ಈ ಯೋಜನೆ ಅನುಷ್ಠಾನಕ್ಕಾಗಿ ರಾಜ್ಯ ವಿವಿಧ ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನ ಎಷ್ಟು (ವಿವರ ನೀಡುವುದು)

ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಜಿಲ್ಲೆಗಳಿಗೆ ಒಟ್ಟು ಅನುದಾನ ರೂ.75.121 ಕೋಟಿಗಳು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ).

ಸಂಖ್ಯೆ:ಕೃತೋಇ/48/ಕೃಉಇ/2009.

ಕೃಷಿ ಸಚಿವರು.

ವಿಧಾನ ಸಭೆ ಪ್ರಶ್ನೆ ಸಂ : 392ಕ್ಕೆ ಅನುಬಂಧ

2008–09 ನೇ ಸಾಲಿನ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಜಿಲ್ಲಾವಾರು ಬಿಡುಗಡೆಯಾದ ಅನುದಾನದ ವಿವರ

ಕ್ರ.ಸಂ.	ಜಿಲ್ಲೆ	ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ)
1	ಬೆಂಗಳೂರು ನಗರ	19.152
2	ಬೆಂಗಳೂರು ಗ್ರಾಮಾಂತರ	25.182
3	ರಾಮನಗರ	103.782
4	ಕೋಲಾರ	75.032
5	ಚಿಕ್ಕಬಳ್ಳಾಪುರ	188.342
6	ತುಮಕೂರು	673.392
7	ಶಿವಮೊಗ್ಗ	249.51
8	ಚಿತ್ರದುರ್ಗ	183.8
9	ದಾವಣಗೆರೆ	316.992
10	ಮೈಸೂರು	232.52
11	ಚಾಮರಾಜನಗರ	167.42
12	ಮಂಡ್ಯ	215.07
13	ಕೊಡಗು	100.69
14	ಹಾಸನ	129.46
15	ಚಿಕ್ಕಮಗಳೂರು	160.52
16	ದಕ್ಷಿಣ ಕನ್ನಡ	35.67
17	ಉಡುಪಿ	25.69
18	ಧಾರವಾಡ	379.53

19	ಗದಗ	161.28
20	ಹಾವೇರಿ	218.22
21	ಉತ್ತರ ಕನ್ನಡ	127.36
22	ಬೆಳಗಾವಿ	485.33
23	ಬಿಜಾಪುರ	522.95
24	ಬಾಗಲಕೋಟೆ	364.90
25	ರಾಯಚೂರು	363.74
26	ಕೊಪ್ಪಳ	234.21
27	ಬಳ್ಳಾರಿ	502.96
28	ಗುಲ್ಬರ್ಗ	709.95
29	ಬೀದರ್	539.45
	ಒಟ್ಟು	7512.104

<u>ಕರ್ನಾಟಕ ವಿಧಾನ ಸಭೆ</u>

393 ಶ್ರೀ ಧ್ರುವನಾರಾಯಣ್ ಆರ್.

ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

ಅ) ರಾಜ್ಯದಲ್ಲಿರುವ ತೋಟಗಾರಿಕೆ ಇಲಾಖೆ ಸುಪರ್ದಿಗೆ ಒಳಪಡುವ ತೋಟಗಾರಿಕಾ ಫಾರ್ಮ್‌ಗಳ ಸಂಖ್ಯೆ ಎಷ್ಟು;

410

ಆ) ಈ ತೋಟಗಾರಿಕಾ ಕ್ಷೇತ್ರ / ಫಾರ್ಮ್‌ಗಳು ಯಾವುವು; ಅನುಬಂಧದಲ್ಲಿ ನೀಡಲಾಗಿದೆ

Given in Annexure

ಇ) ಈ ಎಲ್ಲಾ ತೋಟಗಾರಿಕಾ ಫಾರ್ಮ್‌ಗಳ ಒಟ್ಟು ವಿಸ್ತೀರ್ಣ ಎಷ್ಟು;

15732.29 ಎಕರೆಗಳು

15732.29 acres

ಈ) 2006–07, 2007–08 ಮತ್ತು 2008–09 ರಲ್ಲಿ ಈ ತೋಟಗಾರಿಕಾ ಫಾರ್ಮ್‌ಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಒಟ್ಟು ಹಣ ಎಷ್ಟು;

ಬಿಡುಗಡೆ ಮಾಡಲಾದ ಒಟ್ಟು ಹಣ ಈ ಕೆಳಗಿನಂತಿದೆ.

Amount released is given below

(ರೂ.ಲಕ್ಷಗಳಲ್ಲಿ)

2006–07	755.93
2007–08	478.89
2008–09	423.706

(ಫೆಬ್ರವರಿ 2009ರ ಅಂತ್ಯಕ್ಕೆ)	

ಉ) 2006–07, 2007–08 ಮತ್ತು 2008–09ರಲ್ಲಿ ಈ ತೋಟಗಾರಿಕಾ ಫಾರ್ಮ್‌ಗಳ ಉತ್ಪನ್ನಗಳ ಮಾರಾಟದಿಂದ ಸರ್ಕಾರಕ್ಕೆ ಸಂದಾಯವಾದ ಆದಾಯ ಎಷ್ಟು; (ವಿವರ ನೀಡುವುದು)?

ಸರ್ಕಾರಕ್ಕೆ ಸಂದಾಯವಾದ ಆದಾಯ ಈ ಕೆಳಗಿನಂತಿದೆ.

Revenue realized is as below

(ರೂ.ಲಕ್ಷಗಳಲ್ಲಿ)

2006–07	423.28
2007–08	424.70
2008–09 (ಜನವರಿ 2009ರ ಅಂತ್ಯಕ್ಕೆ)	423.08

ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

ಕರ್ನಾಟಕ ವಿಧಾನ ಸಭೆ

393 ಶ್ರೀ ಧ್ರುವನಾರಾಯಣ್ ಆರ್.
ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

ಅನುಬಂಧ

ರಾಜ್ಯದಲ್ಲಿರುವ ತೋಟಗಾರಿಕೆ ಫಾರ್ಮಗಳು

ಕ್ರ ಸಂ.	ಕ್ಷೇತ್ರ/ಸಸ್ಯಾಗಾರದ ಹೆಸರು	ತಾಲ್ಲೂಕು
	ಬೆಂಗಳೂರು ನಗರ	
1	ಹುಳಿಮಾವು ಕ್ಷೇತ್ರ	ಬೆಂಗಳೂರು ದಕ್ಷಿಣ
2	ಇಂದಿರಾನಗರ ಕ್ಷೇತ್ರ	ಬೆಂಗಳೂರು ಪೂರ್ವ
3	ಕನ್ನಮಂಗಲ ಕ್ಷೇತ್ರ	ಬೆಂಗಳೂರು ಪೂರ್ವ
4	ನಗರೂರು ಕ್ಷೇತ್ರ	ಬೆಂಗಳೂರು ಉತ್ತರ

	ಬೆಂಗಳೂರು ಗ್ರಾಮಾಂತರ	
5	ತಿಪ್ಪಗೊಂಡನಹಳ್ಳಿ ಕ್ಷೇತ್ರ	ನೆಲಮಂಗಲ
6	ಕಛೇರಿ ನರ್ಸರಿ	ನೆಲಮಂಗಲ
7	ಕೆ.ಪೂಜೇನಹಳ್ಳಿ ಕ್ಷೇತ್ರ	ದೇವನಹಳ್ಳಿ
8	ಕಛೇರಿ ನರ್ಸರಿ	ದೇವನಹಳ್ಳಿ
9	ದೊಡ್ಡ ಬಳ್ಳಾಪುರ ಕ್ಷೇತ್ರ	ದೊಡ್ಡಬಳ್ಳಾಪುರ
	ರಾಮನಗರ	
10	ಬಗಿನಿಗೆರೆ ಕಾವಲ್	ಮಾಗಡಿ
11	ಬೈರಮಂಗಲ	ರಾಮನಗರ
12	ರಾಮನಗರ ಕಛೇರಿ ಸಸ್ಯಾಗಾರ	ರಾಮನಗರ
13	ಕನಕಪುರ ಕ್ಷೇತ್ರ	ಕನಕಪುರ
14	ಕಛೇರಿ ನರ್ಸರಿ	ಚನ್ನಪಟ್ಟಣ
	ಕೋಲಾರ	
15	ಜಿಲ್ಲಾ ನರ್ಸರಿ	ಕೋಲಾರ
16	ಟಮಕ ತೋಟಗಾರಿಕೆ ಕ್ಷೇತ್ರ	ಕೋಲಾರ
17	ದೊಡ್ಡಶಿವಾರ ತೋಟಗಾರಿಕೆ ಕ್ಷೇತ್ರ	ಮಾಲೂರು
18	ಮಾಲೂರು ನರ್ಸರಿ	ಮಾಲೂರು
19	ಜೆ.ವಿ.ಕ್ಷೇತ್ರ	ಮುಳಬಾಗಿಲು
20	ಕಛೇರಿ ನರ್ಸರಿ	ಮುಳಬಾಗಿಲು
21	ಹೊಗಳಗೆರೆ ಕ್ಷೇತ್ರ	ಶ್ರೀನಿವಾಸಪುರ
22	ಕಛೇರಿ ನರ್ಸರಿ	ಬಂಗಾರಪೇಟೆ
23	ಚಿಂತಾಮಣಿ ನರ್ಸರಿ	ಚಿಂತಾಮಣಿ
24	ಮಾಡಿಕೆರೆ	ಚಿಂತಾಮಣಿ
25	ಚಿಕ್ಕಬಳ್ಳಾಪುರ ನರ್ಸರಿ	ಚಿಕ್ಕಬಳ್ಳಾಪುರ
26	ಪಿ ಆರ್ ಎಸ್ ಕ್ಷೇತ್ರ	ಚಿಕ್ಕಬಳ್ಳಾಪುರ
27	ಶಿಡ್ಲಘಟ್ಟ ನರ್ಸರಿ	ಶಿಡ್ಲಘಟ್ಟ
28	ಚಿಕ್ಕದಾಸರಹಳ್ಳಿ ಮಾವು ಕ್ಷೇತ್ರ	ಶಿಡ್ಲಘಟ್ಟ
29	ಚಿಕ್ಕದಾಸರಹಳ್ಳಿ ಗೋಡಂಬಿ ಕ್ಷೇತ್ರ	ಶಿಡ್ಲಘಟ್ಟ
30	ಪಸಪ್ಪಲೋಡು	ಗುಡಿಬಂಡೆ
31	ತುಮಕೂರು ಮಿಣಕನಗುರ್ಕಿ	ಗೌರಿಬಿದನೂರು
32	ಜಿಲ್ಲಾ ನರ್ಸರಿ	ತುಮಕೂರು
33	ನಿಡುವಳಲು ಕ್ಷೇತ್ರ	ತುಮಕೂರು

34	ಕಛೇರಿ ನರ್ಸರಿ	ಕುಣಿಗಲ್
35	ಆರ್.ಎಸ್.ಗುಡ್ಡ	ಕುಣಿಗಲ್
36	ಮಾರ್ಕೋನಹಳ್ಳಿ ಕ್ಷೇತ್ರ	ಕುಣಿಗಲ್
37	ಬಿಳಿದೇವಾಲಯ ಕ್ಷೇತ್ರ	ಕುಣಿಗಲ್
38	ಮಂಗಳ ಕ್ಷೇತ್ರ	ಕುಣಿಗಲ್
39	ರಾಜವಂತಿ ಕ್ಷೇತ್ರ	ಪಾವಗಡ
40	ಇಂದಿರಾ ಕ್ಷೇತ್ರ	ಮಧುಗಿರಿ
41	ಕಛೇರಿ ನರ್ಸರಿ	ಮಧುಗಿರಿ
42	ಜೆ.ಸಿ. ಪುರ ಕ್ಷೇತ್ರ	ಚಿಕ್ಕನಾಯಕನಹಳ್ಳಿ
43	ಧರ್ಮವೀರ ಕ್ಷೇತ್ರ, ಬೆಳ್ಳಾರ	ಚಿಕ್ಕನಾಯಕನಹಳ್ಳಿ
44	ಹೇರೂರು ಕ್ಷೇತ್ರ	ಗುಬ್ಬಿ
45	ಕಛೇರಿ ನರ್ಸರಿ	ಶಿರಾ
46	ಡಾ:ಎಂ.ಹೆಚ್.ಮರೀಗೌಡ ಕ್ಷೇತ್ರ, ದೊಡ್ಡಸಾಗ್ಗೆರೆ	ಕೊರಟಗೆರೆ
47	ಮಾದಿಹಳ್ಳಿ ಕ್ಷೇತ್ರ	ತುರುವೇಕೆರೆ
	ಚಿತ್ರದುರ್ಗ	
48	ಐಯನಹಳ್ಳಿ ಕ್ಷೇತ್ರ	ಚಿತ್ರದುರ್ಗ
49	ಕಛೇರಿ ನರ್ಸರಿ	ಚಿತ್ರದುರ್ಗ
50	ಟಿ.ಎನ್.ಕೆರೆ ಕ್ಷೇತ್ರ	ಚಿತ್ರದುರ್ಗ
51	ರಾಯಾಪುರ ಕ್ಷೇತ್ರ	ಮೊಳಕಾಲ್ಮೂರು
52	ವೇದಾವತಿ ಕ್ಷೇತ್ರ	ಹಿರಿಯೂರು
53	ಹಾಲುರಾಮೇಶ್ವರ ಕ್ಷೇತ್ರ	ಹೊಸದುರ್ಗ
54	ಮಹದೇವಪುರ ಕ್ಷೇತ್ರ	ಚಳ್ಳಕೆರೆ
	ದಾವಣಗೆರೆ	
55	ಆರ್.ಎಂ.ಸಿ.	ದಾವಣಗೆರೆ
56	ಕಛೇರಿ ನರ್ಸರಿ	ದಾವಣಗೆರೆ
57	ಕಛೇರಿ ನರ್ಸರಿ	ಹರಪನಹಳ್ಳಿ
58	ಕಛೇರಿ ನರ್ಸರಿ	ಹೊನ್ನಾಳಿ
59	ಕಛೇರಿ ನರ್ಸರಿ	ಜಗಳೂರು
60	ಬೇಲಿ ಮಲ್ಲೂರು ಕ್ಷೇತ್ರ	ಹೊನ್ನಾಳಿ
61	ತಾಳೆ ಕ್ಷೇತ್ರ	ಹೊನ್ನಾಳಿ
62	ಡಿ.ಎಲ್.ಡಿ.ಬಿ ಕ್ಷೇತ್ರ	ಹೊನ್ನಾಳಿ

	ಶಿವಮೊಗ್ಗ	
63	ಜಿಲ್ಲಾ ನರ್ಸರಿ	ಶಿವಮೊಗ್ಗ
64	ಡಿ.ಸಿ.ಕಾಂಪೌಂಡ್	ಶಿವಮೊಗ್ಗ
65	ತುಂಗಾ ಕ್ಷೇತ್ರ	ಶಿವಮೊಗ್ಗ
66	ಬಿ.ಆರ್.ಪಿ. ಕ್ಷೇತ್ರ	ಭದ್ರಾವತಿ
67	ಕೊಡಕಣಿ ಕ್ಷೇತ್ರ	ಸೊರಬ
68	ಕಾಳೇನಹಳ್ಳಿ ಕ್ಷೇತ್ರ	ಶಿಕಾರಿಪುರ
69	ಯಳವರಸಿ ಕ್ಷೇತ್ರ	ಸಾಗರ
70	ಕುರುವಳ್ಳಿ ಕ್ಷೇತ್ರ	ತೀರ್ಥಹಳ್ಳಿ
	ಮೈಸೂರು	
71	ನುಗು ಕ್ಷೇತ್ರ	ಹೆಚ್.ಡಿ,ಕೋಟೆ
72	ಸಸ್ಯಾಗಾರ	ಹೆಚ್.ಡಿ,ಕೋಟೆ
73	ಕಬಿನಿ ಕ್ಷೇತ್ರ	ಹೆಚ್.ಡಿ,ಕೋಟೆ
74	ಕಬಿನಿ ಜಲಾಶಯ	ಹೆಚ್.ಡಿ,ಕೋಟೆ
75	ತಾರಕ ಕ್ಷೇತ್ರ	ಹೆಚ್.ಡಿ,ಕೋಟೆ
76	ಬೀಮನಕೊಲ್ಲಿ ಕ್ಷೇತ್ರ	ಹೆಚ್.ಡಿ,ಕೋಟೆ
77	ಯಲಚನಹಳ್ಳಿ ಕ್ಷೇತ್ರ	ಮೈಸೂರು
78	ನಂಜನಗೂಡು ಕ್ಷೇತ್ರ	ಮೈಸೂರು
79	ಲಲಿತಮಹಲ್ ಮಾವಿನ ತೋಟ	ಮೈಸೂರು
80	ಕುಕ್ಕರಹಳ್ಳಿ ಕ್ಷೇತ್ರ	ಮೈಸೂರು
81	ರಂಗಸಮುದ್ರ ಕ್ಷೇತ್ರ ಹಾಗೂ ತರಬೇತಿ ಕೇಂದ್ರ	ಟಿ.ನರಸೀಪುರ
82	ಹುಣಸೂರು ಕ್ಷೇತ್ರ	ಹುಣಸೂರು
83	ನೆಲ್ಲಿಗೆರೆ ಕ್ಷೇತ್ರ	ನಂಜನಗೂಡು
84	ಊಟಿ ಕ್ಷೇತ್ರ, ತಮಿಳುನಾಡು	ಊಟಿ
	ಚಾಮರಾಜನಗರ	
85	ಗುಂಡಾಲ್ ಕ್ಷೇತ್ರ	ಕೊಳ್ಳೆಗಾಲ
86	ಬಿಳಿಗಿರಿರಂಗನ ಬೆಟ್ಟ	ಯಳಂದೂರು
87	ಗೋಡಂಬಿ ವಂಶಾವಳಿಕ್ಷೇತ್ರ, ಬಾಗಳಿ	ಚಾಮರಾಜನಗರ
88	ಸುವರ್ಣಾವತಿ ಕ್ಷೇತ್ರ	ಚಾಮರಾಜನಗರ
89	ಕಛೇರಿ ಸಸ್ಯಾಗಾರ	ಚಾಮರಾಜನಗರ
90	PWDಕ್ಷೇತ್ರ	ಚಾಮರಾಜನಗರ

	ಮಂಡ್ಯ	
91	ಮಂಡ್ಯ ಕ್ಷೇತ್ರ	ಮಂಡ್ಯ
92	ಜಿಲ್ಲಾ ಆಸ್ಪತ್ರೆ ತೋಟ	ಮಂಡ್ಯ
93	ಬೇಲೂರು ಕ್ಷೇತ್ರ	ಮಂಡ್ಯ
94	ಗೌಡಗೆರೆ ಕ್ಷೇತ್ರ	ಮಂಡ್ಯ
95	ಗಂಜಾಂ ಕ್ಷೇತ್ರ	ಶ್ರೀರಂಗಪಟ್ಟಣ
96	ಸರ್ಕಾರಿ ಹಣ್ಣಿನ ತೋಟ	ಶ್ರೀರಂಗಪಟ್ಟಣ
97	ಚಂದ್ರವನ ಕ್ಷೇತ್ರ	ಶ್ರೀರಂಗಪಟ್ಟಣ
98	ನುಗುವನ ಕ್ಷೇತ್ರ	ಶ್ರೀರಂಗಪಟ್ಟಣ
99	ಕಛೇರಿ ಸಸ್ಯಾಗಾರ	ಪಾಂಡವಪುರ
100	ಚಿಕ್ಕಅಂಕನಹಳ್ಳಿ ಕ್ಷೇತ್ರ	ಮದ್ದೂರು
101	ನವಿಲೆ ಕ್ಷೇತ್ರ	ಮದ್ದೂರು
102	ಮದ್ದೂರು ಕ್ಷೇತ್ರ	ಮದ್ದೂರು
103	ಪೂರಿಗಾಲಿ ಕ್ಷೇತ್ರ	ಮಳವಳ್ಳಿ
104	ಜವರನಹಳ್ಳಿ ಕ್ಷೇತ್ರ	ನಾಗಮಂಗಲ
105	ಕಛೇರಿ ಸಸ್ಯಾಗಾರ	ನಾಗಮಂಗಲ
106	ಮಲ್ಲಸಂದ್ರ ಕಾವಲ್ ಕ್ಷೇತ್ರ	ನಾಗಮಂಗಲ
107	ನಾಯಕನಹಳ್ಳಿ ಕ್ಷೇತ್ರ	ಕೆ.ಆರ್.ಪೇಟೆ
	ಹಾಸನ	
